ಸಂಪುಟ ೧೭ ಸಂಚಿಕೆ ೨

ಜೂನ್ 1995

ಬ್ಯಾಂಕಿಂಗ್ ಪ್ರಪಂಚ

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)

ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦ ೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ಬಜೆಟ್ 1995–96 : ಒಂದು ನೋಟ

ಬಿ. ಎಸ್. ಚಂದ್ರಶೇಖರ
ಭಾರತೀಯ ಸ್ಟೇಟ್ ಬ್ಯಾಂಕ್, ವಲಯ ಕಚೇರಿ, ಬೆಂಗಳೂರು

ಐದನೆಯ ಬಾರಿಗೆ ಬಜೆಟ್ ಮಂಡಿಸಿರುವ ಕೇಂದ್ರ ಹಣಕಾಸು ಸಚಿವ ಡಾ. ಮನಮೋಹನ ಸಿಂಗ್ ಒಂದು ವಿಕ್ರಮವನ್ನೇ ಸಾಧಿಸಿದ್ದಾರೆ. ಆದರೆ ನಾಲ್ಕು ವರ್ಷ ಹಿಂದೆ ತಮ್ಮ ಮೊದಲನೆಯ ಬಜೆಟ್ ಮಂಡಿಸಿದಾಗ ಅವರು ಆರಂಭಿಸಿದ ಉದಾರ ಆರ್ಥಿಕ ನೀತಿ ಎಷ್ಟರ ಮಟ್ಟಿಗೆ ಫಲ ನೀಡಿದೆ? ಆ ನೀತಿಯ ವೇಗ ಆವೇಗಗಳು ಈಗ ಉಳಿದಿವೆಯೆ ?

ಉದಾರ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ಈ ಹಿಂದಿನ ವರ್ಷಗಳಲ್ಲಿ ನಾಲ್ಕು ಬಜೆಟ್ಟುಗಳನ್ನು ಲೋಕಸಭೆಯಲ್ಲಿ ಮಂಡಿಸಿರುವ ಡಾ. ಮನಮೋಹನಸಿಂಗರು 95ರ ಮಾರ್ಚ್ 15ರಂದು ತಮ್ಮ ಐದನೇ ಬಜೆಟ್ಟನ್ನು ಲೋಕಸಭೆಯ ಮುಂದೆ ಇಡುವ ಮೂಲಕ ಒಂದು ವಿಕ್ರಮವನ್ನೇ ಸ್ಥಾಪಿಸಿದ್ದಾರೆ.ಈವರೆಗೆ ಕೇಂದ್ರಸರ್ಕಾರದ ಬೇರಾವ ಹಣಕಾಸು ಮಂತ್ರಿಯೂ ಸತತವಾಗಿ ಐದು ಬಜೆಟ್ಟುಗಳನ್ನು ಮಂಡಿಸಿರಲಿಲ್ಲ.

94–95ರ ಬಜೆಟ್ಟನ್ನು ಮಂಡಿಸುವಾಗ ಇಟ್ಟುಕೊಂಡಿದ್ದ ನಿರೀಕ್ಷೆಗಳು ಬಹುಮಟ್ಟಿಗೆ ಈಡೇರಿವೆಯೆಂಬುದನ್ನು ಗಮನಿಸಿದಾಗ ಸ್ವತಃ ಅರ್ಥಶಾಸ್ತ್ರಜ್ಞರಾಗಿದ್ದು ರಾಜಕೀಯ ಪ್ರವೇಶ ಮಾಡಿದ ಸಿಂಗರ ಸಾಧನೆ-ಯೋಜನೆಗಳ ಫಲ ಅದ್ಭುತವಾದುದೆನ್ನಬೇಕು. 94--95ರ ಸಾಲಿನಲ್ಲಿ ಶೇ. 5ರಷ್ಟು ಆರ್ಥಿಕ ಬೆಳವಣಿಗೆಯನ್ನು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆ ಸಂಪೂರ್ಣವಾಗಿ ಈಡೇರಿದ್ದು ತುಂಬ ಸಂತೋಷದ ಸಂಗತಿ. ದೇಶ ಅನೇಕ ವರ್ಷಗಳಿಂದ ಇಂಥ ಬೆಳವಣಿಗೆಯನ್ನು ಕಂಡಿರಲಿಲ್ಲ. ಕೈಗಾರಿಕೆಯ ಬೆಳವಣಿಗೆಯೂ ನಿರೀಕ್ಷಿಸಿದಂತೆ ಶೇ. 6ರಷ್ಟು. ಅಷ್ಟೇ ಅಲ್ಲ, ತೆರಿಗೆ ವಸೂಲಿಯಲ್ಲಿಯೂ ಅದ್ಭುತ ಸಾಧನೆ. ನೇರ ತೆರಿಗೆಗಳಿಂದ ನಿರೀಕ್ಷಿಸಿದ್ದ ಮೊತ್ತಕ್ಕಿಂತ 845 ಕೋಟಿ ರೂ. ಹೆಚ್ಚಿನ ಗಳಿಕೆ. ಸಿಂಗರು ಹೂಡಿದ ದಾಳದಲ್ಲಿ ಅವರು ಎಣಿಸಿದ ಗರಗಳೇ ಬೀಳುವಂತಾದದ್ದು ಕೇವಲ ಅದೃಷ್ಟವಿರಲಾರದಷ್ಟೇ ?

ಬಜೆಟ್ ಮಂಡನೆಗೆ ಮುಂಚೆ ಪೆಟ್ರೋಲಿಯಂ ಉತ್ಪನ್ನಗಳು, ಸಿಮೆಂಟ್ ಮುಂತಾದ ವಸ್ತುಗಳ ಬೆಲೆ ಏರಿಸಿ ಮುಂಗಡಪತ್ರದ ಮಹತ್ವವನ್ನು ಕಡಿಮೆಗೊಳಿಸದೆ ಇದ್ದದ್ದು ಈ ಬಾರಿಯ ವಿಶೇಷವಿದ್ದೀತು. ಕೇಂದ್ರ ಬಜೆಟ್ ಮಂಡನೆಯ ಮುನ್ನಾದಿನ ಸಾಮಾನ್ಯರಿಗೆ ಬಿಸಿ ತಟ್ಟದ ಹಾಗೆ ರೈಲ್ವೆ ಬಜೆಟ್ಟನ್ನು ಮಂಡಿಸಲಾಗಿತ್ತು. ಹೊಸ ಯೋಜನೆಗಳಿಗೆ ಸಾಕಷ್ಟು ಅವಕಾಶವಿಲ್ಲದಿರುವುದು ಈ ರೈಲ್ವೆ ಬಜೆಟ್ಟಿನ ಮುಖ್ಯಕೊರತೆ. ತೆರಿಗೆ ಹೆಚ್ಚಳವಿಲ್ಲದಿದ್ದರೆ ಸಂಪನ್ಮೂಲ ಒದಗಿಸಲು ಸಾಧ್ಯವಾಗದೆ ಹೋಗುವುದು ಸಹಜವೇ. ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸಬೇಕಾಗಿರುವಾಗ ತೆರಿಗೆ ಏರಿಕೆಯ ಬಗ್ಗೆ ಜಾಗರೂಕರಾಗಿರಬೇಕಾಗುತ್ತದೆ. ಅಂಥ ಜಾಗರೂಕತೆಯನ್ನಷ್ಟೆ ಪ್ರದರ್ಶಿಸಿದ ರೈಲ್ವೆ ಬಜೆಟ್ 'ಸಪ್ಪೆ' ಎನ್ನಿಸಿದರೆ ಆಶ್ಚರ್ಯವಲ್ಲ.

(ಮುಂದಿನ ಪುಟ ನೋಡಿ)

ಅದು ಹೇಗಾದರೂ ಇರಲಿ, ಈ ಬಾರಿಯ ಕೇಂದ್ರ ಆಯವ್ಯಯದ ಅಂಕಿಗಳನ್ನು ಸ್ಥೂಲವಾಗಿ ನೋಡೋಣ—

ಭಾರತದಲ್ಲಿ ಬಜೆಟ್ ಎಂದರೆ ಖೋತಾ ಬಜೆಟ್. ಬಹುಶಃ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳ ಬಜೆಟ್ಟಿನ ಪಾಡೂ ಇದೇ. ಆದರೆ ಈ ಖೋತಾದ ಬಾಯಿ ಹಿಗ್ಗಬಾರದಷ್ಟೆ ? ಕಳೆದ ಬಾರಿ ನಿರೀಕ್ಷಿಸಿದ್ದ ಕೊರತೆಗಿಂತ ಸ್ವಲ್ಪ ಮಾತ್ರವೇ ಅಧಿಕ ಕೊರತೆ ಉಂಟಾಗಿದ್ದರಿಂದ ಈ ಬಾರಿ ಅಂಥ ಅಸಮಾಧಾನವೇನಿಲ್ಲ. ಈ ಬಾರಿಯೂ 5,000 ಕೋಟಿ ರೂ.ಗಳ ಖೋತಾ ಬಜೆಟ್ !

1991ರಿಂದ ಕೇಂದ್ರ ಬಜೆಟ್ಟಿನ ದೃಷ್ಟಿ ಅರ್ಥನೀತಿಯ ಉದಾರೀಕರಣದ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತಿರುವುದು ತಿಳಿದ ವಿಷಯ. ಹಿಂದಿನ ಬಜೆಟ್ಟುಗಳಲ್ಲಿ ಇರಿಸಿಕೊಂಡಿದ್ದ ದೃಷ್ಟಿಯನ್ನೇ ಮತ್ತಷ್ಟು ಮುಂದುವರಿಸಿ ಈ ಬಜೆಟ್ಟನ್ನು ಮಂಡಿಸಿರುವಂತೆ ಕಂಡರೂ ಉದಾರೀಕರಣದ ತೀವ್ರತೆಯನ್ನು ಕಡಿಮೆಗೊಳಿಸಿರುವುದು ಈ ಬಾರಿಯ ಪ್ರಸ್ತಾವನೆಗಳಿಂದ ವ್ಯಕ್ತವಾಗುತ್ತದೆ. ಉದಾರೀಕರಣವು ಉಳ್ಳವರ ಮತ್ತು ಇಲ್ಲದವರ ನಡುವಣ ಅಂತರವನ್ನು ಹಿರಿದಾಗಿಸಿದೆ ಎಂಬ ಆರೋಪ ಸಿಂಗರ ಆರ್ಥಿಕ ನೀತಿಯ ಬಗ್ಗೆ ಇದ್ದೇ ಇತ್ತು. 'ಈ ಅರ್ಥನೀತಿ ಬಡವರಿಗೆ ಸಾಯುವ ಸ್ವಾತಂತ್ರ್ಯವನ್ನು ನೀಡುತ್ತದೆ' ಎಂಬ ಚಂದ್ರಶೇಖರ್ ಅವರ 'ವಿರೋಧೀ' ನಿಲುವು ಕಟುವೆನಿಸಿದರೂ ಸತ್ಯಕ್ಕೆ ತುಂಬ ದೂರವಿದ್ದಿರಲಾರದೆಂದು ಆಳುವವರೂ ತಿಳಿದಿರಬೇಕು. ಅಂತೆಯೇ ಈ ಬಾರಿಯ ಬಜೆಟ್ಟಿನಲ್ಲಿ ಬಡವರಿಗಾಗಿಯೂ ಕೆಲವು ಯೋಜನೆಗಳಿವೆ.

ಬಜೆಟ್ 95–96
(ಕೋಟಿ ರೂ.ಗಳಲ್ಲಿ)

ಆದಾಯ		
ತೆರಿಗೆ ಆದಾಯ	74,37,4	
ಇತರ ಆದಾಯ	26,413	
ಒಟ್ಟು ರೆವಿನ್ಯೂ ಆದಾಯ		1,00,787
ಸಾಲ ವಸೂಲಾತಿ	6,730	
ಇತರ ರಸೀತಿಗಳು	7,000	
ಸಾಲಗಳು, ಇತರ ಹೊಣೆ	52,634	
ಒಟ್ಟು ಬಂಡವಾಳ ಆದಾಯ		66,364
ಒಟ್ಟು ಆದಾಯ		1,67,151
ವೆಚ್ಚ		
ಯೋಜನಾ ವೆಚ್ಚ	48,500	
ಯೋಜನೇತರ ವೆಚ್ಚ	1,23,651	
ಒಟ್ಟು ವೆಚ್ಚ		1,72,151*

*ರೆವಿನ್ಯೂ ಖಾತೆಯಲ್ಲಿ ಖರ್ಚು 1,36,328
ಬಂಡವಾಳ ಖಾತೆಯಲ್ಲಿ ಖರ್ಚು 35,823

ಕೊರತೆ	
ರೆವಿನ್ಯೂ ಕೊರತೆ	35,541
ಕೋಶೀಯ ಕೊರತೆ	57,634
ಸಾಲಗಳು ಮತ್ತು ಇತರ ಹೊಣೆಗಳಿಂದ ತುಂಬಿಕೊಳ್ಳಬಹುದಾದ್ದು	52,634
ಬಜೆಟ್ ಕೊರತೆ	5,000

ಯೋಜನಾ ಮೊತ್ತ : ಬಜೆಟ್ ಪ್ರಸ್ತಾವಗಳು

ಈ ಬಾರಿ ಯೋಜನಾ ಮೊತ್ತವನ್ನು 70,141 ಕೋಟಿ ರೂ. ಗಳಿಂದ (94-95) 78,849 ಕೋಟಿ ರೂ.ಗಳಿಗೆ ಏರಿಸಲಾಗಿದೆ. ಅಂಕಿಗಳು ದೊಡ್ಡದಾಗಿ ಕಂಡರೂ ಹಣದುಬ್ಬರದ ಹಿನ್ನೆಲೆಯಲ್ಲಿ ವಾಸ್ತವ ಏರಿಕೆಯನ್ನು ಗಣಿಸಿದರೆ ನಿರಾಶೆಯಾಗುತ್ತದೆ. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ತಮ್ಮದೇ ಆದ ಸಂಪನ್ಮೂಲಗಳ ಮೂಲಕ ಸಾಕಷ್ಟು ಹಣವನ್ನು ಹೊಂದಿಸಿಕೊಳ್ಳಬೇಕೆಂಬ ನಿರೀಕ್ಷೆ ಎಷ್ಟರ ಮಟ್ಟಿಗೆ ಸಫಲವಾದೀತೋ ನೋಡಬೇಕು.

ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಯೋಜನಾ ನೆರವಿನ ಮೊತ್ತದಲ್ಲಿ ಹೆಚ್ಚಳವೇನೂ ಇಲ್ಲ. (ಕಳೆದ ವರ್ಷ 19,304 ಕೋಟಿ ರೂ. ಈ ವರ್ಷ 19,506 ಕೋಟಿ ರೂ.) ಹೀಗಾಗಿ ಅವು ಕೇಂದ್ರದ ಮೇಲಿನ ಅವಲಂಬನೆಯನ್ನು ಕಡಿಮೆಮಾಡಿಕೊಳ್ಳುವುದು ಅನಿವಾರ್ಯ.

ದುರ್ಬಲ ವರ್ಗದವರಿಗಾಗಿ ಗ್ರಾಮೀಣ ಅಧೋರಚನಾ ಸೌಲಭ್ಯನಿಧಿ ಸ್ಥಾಪನೆ, ಆಹಾರ ಮತ್ತು ರಸಗೊಬ್ಬರ ಸಹಾಯ ಧನಕ್ಕಾಗಿ 10,650 ಕೋಟಿ ರೂ. ನೆರವು, ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಘಟಕಗಳಿಗೆ ನೆರವು, ಗುಂಡಿಕೈಗಾರಿಕಾ ಕ್ಷೇತ್ರದಲ್ಲಿ ಮುಂದಿನ ಐದು ವರ್ಷಗಳಲ್ಲಿ 50 ಲಕ್ಷ ಘಟಕಗಳ ಸ್ಥಾಪನೆಯ ಗುರಿ, ಈಶಾನ್ಯ ರಾಜ್ಯಗಳ ಕೈಗಾರಿಕಾ ಆಧುನೀಕರಣ ಕ್ಕಾಗಿ ಈಶಾನ್ಯ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ಸಾರ್ವಜನಿಕ ಉದ್ದಿಮೆಗಳಿಂದ ಭಾಗಶಃ ಬಂಡವಾಳ ವಾಪಸು —ಇವು ಬಜೆಟ್ ಪ್ರಸ್ತಾವಗಳಲ್ಲಿ ಬಹು ಮುಖ್ಯವಾದವು. ಮತ್ತೆ ಕೆಲವು ಪ್ರಸ್ತಾವಗಳನ್ನು ಹೀಗೆ ಪಟ್ಟಿಮಾಡಬಹುದು :

(ವಿವರಕ್ಕೆ 5ನೇ ಪುಟ ನೋಡಿ)

ಒಂದೇ ರೂಪಾಯಿಯಲ್ಲಿ ಬಜೆಟ್ !

ಮೂಲಗಳು		ಖರ್ಚು	
ದೇಶೀಯ ಸಾಲ	24 ಪೈಸೆ	ರಾಜ್ಯಗಳ ಪಾಲಿನ ತೆರಿಗೆ/ಶುಲ್ಕ	15 ಪೈಸೆ
ಅಬಕಾರಿ (ಎಕ್ಸೈಸ್) ಶುಲ್ಕ	21 "	ಕೇಂದ್ರ ಯೋಜನೆಗಳಿಗೆ	14 "
ಆಮದು (ಕಸ್ಟಮ್ಸ್) ಶುಲ್ಕ	15 "	ರಕ್ಷಣಾ ವೆಚ್ಚ	13 "
ತೆರಿಗೆಯೇತರ ಕಂದಾಯ	13 "	ರಾಜ್ಯಗಳ ಯೋಜನಾ ವೆಚ್ಚ	10 "
ಕಂಪನಿ ತೆರಿಗೆ	8 "	ಯೋಜನಾ ವೆಚ್ಚ	10 "
ವರಮಾನ ತೆರಿಗೆ	7 "	ರಾಜ್ಯಗಳಿಗೆ ಸಬ್ಸಿಡಿ	6 "
ಬಂಡವಾಳ ವರಮಾನ	7 "	ಬಡ್ಡಿ	26 "
ವಿದೇಶಿ ಸಾಲ/RBI	4 "	ಇತರ	6 "
ಇತರ	1 "		
	100 ಪೈಸೆ		100 ಪೈಸೆ

1 ಆಮದು ಸುಂಕದ ಗರಿಷ್ಠ ದರವನ್ನು ಶೇ. 65ರಿಂದ ಶೇ. 50ಕ್ಕೆ ಇಳಿಸಿರುವುದು,

2 ಸಣ್ಣ ಕೈಗಾರಿಕಾ ಘಟಕಗಳ ಎಕ್ಸೈಸ್ ಸುಂಕ ರಿಯಾಯ್ತಿ ಮಿತಿ ಏರಿಕೆ,

3 ಜೀವರಕ್ಷಕ ಔಷಧಗಳು ಹಾಗೂ ವೈದ್ಯಕೀಯ ಉಪಕರಣ, ವಾಹನ ಬಿಡಿಭಾಗ, ಹವಾನಿಯಂತ್ರಕಗಳು ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳ ಬೆಲೆ ಇಳಿತ,

4 ರಾಸಾಯನಿಕಗಳು, ಕಾಕಂಬಿ ಹಾಗೂ ಅಡುಗೆ ಅನಿಲಗಳಿಗೆ ಕಡಿಮೆ ತೆರಿಗೆ,

5 ವರಮಾನ ತೆರಿಗೆ ಮಿತಿ ರೂ. 40,000/–ಕ್ಕೆ ಏರಿಕೆ, ಸಾಮಾನ್ಯ ಉಳಿತಾಯಕ್ಕೆ ಉತ್ತೇಜನ ನೀಡಲು ವರಮಾನ ತೆರಿಗೆ ಸೆಕ್ಷನ್ 80 ಅಡಿಯಲ್ಲಿ ತೆರಿಗೆ ವಿನಾಯ್ತಿ ರೂ. 13,000ಕ್ಕೆ ಏರಿಕೆ,

6 ಸಾಮಾನ್ಯ ಜನಬಳಕೆ ವಸ್ತುಗಳ ಮೇಲೆ ಕಡಿಮೆ ತೆರಿಗೆ, ಜವಳಿ, ಪ್ಲಾಸ್ಟಿಕ್, ಸೌಂದರ್ಯಸಾಧನ, ಆಡಿಯೋ–ವಿಡಿಯೋ ಸುರುಳಿ, ಕಾಗದ, ತಂಪು ಪಾನೀಯ ಅಗ್ಗ,

7 ದುರ್ಬಲ ವರ್ಗಗಳಿಗಾಗಿ ಹೊಸ ಯೋಜನೆಗಳು,

8 ಮೂಲಭೂತ ವಲಯಕ್ಕೆ ಐದು ವರ್ಷ ತೆರಿಗೆ ರಜೆ,

9 ನಬಾರ್ಡ್‌ನಲ್ಲಿ 2,000 ಕೋಟಿ ರೂ.ಗಳ ಗ್ರಾಮೀಣ ಅಧೋರಚನೆ ಅಭಿವೃದ್ಧಿ ನಿಧಿ ಸ್ಥಾಪನೆ ; ಈಶಾನ್ಯ ಅಭಿವೃದ್ಧಿ ಬ್ಯಾಂಕ್ ಸ್ಥಾಪನೆ.

10 ಬ್ಯಾಂಕ್ ಸ್ಥಿರ ಠೇವಣಿ ಮೇಲಣ ಆದಾಯದಿಂದ ಕಂಪನಿಗಳಿಗೆ ಶೇ. 20, ವ್ಯಕ್ತಿಗಳಿಗೆ ಶೇ. 10 ನೇರ ತೆರಿಗೆ ಕಳೆತ.

ವರಮಾನ ತೆರಿಗೆ

ವ್ಯಕ್ತಿಗತ ವರಮಾನ ತೆರಿಗೆ ವಿನಾಯಿತಿ ಮಿತಿಯನ್ನು 35 ಸಾವಿರದಿಂದ 40 ಸಾವಿರ ರೂ.ಗಳಿಗೆ ಮತ್ತು ಉಳಿತಾಯಕ್ಕೆ ಪ್ರೋತ್ಸಾಹ ನೀಡಲು ವರಮಾನ ತೆರಿಗೆ ಅಧಿನಿಯಮದ ಸೆಕ್ಷನ್ 80L ಅಡಿಯಲ್ಲಿ ನೀಡುವ ತೆರಿಗೆ ವಿನಾಯಿತಿಯನ್ನು 10 ಸಾವಿರದಿಂದ 13 ಸಾವಿರಕ್ಕೆ ಏರಿಸಿರುವುದು ನೇರ ತೆರಿಗೆಗಳಲ್ಲಿ ಮಾಡಿರುವ 'ಪ್ರಮುಖ' ಮಾರ್ಪಾಡುಗಳು. ಈ ಮಾರ್ಪಾಡುಗಳಿಂದ ವೇತನದಾರರು ತುಷ್ಟರಾಗಿಲ್ಲ.ಅವರಿಗೆ ಆದಾಯ ತೆರಿಗೆಯಲ್ಲಿ ಉಂಟಾಗುವ ಕಡಿತ ಗರಿಷ್ಠ 1,000 ರೂ. ಮಾತ್ರ. ಏರುತ್ತಿರುವ ಬೆಲೆಗಳಲ್ಲಿ ಈ ರಿಯಾಯಿತಿ ಸಾಕೆನಿಸದಿರುವುದು ಸಹಜ.

ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಪರಿಣಾಮ

ಬ್ಯಾಂಕಿಂಗ್ ಕ್ಷೇತ್ರವು ಕಳೆದ ಎರಡು ಬಜೆಟ್‌ಗಳಲ್ಲಿ ಹೆಚ್ಚಿನ ಗಮನ ಸೆಳೆದಿತ್ತು. ಬಂಡವಾಳ ನೆರವು, ಗ್ರಾಮೀಣ ಬ್ಯಾಂಕುಗಳನ್ನು ಬಲಪಡಿಸಲು ವಿಶೇಷ ಯೋಜನೆ ಹಾಗೂ ತುಂಬ ಕಾತರದಿಂದ ನಿರೀಕ್ಷಿಸಲಾಗಿದ್ದ ಬ್ಯಾಂಕ್ ಸಾಲ ವಸೂಲಾತಿ ನ್ಯಾಯಾಧಿಕರಣಗಳ ಸ್ಥಾಪನೆ ಇಂಥ ವಿಷಯಗಳನ್ನು ಕಳೆದ ಬಜೆಟ್ ಒಳಗೊಂಡಿತ್ತು. ಈ ಬಾರಿ ಬ್ಯಾಂಕಿಂಗ್‌ಗೆ ಸಂಬಂಧಿಸಿದಂತೆ ಅಂಥ ಸಂಗತಿಗಳೇನಿಲ್ಲ. ಗ್ರಾಮೀಣ ಬ್ಯಾಂಕುಗಳ ಸ್ಥಿತಿ ಶೋಚನೀಯವಾಗಿಯೇ ಮುಂದುವರಿದಿದೆಯಾದರೂ ವಾಣಿಜ್ಯಕ್ಷೇತ್ರದ ಬ್ಯಾಂಕುಗಳ ಸ್ಥಿತಿ ಸಾಕಷ್ಟು ಸುಧಾರಿಸಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಒಂದು ರೀತಿಯ ಸ್ಥಿರತೆ ಒದಗಿದಂತಾಗಿದೆ. ಆದ್ದರಿಂದ ಈ ಕ್ಷೇತ್ರದ ಬಗ್ಗೆ ಬಜೆಟ್ ಆತಂಕ ತಳೆಯದಿದ್ದುದು ಸಮಂಜಸವೆನ್ನಬೇಕು.

ಆದರೂ ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಬಜೆಟ್‌ನ ವ್ಯಾಪಕ ಪರಿಣಾಮ ಉಂಟಾಗುವುದು ಸಹಜ.

ಗ್ರಾಮೀಣ ಪ್ರದೇಶಗಳಲ್ಲಿನ ಅಧೋರಚನೆಯ ಅಭಿವೃದ್ಧಿಗಾಗಿ ಸಾಲನೀಡಲು ನಬಾರ್ಡ್‌ನಿಂದ 2,000 ಕೋಟಿ ರೂ. ನಿಧಿ ಸ್ಥಾಪಿಸಲಾಗುವುದು. ಈ ನಿಧಿಯನ್ನು ಬ್ಯಾಂಕುಗಳಿಂದ ಒಟ್ಟುಗೂಡಿಸಿ ಬ್ಯಾಂಕುಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಖಾತರಿ

ನೀಡಲಾಗುವುದು. ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ನಿಗಮಕ್ಕೆ ಬ್ಯಾಂಕಿಂಗ್ ಕ್ಷೇತ್ರದಿಂದ 1,000 ಕೋಟಿ ರೂ. ನೆರವು ಘೋಷಿಸಲಾಗಿದೆ. ಇದನ್ನು ನಿಗಮ ಸಾಲನೀಡಿಕೆಗೆ ಬಳಸಿಕೊಳ್ಳಬಹುದು.

ಪರಿಶಿಷ್ಟ ಜಾತಿ, ಪಂಗಡಗಳ ಉದರಿ ಬೇಡಿಕೆಗಳನ್ನು ವಿಶೇಷ ರೀತಿಯಲ್ಲಿ ಪೂರೈಸಲು ಬ್ಯಾಂಕಿಂಗ್ ಕ್ಷೇತ್ರ 500 ಕೋಟಿ ರೂ. ಹೆಚ್ಚುವರಿ ಹಣವನ್ನು ತೆಗೆದಿರಿಸಬೇಕು. ಈ ಯೋಜನೆಗಳಿಂದ ಗ್ರಾಮೀಣ ಪ್ರದೇಶದ ಹಾಗೂ ದುರ್ಬಲ ವರ್ಗಗಳ ಗ್ರಾಹಕರಿಗೆ ಬ್ಯಾಂಕುಗಳ ಉದರಿ ನೆರವು ಸುಲಭವಾಗಿ ದೊರೆಯುತ್ತದೆ. 'ಉದಾರೀಕರಣ' ಎಂದ ಮಾತ್ರಕ್ಕೆ ಬ್ಯಾಂಕುಗಳು ಸಾಮಾಜಿಕ ನ್ಯಾಯದ ತತ್ತ್ವವನ್ನು ಮರೆಯುವಂತಿಲ್ಲ ಎಂಬ ಸಂದೇಶ ಇಲ್ಲಿದ್ದೀತು.

ಬ್ಯಾಂಕಿನಲ್ಲಿಡಲಾದ ಸಾವಧಿ ಠೇವಣಿಗಳ ಮೇಲಣ ಬಡ್ಡಿ ವರಮಾನದ ಮೂಲದಲ್ಲಿಯೇ ಶೇ. 10ರಷ್ಟನ್ನು ಹಿಡಿದುಕೊಳ್ಳಲಾಗುವುದೆಂದು ಬಜೆಟ್ ಸೂಚಿಸಿದೆ. ದೇಶೀಯ ಕಂಪನಿಗಳಿಗೆ ಶೇ. 20ರ ದರದಲ್ಲಿ ತೆರಿಗೆಯನ್ನೂ ಅಧಿಭಾರವನ್ನೂ (ಸರ್ಚಾರ್ಜ್) ಮುರಿದುಕೊಳ್ಳಲಾಗುವುದು. ಪರಸ್ಪರ ನಿಧಿಗಳಲ್ಲಿ ತೊಡಗಿಸಲಾದ ಹಣದ ಮೇಲಣ ವರಮಾನದಲ್ಲಿ ವ್ಯಕ್ತಿಗಳಿಗೆ ಶೇ. 15ರಷ್ಟು ಹಾಗೂ ಕಂಪನಿಗಳಿಗೆ ಶೇ. 20ರಷ್ಟು ತೆರಿಗೆ ಹಿಡಿದುಕೊಳ್ಳಲಾಗುವುದು. ಬ್ಯಾಂಕ್ ಠೇವಣಿಗಳ ಮೇಲಣ ಬಡ್ಡಿ ಆದಾಯಕ್ಕೆ ಮೂಲದಲ್ಲಿ ತೆರಿಗೆ ಹಿಡಿಯುವುದರಿಂದ ಈ ವರೆಗೆ ಬ್ಯಾಂಕುಗಳಿಗೆ ಇದ್ದ ಅನುಕೂಲವೊಂದು ಇಲ್ಲದಂತಾದರೂ ಠೇವಣಿ ಸಂಗ್ರಹಣೆ ಸಮಸ್ಯೆಯಾಗಲಾರದು.

ಈಶಾನ್ಯ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಒಂದು ಹೊಸ ಯೋಜನೆ. ಈಶಾನ್ಯ ರಾಜ್ಯಗಳು ಕೈಗಾರಿಕಾರಂಗದಲ್ಲಿ ಹಿಂದೆ ಬಿದ್ದಿರುವ ಹಿನ್ನೆಲೆಯಲ್ಲಿ ಇಂಥ ಬ್ಯಾಂಕಿನ ಸ್ಥಾಪನೆಯಿಂದ ನಿರೀಕ್ಷಿಸುವುದು ಬಹಳವಿದ್ದರೂ ಅದಕ್ಕೆ ಅಗತ್ಯವಾಗುವ ಅಗಾಧ ಸಂಪನ್ಮೂಲವನ್ನು ಕೇಂದ್ರ ಭರಿಸಬಲ್ಲುದೇ ? ಎಂಬ ಪ್ರಶ್ನೆ ಎದುರಾಗುತ್ತದೆ, ಇನ್ನು ಇಂಥ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬವಾಗುವುದು ಇದ್ದೇ ಇದೆ.

ಕೈಗಾರಿಕಾ ಕ್ಷೇತ್ರಕ್ಕೆ ನೆರವು

ಕೈಗಾರಿಕಾರಂಗ ತುಂಬ ಉತ್ಸಾಹದಿಂದ ನಿರೀಕ್ಷಿಸುತ್ತಿದ್ದ ಬಜೆಟ್ ಉದ್ಯಮಿಗಳಿಗೆ ಕೊಂಚಮಟ್ಟಿನ ನಿರಾಶೆಯನ್ನೇ ತಂದಿದೆ. ಇನ್ನಷ್ಟು ಉದಾರೀಕರಣದ ನಿರೀಕ್ಷೆ ಹುಸಿಯಾಗಿದೆಯಾದರೂ ಉದಾರೀಕರಣದ ತೀವ್ರತೆ ಕಡಿಮೆಯಾಗುವುದು ಒಂದು ರೀತಿಯಲ್ಲಿ ಅಗತ್ಯವೇ ಆಗಿತ್ತು. ಗುಡಿಕೈಗಾರಿಕೆಗೆ ಉತ್ತೇಜನ ನೀಡುವುದಕ್ಕೆ ಈ ಬಜೆಟ್ ಮುಂದಾಗಿದೆ. ಮುಂದಿನ ಐದು ವರ್ಷಗಳಲ್ಲಿ 50 ಲಕ್ಷ ಗ್ರಾಮೀಣ ಗುಡಿಕೈಗಾರಿಕೆ ಸ್ಥಾಪನೆ ಮಾಡಬೇಕೆಂಬ ಪ್ರಸ್ತಾವ ಬಜೆಟ್ಟಿನಲ್ಲಿದೆ. ಆಧುನಿಕ ಪರಿಸರದಲ್ಲಿ ಗುಡಿಕೈಗಾರಿಕೆಗಳು ಎಷ್ಟುಕಾಲ ಜೀವಂತವಾಗಿರಲು ಸಾಧ್ಯ ಎಂಬ ಪ್ರಶ್ನೆ ಏಳಬಹುದಾದರೂ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಈ ರೀತಿಯ ಯೋಜನೆಗಳು ನೆರವಾಗುವುದು ನಿಶ್ಚಯ. ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಘಟಕಗಳಿಗೆ ಉದರಿ ಪೂರೈಸಲು ಖಾದಿ ಮತ್ತು ಗ್ರಾಮೋದ್ಯೋಗ ನಿಗಮಕ್ಕೆ ಬ್ಯಾಂಕಿಂಗ್ ವಲಯದಿಂದ 1,000 ಕೋಟಿ ರೂ. ನೆರವು ಒದಗಿಸಲಾಗುವುದು.

ಸಾರ್ವಜನಿಕ ಉದ್ದಿಮೆಗಳಿಂದ ಬಂಡವಾಳ ವಾಪಸು ತೆಗೆದುಕೊಳ್ಳುವ ವಿಷಯ ವಿವಾದಾತ್ಮಕ ಸಂಗತಿಯಾಗಿ ಪರಿಣಮಿಸಿದೆ. ಈ ಸಾಲಿನಲ್ಲಿ 7,300 ಕೋಟಿ ರೂ. ಬಂಡವಾಳವನ್ನು ಹಿಂದೆಗೆದುಕೊಳ್ಳುವ ಆಲೋಚನೆ ಇದೆ. ನಾಲ್ಕಾರು ದಶಕಗಳ ಪರಿಶ್ರಮದಿಂದ ಕಟ್ಟಿದ ಸರಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗಿಯವರಿಗೆ 'ಮಾರುವ' ಈ ಸುಲಭ ಕ್ರಿಯೆಗೆ ಕಾರ್ಮಿಕರಂಗದಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಬಜೆಟ್ ಖೋತಾ ಕಡಿಮೆಗೊಳಿಸಲು ಇಂಥ ಕ್ರಮಗಳು ಅಗತ್ಯವೇ ಎಂದು ಚಿಂತಿಸಬೇಕು. ಮೂಲಭೂತ ವಲಯಗಳ ಬಂಡವಾಳ ಹೂಡಿಕೆ ಮೇಲೆ (ಉದಾ : ಹೆದ್ದಾರಿ, ವಿಮಾನ ನಿಲ್ದಾಣ ಮುಂತಾದವುಗಳ ನಿರ್ಮಾಣ) ಐದು ವರ್ಷ ಕಾಲ ವರಮಾನ ತೆರಿಗೆ ವಿನಾಯಿತಿ ಘೋಷಿಸಿರುವುದು ಸ್ವಾಗತಾರ್ಹ. ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಇಂಬು ದೊರೆಯುತ್ತದೆ.

ಸಣ್ಣ ಕೈಗಾರಿಕೆಗಳ ಎಕ್ಸೈಸ್ ಸುಂಕ ರಿಯಾಯಿತಿ ಮಿತಿಯನ್ನ ಗಣನೀಯವಾಗಿ ಏರಿಸಿರುವುದು ಹಾಗೂ ಆಮದು ಸುಂಕದ ಗರಿಷ್ಠ ದರವನ್ನು ಶೇ. 65ರಿಂದ ಶೇ. 50ರಷ್ಟಕ್ಕೆ ಇಳಿಸಿರುವುದು —ಈ ಎರಡು ಕ್ರಮಗಳೂ ಸಣ್ಣಕೈಗಾರಿಕೆಗಳ ಚಟುವಟಿಕೆಗಳಿಗೆ ಉತ್ತೇಜನ ನೀಡುವಂಥವು. ಕೃತಕ ನೂಲು, ಕೈಗಾರಿಕಾ ರಾಸಾಯನಿಕಗಳು, ದ್ಯುತಿ ತಂತುಗಳು (Optic fibres), ಗಣಕ, ಗಣಕ ತಾಂತ್ರಿಕಾಂಶ, ಕಾಗದ, ಕೃಷಿ ಆದಾನಗಳು (Inputs), ಪಶು ಸಂಗೋಪನೆ ಮುಂತಾದ ವಿವಿಧ ರೀತಿಯ ಕೈಗಾರಿಕಾ ಸರಕುಗಳ ಮೇಲಿನ ಆಮದು ಸುಂಕಗಳ ಇಳಿತ ಮತ್ತು ಸುಂಕವ್ಯವಸ್ಥೆಯ ಸರಳೀಕರಣ, ಮಾಡ್‌ವಾಟ್ ಯೋಜನೆಯ ಉದಾರೀಕರಣ— ಇವು ಕೈಗಾರಿಕಾಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಜೆಟ್ಟಿನ ಕೆಲವು ಮುಖ್ಯ ಅಂಶಗಳು. ಸಿದ್ಧ ಚರ್ಮದ ಮೇಲಣ ರಫ್ತು ಸುಂಕವನ್ನು ಹಿಂದೆಗೆದುಕೊಂಡಿರುವುದು ಚರ್ಮೋತ್ಪನ್ನಗಳ ರಫ್ತಿಗೆ ನೆರವಾಗಬಹುದು.

ಬಂಡವಾಳ ಮಾರುಕಟ್ಟೆಗೆ ಸಂಬಂಧಿಸಿದ ಒಂದೆರಡು ಪ್ರಸ್ತಾಪಗಳಿವೆ. ವೆಂಚರ್ ಕ್ಯಾಪಿಟಲ್ (ಸಾಹಸೋದ್ಯಮ ಬಂಡವಾಳ) ನಿಧಿಗಳಿಗೆ ಉತ್ತೇಜನ ನೀಡುವುದು ಅವುಗಳಲ್ಲಿ ಮುಖ್ಯವಾದದ್ದು. ಈ ಮೊದಲೇ ತಿಳಿಸಿದಂತೆ ಪರಸ್ಪರ ನಿಧಿಗಳಲ್ಲಿ ಹೂಡಿದ ಹಣದ ವರಮಾನದಿಂದ ಮೂಲದಲ್ಲೇ ತೆರಿಗೆ ಹಿಡಿದುಕೊಳ್ಳಲಾಗುವುದು.

ನಿರ್ದಿಷ್ಟ ಯೋಜನೆಯೊಂದರಲ್ಲಿ ಒಂದು ಹಣಕಾಸು ವರ್ಷದಲ್ಲಿ 10,000 ರೂ.ಗಿಂತ ಅಧಿಕ ವರಮಾನವಿದ್ದರೆ ಮಾತ್ರ ಮೂಲ ದಿಂದ ತೆರಿಗೆ ಹಿಡಿದುಕೊಳ್ಳಲಾಗುವುದು. ಆದ್ದರಿಂದ ಈಗಾಗಲೇ ಆಕರ್ಷಣೆ ಕಳೆದುಕೊಂಡಿರುವ ಪರಸ್ಪರ ನಿಧಿಗಳು ಮತ್ತಷ್ಟು ದುರ್ಬಲವಾಗುವ ಅಪಾಯುವಂತೂ ಇಲ್ಲ.

ಬಂಡವಾಳ ಗಳಿಕೆ ತೆರಿಗೆಯನ್ನು (ಕ್ಯಾಪಿಟಲ್ ಗೇನ್ಸ್ ಟ್ಯಾಕ್ಸ್) ಲೆಕ್ಕಹಾಕುವಾಗ ಬೋನಸ್ ಷೇರುಗಳ ವೆಚ್ಚವನ್ನು ಲೆಕ್ಕಿಸುವ ಬಗ್ಗೆ ಕೊಂಚ ವಿವಾದವಿತ್ತು. ಇದೀಗ ಆ ಬೋನಸ್ ಷೇರುಗಳ ವೆಚ್ಚವನ್ನು 'ಶೂನ್ಯ'ವೆಂದು ಗಣಿಸಬೇಕೆಂದು ಬಜೆಟ್ ಸೂಚಿಸಿರು ವುದರಿಂದ ಅನೇಕರಿಗೆ ಅಸಮಾಧಾನವಾಗಿದೆಯಾದರೂ, ತೆರಿಗೆ ಲೆಕ್ಕಾಚಾರದ ವಿಧಾನದಲ್ಲಿದ್ದ ನ್ಯೂನತೆಯೊಂದನ್ನು ಸರಿಪಡಿಸ ಲಾಗಿದೆಯೆಂದು ಅರ್ಥಸಚಿವರು ಅಂಥವರನ್ನು ಸಮಾಧಾನ ಪಡಿಸಲು ವಿಫಲಯತ್ನ ನಡೆಸಿದಂತಿದೆ.

ಸಾಮಾಜಿಕ ಕಳಕಳಿ

ಕೃಷಿ, ಸಾಮಾಜಿಕ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಕುಟುಂಬಕಲ್ಯಾಣ, ಬಡತನ ನಿರ್ಮೂಲನೆ—ಹೀಗೆ ವಿವಿಧ ಕ್ಷೇತ್ರ ಗಳತ್ತಲೂ ಕಣ್ಣು ಹಾಯಿಸಿರುವ ಬಜೆಟ್—ಈ ಸರಕಾರ ಬಡವರಿಗೆ ಸಾಮಾಜಿಕ ನ್ಯಾಯ ದೊರಕಿಸಲು ಕಂಕಣಬದ್ಧ ವಾಗಿದೆ ಎಂದು ದಾಖಲಿಸಲು ಹೊರಟಂತೆ ತೋರುತ್ತದೆ. ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಹೆಚ್ಚು ಲಾಭದಾಯಕವಾಗುವ ತೋಟಗಾರಿಕೆ ಮುಂತಾದ ಯೋಜನೆಗಳಿಗೆ ಉತ್ತೇಜನ ನೀಡಲಾಗಿದೆ. ಸಹಕಾರಿ ಸಂಸ್ಥೆಗಳ ಪುನಶ್ಚೇತನ, ಮಹಿಳೆಯರ ಹಾಗೂ ದುರ್ಬಲ ವರ್ಗಗಳ ಸಹಕಾರಿ ಸಂಸ್ಥೆಗಳಿಗೆ ನೆರವು, ಕೃಷಿ ಮತ್ತು ಪಶುಸಂಗೋಪನೆ ಆದಾನಗಳ ಮೇಲಣ ಆಮದು ಸುಂಕ ಇಳಿಕೆ, ಮುಂತಾದ ಕ್ರಮಗಳಿಂದ ಕೃಷಿ ವಲಯ ಸುಧಾರಿಸುವುದೆಂದು ನಿರೀಕ್ಷಿಸಬೇಕು. ಆದರೂ ಕೃಷಿಯು ರಾಜ್ಯಕ್ಕೆ ಸಂಬಂಧಿಸಿದ ವಿಷಯವಾದ್ದರಿಂದ ರಾಜ್ಯಸರಕಾರಗಳ ಕೃಷಿನೀತಿಯ ಪಾತ್ರವೂ ಮಹತ್ವದ್ದಾಗಿರುತ್ತದೆ.

ಬಡವೃದ್ಧರಿಗೆ ಮಾಸಿಕ ವೃದ್ಧಾಪ್ಯ ವೇತನ, ಮನೆಯ ಅನ್ನ ಸಂಪಾದಕ ಮೃತನಾದರೆ 5,000 ರೂ. ಪರಿಹಾರ, ಬಡಮಹಿಳೆ ಯರಿಗೆ ಶಿಶುಜನನಪೂರ್ವ ಹಾಗೂ ಜನನೋತ್ತರ ಅವಧಿಯಲ್ಲಿ ಭತ್ಯೆ—ಈ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸೇರಿ ಹಣನೆರವು ನೀಡಬೇಕೆಂದೂ, ಪಂಚಾಯತಿರಾಜ್ ಸಂಸ್ಥೆ ಗಳ ಮೂಲಕ ರಾಜ್ಯಸರಕಾರಗಳು ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕೆಂದೂ ಬಜೆಟ್ ಶಿಫಾರಸುಮಾಡಿದೆ, ಈ ಯೋಜನೆಗಳಿಗೆ ಒಂದು ಸಾವಿರ ಕೋಟಿ ರೂ. ನೆರವು ಒದಗುತ್ತದೆ.

ಬಡವರು ವರ್ಷಕ್ಕೆ 70 ರೂ. ಪ್ರೀಮಿಯಂ ಪಾವತಿಮಾಡಿ 5,000 ರೂ.ಗಳ ಜೀವವಿಮಾ ರಕ್ಷಣೆಯನ್ನು ಪಡೆಯುವಂಥ ಯೋಜನೆಯೂ ಇದೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳು ತಲಾ ಶೇ. 25ರಷ್ಟು ಪ್ರೀಮಿಯಂ ಭರಿಸುತ್ತವೆ. ಜೀತಮುಕ್ತರಿಗೆ ಸುಲಭ ಬೆಲೆಯ ಮನೆಗಳು (10 ಲಕ್ಷ ಮನೆಗಳು) ಹಾಗೂ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ... ಇಂತಹ ಹಲವಾರು ಕಾರ್ಯ ಕ್ರಮಗಳು ಹಿಂದುಳಿದವರ ಹಿತವನ್ನು ಗಮನದಲ್ಲಿರಿಸಿ ರೂಪಿ ಸಲ್ಪಟ್ಟಿವೆ.

ಸುಧಾರಣೆಯತ್ತ ಬೊಟ್ಟು

ಉದಾರೀಕರಣ ನೀತಿಯನ್ನೇ ಮುಂದುವರಿಸಿಕೊಂಡು ಹೋಗಿ ದ್ದರೂ ಹಣದುಬ್ಬರ ನಿಯಂತ್ರಣ, ದುರ್ಬಲವರ್ಗಗಳಿಗೆ ನ್ಯಾಯ ದೊರಕಿಸುವ ಮತ್ತು ಗ್ರಾಮೀಣ ಮೂಲ ಸೌಲಭ್ಯಗಳನ್ನು ಉತ್ತಮಪಡಿಸುವ ಕೆಲವು ಮೂಲಭೂತ ಸಮಸ್ಯೆಗಳತ್ತ ಗಮನ ಹರಿಸಿರುವುದು ಈ ಬಜೆಟ್ಟಿನ ಉತ್ತಮಾಂಶಗಳು. ಬಜೆಟ್ ಎಂಬುದು ಕೇಂದ್ರದ ಆದಾಯ ಖರ್ಚುಗಳನ್ನು ಸರಿದೂಗಿಸುವ ಒಂದು ಸರ್ಕಸ್. ಆದಾಯಕ್ಕೂ ಖರ್ಚಿಗೂ ತಾಳೆಯಾಗದಿ ದ್ದಾಗ ಕೊರತೆಯನ್ನು ತುಂಬುವುದು ಹೇಗೆ? ಕೊರತೆಯೇ ದೋಷವಲ್ಲ. ಕೆಲವು ಸಂದರ್ಭಗಳಲ್ಲಿ ಅಭಿವೃದ್ಧಿ ಯೋಜನೆ ಗಳ ವೆಚ್ಚ ಭರಿಸಲು ಕೊರತೆಯೇ ಒಂದು ಸಾಧನವಾಗುವು ದೆಂದರೆ ವಿಚಿತ್ರವೆನಿಸಬಹುದಾದರೂ ನಿಜ. ಈ ಸಾಲಿನ ಬಜೆಟ್‌ನಲ್ಲಿ ಕೊರತೆ ಕಡಿಮೆಗೊಳಿಸಲು ಬಳಸಿರುವ ಎರಡು ಮಾರ್ಗಗಳು ಅಪಾಯಕರವೆನಿಸೀತು. ಸರಕಾರೀ ಉದ್ಯಮಗಳ ಬಂಡವಾಳವನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುವುದು ಹಾಗೂ ಸರಕಾರೀ ಸಾಲಗಳು. ಇವುಗಳಲ್ಲಿ ಮೊದಲನೆಯದು ಅರ್ಥವ್ಯವಸ್ಥೆಯನ್ನು ಮತ್ತಷ್ಟು ತೆರೆಯುವ ಕ್ರಮ ಎಂದು ಸಮರ್ಥಿಸಲು ಸಾಧ್ಯವಾದರೂ ಈಗಾಗಲೇ ಸಾಲದ ಬಲೆಯಲ್ಲಿ ಸಿಕ್ಕಿರುವ ಕೇಂದ್ರವು ಮತ್ತಷ್ಟು ಸಾಲ ಎತ್ತಬೇಕೆ? ಎಂಬ ಪ್ರಶ್ನೆ ಹೆಡೆಯೆತ್ತಿ ನಿಲ್ಲುತ್ತದೆ. ಸರಕಾರದ ಸಾಲ, ಸಾಲದ ಮೇಲಣ ಬಡ್ಡಿ—ಇವು ಕಡಿಮೆಯಾಗುವ ಯಾವ ಸೂಚನೆಯೂ ಇಲ್ಲ.

ಅರ್ಥವ್ಯವಸ್ಥೆಯಲ್ಲಿನ ಅರೆಕೊರೆಗಳನ್ನು, ಏರುಪೇರುಗಳನ್ನು ಸರಿಪಡಿಸುವ ಸಾಧನವನ್ನಾಗಿಯೂ ಬಜೆಟ್ಟನ್ನು ನೋಡಬಹುದು. ಉದಾಹರಣೆಗೆ—ಹಣದುಬ್ಬರದಿಂದ ಬೆಲೆಗಳು ಏರಿ ಅರ್ಥವ್ಯವಸ್ಥೆ ಯಲ್ಲಿ ಬೇರೆ ಬೇರೆ ವರ್ಗಗಳ ನಡುವೆ ಅಂತರ ಹೆಚ್ಚಾಗು ತ್ತಿರುತ್ತದೆ. ಬೆಲೆ ಏರಿಕೆಯ ಪರಿಣಾಮ ಎಲ್ಲ ವರ್ಗಗಳ ಮೇಲೂ ಒಂದೇ ಆಗಿರುವುದಿಲ್ಲವಷ್ಟೆ? ಆರ್ಥಿಕವಾಗಿ ದುರ್ಬಲರಾದವರ ಆದಾಯ ಕಡಿಮೆಯಾಗುತ್ತ ಧನಿಕರ ಜೇಬು ತುಂಬಿಕೊಳ್ಳುವುದು ಹಣದುಬ್ಬರದ ಬಹುದೊಡ್ಡ ದುಷ್ಪರಿಣಾಮ. ಈ ಅಂತರ ಹೋಗಲಾಡಿಸಲು ಬಜೆಟ್ ಏನಾದರೂ ಮಾಡಬೇಕಾಗುತ್ತದೆ. ಕೈಗಾರಿಕೆಗಳಿಗೆ ದೊರೆಯುವ ಸುಂಕ/ತೆರಿಗೆ ರಿಯಾಯ್ತಿಗಳು ಶ್ರೀ ಸಾಮಾನ್ಯನನ್ನು ತಲುಪುವುದಿಲ್ಲವೆಂಬ ಅರ್ಥಪೂರ್ಣ ಆಪಾದನೆ

(7ನೇ ಪುಟ ನೋಡಿ)

ಭಾರತೀಯ ಬ್ಯಾಂಕುಗಳು ಉಳಿಯಲು ಸಾಧ್ಯವೆ?

ಗುರುರಾಜ ಹ. ಮುತಾಲೀಕ ದೇಸಾಯಿ
ಭಾರತೀಯ ಸ್ಟೇಟ್ ಬ್ಯಾಂಕ್, ವಲಯ ಕಚೇರಿ, ಹುಬ್ಬಳ್ಳಿ

ಬ್ಯಾಂಕು ಚಿನ್ನದ ಹಾಲು ಕರೆಯುವ ಕಾಮಧೇನು ಎಂಬ ಭಾವನೆಯಿಂದ ಅದರ ಕೆಚ್ಚಲನ್ನೇ ಕೊಯ್ಯುವ ಪ್ರಯತ್ನ ಮಾಡುತ್ತಿದ್ದ ಕಾಲವೀಗ ಕಳೆದುಹೋಯಿತು. ಬಗೆಬಗೆಯ ಆಧಿವ್ಯಾಧಿಗಳಿಗೆ ಒಳಗಾದ ಈ ಬಡಗೋವನ್ನು ಈಗ ಬದುಕಿಸುವುದು ಹೇಗೆ?

ಬ್ಯಾಂಕು ಅಂದರೆ ಹಣದ ಟ್ಯಾಂಕು ಎಂದು ಕರೆಯುವ ಕಾಲ ಈಗ ಇಲ್ಲ. ಇಂದು ಬ್ಯಾಂಕು ಕೇವಲ ಹಣದ ಟ್ಯಾಂಕು ಆಗಿರದೆ ವಿವಿಧ ಸೇವೆಗಳಿಂದ ಕೂಡಿದ ಸಂಸ್ಥೆಯಾಗಿದೆ.

ಭಾರತದ ಅರ್ಥವ್ಯವಸ್ಥೆಯ ಜೀವನಾಡಿ ಬ್ಯಾಂಕಿಂಗ್. ಭಾರತೀಯ ಬ್ಯಾಂಕುಗಳಲ್ಲಿನ ಕೊರತೆಗಳನ್ನು ನೀಗಿಸಲು ಮತ್ತು ಹೊಸತನವನ್ನು ತರಲೋಸುಗ ಜುಲೈ 19, 1969ರಂದು ಭಾರತದ 14 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ರಾಷ್ಟ್ರೀಕರಣದ ಅನಂತರ ಭಾರತೀಯ ಬ್ಯಾಂಕುಗಳ ಸ್ವರೂಪವೇ ಬದಲಾಯಿತು. ಇಂದು ಭಾರತದಲ್ಲಿರುವ ಬ್ಯಾಂಕುಗಳ ಶಾಖಾ ಜಾಲ ಬೇರೆ ಯಾವ ದೇಶದಲ್ಲೂ ಕಾಣಲು ಸಿಗದು. ಇಂದು ಬ್ಯಾಂಕಿಂಗ್ ಸೇವೆ ದೇಶದ ಮೂಲೆ ಮೂಲೆಗಳಲ್ಲೂ ಲಭ್ಯ. ಕೆಲವೊಂದು ಪ್ರತಿಷ್ಠಿತ ವರ್ಗಕ್ಕಷ್ಟೇ ಮೀಸಲಾಗಿದ್ದ ಬ್ಯಾಂಕಿಂಗ್ ಇಂದು ಸಾಮೂಹಿಕ ಬ್ಯಾಂಕಿಂಗ್ ಆಗಿ ಬದಲಾವಣೆಗೊಂಡಿದೆ. ನಮ್ಮಲ್ಲಿ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು — ಹೀಗೆ ವಿವಿಧ ರೀತಿಯ ಬ್ಯಾಂಕುಗಳಿವೆ.

ಬ್ಯಾಂಕಿಂಗಿನಲ್ಲಿ ಬದಲಾವಣೆಗಳನ್ನು ತರಲು ಇದುವರೆಗೆ ಒಟ್ಟು 20 ಬ್ಯಾಂಕುಗಳ ರಾಷ್ಟ್ರೀಕರಣಗೊಳಿಸಲಾಗಿದೆ. ಸುಮಾರು ಬದಲಾವಣೆಗಳ ನಂತರವೂ ಇಂದು ಭಾರತೀಯ ಬ್ಯಾಂಕುಗಳ ಉಳಿವು-ಅಳಿವಿನ ಬಗೆಗೆ ಕೂಗು ಎದ್ದಿದೆ. ಭಾರತೀಯ ಬ್ಯಾಂಕುಗಳು ಉಳಿಯಲು ಸಾಧ್ಯವೆ? ಈ ಪ್ರಶ್ನೆ ಉದ್ಭವಿಸಲು ಕಾರಣ ಏನು? ಭಾರತೀಯ ಬ್ಯಾಂಕುಗಳ ಅಳಿವು-ಉಳಿವು ಈ ಪ್ರಶ್ನೆ ಏಕೆ? ಭಾರತೀಯ ಬ್ಯಾಂಕುಗಳ ಉಳಿವಿಗೇ ಸವಾಲೊಡ್ಡಿರುವ ಮುಖ್ಯ ಬೆಳವಣಿಗೆಗಳನ್ನು ಗಮನಿಸೋಣ.

ವಿದೇಶಿ ಬ್ಯಾಂಕುಗಳು

ನಮ್ಮ ದೇಶದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿವಿಧ ವಿದೇಶಿ ಬ್ಯಾಂಕುಗಳು ವ್ಯವಹಾರ ನಡೆಸುತ್ತಿವೆ. ವಿದೇಶಿ ಬ್ಯಾಂಕುಗಳು ಭಾರತೀಯ ಬ್ಯಾಂಕುಗಳಿಗೆ ದೊಡ್ಡ ಸವಾಲಾಗಿ ಪರಿಗಣಿಸಲ್ಪಡುತ್ತವೆ. ಸಂಖ್ಯೆಯಲ್ಲಿ ಅವು ನಮ್ಮ ಬ್ಯಾಂಕುಗಳಿಗೆ ಮತ್ತು ಅವುಗಳ ಶಾಖೆಗಳಿಗೆ ಹೋಲಿಸಿದರೆ ತುಂಬಾ ಕಡಿಮೆ. ಆದರೂ ಅವು ಬ್ಯಾಂಕಿಂಗ್ ಕ್ಷೇತ್ರದ ಲಾಭದ ಶೇಕಡ 40ರಷ್ಟು ಲಾಭವನ್ನು ದೋಚುತ್ತಿವೆ ಎಂದರೆ ಅವುಗಳ ಪ್ರಾಮುಖ್ಯ ತಿಳಿಯುತ್ತದೆ. ಇದಕ್ಕೆ ಕಾರಣ—ವಿದೇಶಿ ಬ್ಯಾಂಕುಗಳು ಹೊಂದಿರುವ ಸುಸಜ್ಜಿತ ಶಾಖೆಗಳು, ಗಣಕೀಕರಣ, ತ್ವರಿತ ಮತ್ತು ದಕ್ಷ ಸೇವೆ. ಉದಾರೀಕರಣ ನೀತಿ ಮತ್ತು ನರಸಿಂಹಮ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಇಂದು ಅನೇಕ ವಿದೇಶಿ ಬ್ಯಾಂಕುಗಳಿಗೆ ತಮ್ಮ ಶಾಖೆಗಳನ್ನು ತೆರೆಯಲು ಅನುಮತಿ ದೊರಕಿದೆ. ಈಗಾಗಲೇ ಭಾರತದಲ್ಲಿ ತಮ್ಮ ತಮ್ಮ ಒಂದೊಂದು ಶಾಖೆಯನ್ನು ತೆರೆಯಲು 3 ವಿದೇಶಿ ಬ್ಯಾಂಕುಗಳಿಗೆ ಅನುಮತಿ ನೀಡಲಾಗಿದೆ. ಭಾರತದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ವಿದೇಶಿ ಬ್ಯಾಂಕುಗಳು ಮಹಾನಗರಗಳನ್ನು ಹೊರತುಪಡಿಸಿ ಬೇರೆ ಪಟ್ಟಣಗಳಲ್ಲಿ ತಮ್ಮ 44 ಶಾಖೆಗಳನ್ನು ತೆರೆಯಲು ಅನುಮತಿ ಕೋರಿವೆ. ವಿದೇಶಿ ಬ್ಯಾಂಕುಗಳ ಪ್ರವೇಶದಿಂದ ನಮ್ಮ ಬ್ಯಾಂಕುಗಳಿಗೆ ಗಂಡಾಂತರ ಬದಗಿದೆ ಎಂದು ಭಾವಿಸಲಾಗುತ್ತಿದೆ.

ಖಾಸಗಿ ಬ್ಯಾಂಕುಗಳು

ವಿದೇಶಿ ಬ್ಯಾಂಕುಗಳಂತೆ ಖಾಸಗಿ ಕ್ಷೇತ್ರದಲ್ಲಿ ತಲೆ ಎತ್ತುತ್ತಿರುವ ಬ್ಯಾಂಕುಗಳು ಸಹ ನಮ್ಮ ಬ್ಯಾಂಕುಗಳ ಉಳಿವಿಗೆ ಸವಾಲೊಡ್ಡಿವೆ ಎಂದು ಭಾವಿಸಲಾಗುತ್ತಿದೆ. ಖಾಸಗಿ ಬ್ಯಾಂಕುಗಳನ್ನು ನಮ್ಮವರೇ ಪ್ರಾರಂಭಿಸಿದರೂ ಸಹ ಈಗಿರುವ ಸಾರ್ವಜನಿಕ ಸ್ವಾಮ್ಯದ ಬ್ಯಾಂಕುಗಳ ಉಳಿವು-ಅಳಿವು ಪ್ರಶ್ನೆಗೆ ಕಾರಣವಾಗಿ ಪರಿಣಮಿಸಿವೆ. ಬ್ಯಾಂಕುಗಳ ಮಧ್ಯೆ ಸ್ಪರ್ಧೆ ಏರ್ಪಡಿಸಿ ಗ್ರಾಹಕರಿಗೆ ಒಳ್ಳೆಯ ಸೇವೆ ದೊರಕಿಸಬಹುದಾದುದರಿಂದ ನರಸಿಂಹಂ ಸಮಿತಿಯು ವಿದೇಶಿಬ್ಯಾಂಕುಗಳ ಮತ್ತು ಖಾಸಗಿ ಬ್ಯಾಂಕುಗಳ ಪ್ರವೇಶಕ್ಕಾಗಿ ಶಿಫಾರಸ್ಸು ಮಾಡಿದೆ.

ಗ್ರಾಹಕ ಸೇವೆ

ಗ್ರಾಹಕ ಮಾರುಕಟ್ಟೆಯ 'ರಾಜ'ನೆಂದೇ ಹೇಳಬಹುದು. ಆದ್ದರಿಂದ ಪ್ರತಿಯೊಬ್ಬ ಗ್ರಾಹಕ ಉತ್ತಮ ಸೇವೆಯನ್ನು ನಿರೀಕ್ಷಿಸುವದು ಸಹಜ. ಬ್ಯಾಂಕುಗಳು ಮಾರಾಟಮಾಡುವುದು ಯಾವದೇ ವಸ್ತುವನ್ನಲ್ಲ. ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುವುದೇ ಬ್ಯಾಂಕುಗಳ ಧ್ಯೇಯವಾಗಬೇಕು. ಆದರೆ ದುರದೃಷ್ಟವಶಾತ್ ಇಂದು ನಮ್ಮ ಬ್ಯಾಂಕುಗಳು ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುವದರಲ್ಲಿ ಹಿಂದೆ ಬಿದ್ದಿವೆ, ರಾಷ್ಟ್ರೀಕರಣದ ನಂತರ ಗ್ರಾಹಕ ಸೇವೆ ಹದಗೆಟ್ಟಿದೆ ಎಂಬ ಕೂಗು ಎಲ್ಲೆಡೆ ಕೇಳಿಸುತ್ತಿದೆ. ಇದರಿಂದ ಗ್ರಾಹಕ ವಿದೇಶಿ ಬ್ಯಾಂಕುಗಳು ಮತ್ತು ಖಾಸಗಿ ಬ್ಯಾಂಕುಗಳೆಡೆ ನೋಡುವದು ಸಹಜ.

ಸರಕಾರದ ಹಸ್ತಕ್ಷೇಪ

ನಮ್ಮ ಬ್ಯಾಂಕುಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕಿನ ಹತೋಟಿಗಿಂತ ಸರಕಾರದ ಹಸ್ತಕ್ಷೇಪ ಹೆಚ್ಚಾಗಿ ಕಾಣತೊಡಗಿದೆ. ದುರ್ಬಲ ವರ್ಗದ ಜನರ ಕಲ್ಯಾಣದ ಬಗ್ಗೆ ಎರಡು ಮಾತಿಲ್ಲ. ಆದರೆ ಸರಕಾರ ಕೈಗೊಳ್ಳುವ ದಿಢೀರ್ ನಿರ್ಣಯ, ಸಾಲಮೇಳ, ಸಾಲ ಮನ್ನಾ ಇತ್ಯಾದಿಗಳಿಂದ ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ಸೊರಗಿದೆ. ಸರಕಾರದ ಹಸ್ತಕ್ಷೇಪದಿಂದಾಗಿ ಬ್ಯಾಂಕುಗಳು ನೀಡಿದ ಸಾಲ ಇಂದು ವಸೂಲಾಗದ ಋಣದ ರೂಪ ತಳೆದಿವೆ. ಇದರಿಂದಾಗಿ ಭಾರತೀಯ ಬ್ಯಾಂಕುಗಳ ಲಾಭಗಳಿಕೆಯ ಮೇಲೆ ದುಷ್ಪರಿಣಾಮ ಉಂಟಾಗಿದೆ. ಅನೇಕ ಬ್ಯಾಂಕುಗಳು ನಷ್ಟದ ಹಾದಿಯನ್ನು ತುಳಿಯುತ್ತಿವೆ.

ಶಾಖಾ ವಿಸ್ತರಣೆ

ಭಾರತ ದೊಡ್ಡ ದೇಶವಷ್ಟೇ ಅಲ್ಲ, ಹಳ್ಳಿಗಳಿಂದ ಕೂಡಿದ ದೇಶವೂ ಹೌದು. ಇದೇ ಕಾರಣಕ್ಕಾಗಿ ನಮ್ಮ ಬ್ಯಾಂಕುಗಳ ಶಾಖಾ ವಿಸ್ತರಣೆಯ ಕಾರ್ಯ ತ್ವರಿತ ಗತಿಯಲ್ಲಿ ಆಗಿ ಇಂದು ದೇಶದ ತುಂಬ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಶಾಖೆಗಳು ಹರಡಿಕೊಂಡಿವೆ. ಸಂಖ್ಯೆಯ ದೃಷ್ಟಿಯಿಂದ ಅವು ಮುಂಚೂಣಿಯಲ್ಲಿವೆ. ಆದರೆ ಇದು ಹೆಮ್ಮೆ ಪಡುವ ವಿಷಯವೆ? ನಮ್ಮಲ್ಲಿ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು—ಹೀಗೆ ವಿವಿಧ ರೀತಿಯಿಂದ ಕೂಡಿದ ಬ್ಯಾಂಕುಗಳಿದ್ದು ಇವುಗಳೆಲ್ಲ ತಮ್ಮ ಶಾಖೆಗಳನ್ನು ಭಾರತದ ಉದ್ದಗಲಕ್ಕೂ ಹರಡಿವೆ. ಇಷ್ಟೊಂದು ಬ್ಯಾಂಕುಗಳು ಮತ್ತು ಶಾಖೆಗಳು ಅಗತ್ಯವೆ? ಎಂಬ ಪ್ರಶ್ನೆ ಇಂದು ಎದ್ದಿದೆ. ಬ್ಯಾಂಕಿಂಗ್ ಸೇವೆ ಎಲ್ಲರಿಗೂ ಲಭ್ಯವಾಗಬೇಕು ನಿಜ. ಆದರೆ ಇದಕ್ಕಾಗಿ ಎಲ್ಲೆಂದರಲ್ಲಿ ಶಾಖೆಗಳನ್ನು ತೆರೆದು ನಮ್ಮ ಬ್ಯಾಂಕುಗಳನ್ನು ನಷ್ಟದ ಕೂಪದಲ್ಲಿ ತಳ್ಳುವುದು ಎಷ್ಟು ಸಮಂಜಸ?

ಆದ್ಯತಾ ವಲಯಕ್ಕೆ ಸಾಲ

ನಮ್ಮ ಬ್ಯಾಂಕುಗಳು ಕೊಡಮಾಡುವ ಒಟ್ಟು ಸಾಲದ ಶೇ. 40 ಭಾಗ ಆದ್ಯತಾ ವಲಯಗಳೆನಿಸಿದ ಕೃಷಿ, ಸಣ್ಣ ಕೈಗಾರಿಕೆಯಂತಹ ಕ್ಷೇತ್ರಗಳಿಗೆ ಮೀಸಲಾಗಿದೆ. ಇದು ಬಡ್ಡಿಯ ರೂಪದಲ್ಲಿ

(ಮುಂದಿನ ಪುಟ ನೋಡಿ)

ಬಜೆಟ್ 1995-96: ಒಂದು ನೋಟ

(5ನೇ ಪುಟದಿಂದ ಮುಂದುವರಿದಿದೆ)

ಇರುವಾಗ ಕೈಗಾರಿಕೆಗಳಿಗೆ ಇನ್ನಷ್ಟು ತೆರಿಗೆ ರಿಯಾಯ್ತಿ ತೋರಿ, ಹಣದುಬ್ಬರಕ್ಕೆ ಕಡಿವಾಣ ಹಾಕುವಂಥ ಯಾವ ಯೋಜನೆಯನ್ನೂ ಹಾಕಿಕೊಳ್ಳದಿರುವುದು ಯೋಗ್ಯವಲ್ಲ. ಈ ದೃಷ್ಟಿಯಿಂದ ಬಜೆಟ್ ವಿಫಲವಾಗಿದೆ ಎನ್ನದೆ ವಿಧಿಯಿಲ್ಲ.

ಬಜೆಟ್ಟಿನ ಇನ್ನೊಂದು ಉದ್ದೇಶವೆಂದರೆ ಸರಕಾರದ ಧೋರಣೆಗಳನ್ನು ಅನುಷ್ಠಾನಕ್ಕೆ ತರುವುದು. ಕಳೆದ ನಾಲ್ಕು ವರ್ಷಗಳಿಂದ ಇದ್ದ ಅರ್ಥನೀತಿಯ ಹಿನ್ನೆಲೆಯಲ್ಲಿಯೇ ಈ ಬಜೆಟ್ ರೂಪುಗೊಂಡಿದೆಯೇ ಎಂಬ ಪ್ರಶ್ನೆ ಹಾಕಿದಾಗ ಉತ್ತರಿಸುವುದು ಕಷ್ಟವಾದೀತು. ಬಡವರ ಏಳಿಗೆಗಾಗಿ ಯೋಜನೆಗಳನ್ನು ರೂಪಿಸುವುದು ತಪ್ಪೆನ್ನಲು ಸಾಧ್ಯವಿಲ್ಲವಾದರೂ, ಹೊಸ ಅರ್ಥನೀತಿಗೆ ಮಾನವ ಮುಖ ಇಲ್ಲ ಎಂಬ ಆಪಾದನೆಗೆ ಉತ್ತರಿಸಲೋ ಎಂಬಂತೆ ಕೆಲವು ಪ್ರಸ್ತಾಪಗಳನ್ನು ಇಲ್ಲಿ ಮುಂದಿಡಲಾಗಿದೆ ಎನ್ನಲು ಸಮರ್ಥನೆ ಇದೆ. ಚುನಾವಣೆಯ ಮೇಲೆ ಕಣ್ಣಿಟ್ಟದ್ದರಿಂದ ಹೀಗಾಗಿರಬೇಕು ಎಂಬ ಗುಮಾನಿಯಂತೂ ಇದ್ದೇ ಇರುತ್ತದೆ.

ಸರಕಾರಿ ಕ್ಷೇತ್ರದ ಸುಧಾರೀಕರಣದ ಬಗ್ಗೆ ಹಾಗೂ ಹಣಕಾಸು ಕ್ಷೇತ್ರದ ಬಗ್ಗೆ ಸರಕಾರ ಮೌನ ತಳೆದಿದೆ. ವಿಮಾಕ್ಷೇತ್ರದಲ್ಲಿ ಖಾಸಗಿ ಕಂಪನಿಗಳ ಪ್ರವೇಶಕ್ಕೆ ಅನುವು ದೊರೆತೀತೆಂಬ ನಿರೀಕ್ಷೆ ಹುಸಿಯಾಗಿದೆ. ವಿಮಾವಲಯವನ್ನು ಕುರಿತಂತೆ ಒಂದು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸುವುದಾಗಿ ಮಾತ್ರ ಈ ಬಜೆಟ್ ಸೂಚಿಸಿದೆ. ಕೈಗಾರಿಕಾ ನಿರ್ಗಮನ ನೀತಿ (ಎಕ್ಸಿಟ್ ಪಾಲಿಸಿ) ಕುರಿತಂತೆ ಈ ಬಜೆಟ್ ಏನೂ ಹೇಳದೆ ಶ್ರೀಮದ್ಗಾಂಭೀರ್ಯ ತೋರಿದೆ. ಬಹುಶಃ ಕಾರ್ಮಿಕವರ್ಗದ ವಿರೋಧವನ್ನು ಕುರಿತು ಸ್ಪಷ್ಟವಾಗಿ ನಿಲುವು ತಳೆಯದೆ ಸಮಸ್ಯೆಯನ್ನು ಮುಂದೂಡುವುದು ಸರಕಾರಕ್ಕೆ ಸುಲಭವೆನಿಸಿರಬೇಕು.

ಅಂತೂ ಇನ್ನೊಂದು ಬಜೆಟ್ಟಿನ ಮಂಡನೆಯಾಗಿದೆ. ಒಂದೇ ಬಾರಿಗೆ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸುವುದು ಅಸಾಧ್ಯವಾದ್ದರಿಂದ ಒಟ್ಟಾರೆ ಆರ್ಥಿಕರಂಗದ ಸುಧಾರಣೆಯತ್ತಲೇ ಬೊಟ್ಟು ಮಾಡುವುದೆಂಬ ಮಟ್ಟಿಗೆ ಮಾತ್ರ ಈ ಬಜೆಟ್ಟಿನ ಬಗೆಗೆ ತೃಪ್ತಿಪಟ್ಟುಕೊಳ್ಳಬಹುದು. ನಿಜವಾದ ಸುಧಾರಣೆಯಾಗುವುದೆಂದು? ●

ಬರುವ ನಮ್ಮ ಆದಾಯದ ಮೇಲೆ ಪರಿಣಾಮ ಉಂಟುಮಾಡಿದೆ. ಇದರಿಂದಾಗಿ ವಿದೇಶಿ ಬ್ಯಾಂಕುಗಳು ಒಡ್ಡುತ್ತಿರುವ ಪೈಪೋಟಿ ಎದುರಿಸುವಲ್ಲಿ ನಮ್ಮ ಬ್ಯಾಂಕುಗಳು ವಿಫಲಗೊಂಡಿವೆ.

ಸಾಲ ವಸೂಲಾತಿ

ಸಾಲ ವಸೂಲಾತಿಯಲ್ಲಿ ನಮ್ಮ ಬ್ಯಾಂಕುಗಳು ಮುಗ್ಗರಿಸುತ್ತಿವೆ. ಇದಕ್ಕೆ ಹಲವಾರು ಕಾರಣಗಳಿವೆ—ಸರಕಾರ ಘೋಷಿಸುವ ಸಾಲ ಮನ್ನಾಗಳಿಂದಾಗಿ ಮರುಪಾವತಿ ಮಾಡುವ ಸಾಮರ್ಥ್ಯ ಹೊಂದಿದ ರೈತರು ಸಹ ತಾವು ಪಡೆದ ಕೃಷಿಸಾಲ ಮರುಪಾವತಿ ಮಾಡುತ್ತಿಲ್ಲ, ಸಾಲ ವಸೂಲಿ ಮಾಡಲು ಬೇಕಾದ ಕ್ಷೇತ್ರ ಸಿಬ್ಬಂದಿಯ ಕೊರತೆ, ಮಳೆ ಅಭಾವದಿಂದ ಕೃಷಿ ಕ್ಷೇತ್ರದ ಮತ್ತು ವಿದ್ಯುತ್ ಅಭಾವದಿಂದ ಕಾರ್ಖಾನೆಗಳ ಉತ್ಪಾದನೆಯಲ್ಲಿ ತೋರುವ ಅನಿಶ್ಚಿತತೆ, ಸರಕಾರದ ನಿರಂತರ ಹಸ್ತಕ್ಷೇಪದಿಂದಾಗಿ ಬ್ಯಾಂಕುಗಳು ಸಾಲ ವಸೂಲಾತಿಯಲ್ಲಿ ಸೋಲುತ್ತಿವೆ.

ಸುಧಾರಣೆಗೆ ಸಲಹೆಗಳು

ಇಲ್ಲಿಯವರೆಗೆ 'ಭಾರತೀಯ ಬ್ಯಾಂಕುಗಳು ಉಳಿಯಲು ಸಾಧ್ಯವೆ ?' ಎಂಬ ಪ್ರಶ್ನೆ ಉದ್ಭವಿಸಲು ಕಾರಣಗಳನ್ನು ತಿಳಿಸಲಾಯಿತು. ಆದರೆ ಕಾರಣಗಳನ್ನು ಹುಡುಕುವುದರಿಂದ ಪ್ರಶ್ನೆಗೆ ಉತ್ತರ ಸಿಕ್ಕಂತಲ್ಲ. ಈ ಕಾರಣಗಳಿಂದ, ನಾವು ಭಾರತೀಯ ಬ್ಯಾಂಕುಗಳು ಉಳಿಯುವಂತೆ ಮಾಡಲು ಸಲಹೆ–ಸೂಚನೆಗಳೆಡೆಗೆ ಗಮನ ಹರಿಸಬೇಕಾಗಿದೆ. ಭಾರತೀಯ ಬ್ಯಾಂಕುಗಳು ಖಂಡಿತ ಉಳಿಯಲು ಸಾಧ್ಯ, ಇದಕ್ಕಾಗಿ ಈ ಮುಂದೆ ತಿಳಿಸುವ ಕೆಲವೊಂದು ಸಲಹೆಗಳನ್ನು ಕಾರ್ಯಗತಗೊಳಿಸಬೇಕು.

ಉತ್ತಮ ಗ್ರಾಹಕ ಸೇವೆ

ಈಗಾಗಲೇ ತಿಳಿಸಿರುವಂತೆ ಗ್ರಾಹಕ ಮಾರುಕಟ್ಟೆಯ 'ರಾಜ'ನೆಂದೇ ಭಾವಿಸಬೇಕು. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ, "ಗ್ರಾಹಕ ನಮ್ಮ ಆವರಣಕ್ಕೆ ಭೇಟಿ ಕೊಡುವ ಅತ್ಯಂತ ಮುಖ್ಯ ವ್ಯಕ್ತಿ. ಅವನು ನಮ್ಮನ್ನು ಅವಲಂಬಿಸಿಲ್ಲ. ನಾವೇ ಅವನನ್ನು ಅವಲಂಬಿಸಿದ್ದೇವೆ. ಅವನು ನಮ್ಮ ಕಾರ್ಯಕ್ಕೆ ಅಡ್ಡಿಯಿಲ್ಲ. ಅವನು ನಮ್ಮ ಕಾರ್ಯದ ಉದ್ದೇಶವೇ ಆಗಿದ್ದಾನೆ. ಅವನಿಗೆ ಸೇವೆ ನೀಡುವ ಮೂಲಕ ನಾವು ಅವನಿಗೆ ಉಪಕಾರವನ್ನೇನೂ ಮಾಡುತ್ತಿಲ್ಲ. ಸೇವೆ ಮಾಡುವ ಅವಕಾಶವೊಂದನ್ನು ನಮಗೆ ನೀಡುವ ಮೂಲಕ ಅವನೇ ನಮಗೆ ಉಪಕಾರ ಮಾಡುತ್ತಿದ್ದಾನೆ." ಗಾಂಧೀಜಿಯವರ ಈ ಮಾತುಗಳಲ್ಲಿ ಅದೆಂಥ ಅರ್ಥ ಅಡಗಿದೆ! ಗ್ರಾಹಕನಿರುವದರಿಂದಲೇ ನಾವಿದ್ದೇವೆ ಎಂಬುದನ್ನು ನಮಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಸ್ಪರ್ಧೆಯ ಈ ಯುಗದಲ್ಲಿ ಉತ್ತಮ ಗ್ರಾಹಕ ಸೇವೆ ಸಲ್ಲಿಸುವದರಿಂದಲೇ ನಾವು ಗ್ರಾಹಕನನ್ನು ಗೆಲ್ಲಬಹುದು, ನಗು ಮೊಗದ ಸೇವೆ—ಇದನ್ನು ಪ್ರತಿಯೊಬ್ಬ ಗ್ರಾಹಕ ನಮ್ಮಿಂದ ಪ್ರಪ್ರಥಮವಾಗಿ ಬಯಸುತ್ತಾನೆ. ಮುಖ ಗಂಟಿಕ್ಕಿದವನ ಬಳಿ ಯಾರೂ ಸುಳಿಯಲು ಇಷ್ಟಪಡುವುದಿಲ್ಲ. ಅದೇ ನಗು–ನಗುತ್ತ, ಲವಲವಿಕೆಯಿಂದ ಇರುವವನ ಸುತ್ತ ಯಾವತ್ತೂ ಜನರಿರುತ್ತಾರೆ. ಇದೇ ರೀತಿಯಾಗಿ, ನಗುಮೊಗದ ಸೇವೆಯಿಂದ ಕೂಡಿದ ಬ್ಯಾಂಕಿನಲ್ಲಿ ಗ್ರಾಹಕರು ತುಂಬಿರುತ್ತಾರೆಂದರೆ ಅತಿಶಯೋಕ್ತಿಯಾಗಲಾರದು. ನಾವು ಒಬ್ಬ ಗ್ರಾಹಕನನ್ನು ನಗುಮೊಗದಿಂದ ಬರಮಾಡಿಕೊಂಡು ಒಳ್ಳೆಯ ರೀತಿ ಸೇವೆ ಸಲ್ಲಿಸಿ ಕಳಿಸಿದರೆ, ಸಂತೋಷದಿಂದ ಹೋದ ಒಬ್ಬ ಗ್ರಾಹಕ ಅನೇಕ ಹೊಸ ಗ್ರಾಹಕರನ್ನು ನಮ್ಮ ಬ್ಯಾಂಕುಗಳಿಗೆ ಪರಿಚಯಿಸಬಹುದು. ಆದ್ದರಿಂದ ನಾವು ತಾಳ್ಮೆ ಕಳೆದುಕೊಂಡು ಗ್ರಾಹಕರನ್ನೂ ಕಳೆದುಕೊಳ್ಳಬಾರದು. ತಾಳ್ಮೆಯಿಂದ ಎಲ್ಲರನ್ನೂ ನಿಭಾಯಿಸಬೇಕು. "ತಾಳ್ಮೆಯು ಕಹಿಯಾಗಿದ್ದರೂ ಅದರ ಫಲವು ಮಧುರವಾದದ್ದು." ದಿನೇ ದಿನೇ ಹೆಚ್ಚುತ್ತಿರುವ ಗ್ರಾಹಕರ ನಿರೀಕ್ಷೆಗಳನ್ನು ಈಡೇರಿಸಲು ನಾವು ಸನ್ನದ್ಧರಾಗಿರಬೇಕು.

ಗಣಕೀಕರಣ

ಇಂದು ವಿದೇಶಿ ಬ್ಯಾಂಕುಗಳು ಗ್ರಾಹಕರನ್ನು ತಮ್ಮೆಡೆಗೆ ಸೆಳೆಯಲು ಮುಖ್ಯಕಾರಣವೆಂದರೆ ಅವುಗಳ ಸುಸಜ್ಜಿತ ಮತ್ತು ಸಂಪೂರ್ಣ ಗಣಕೀಕರಣದಿಂದ ಕೂಡಿದ ಶಾಖೆಗಳು. ಗಣಕೀಕರಣದಿಂದ ಕೆಲಸ ತ್ವರಿತಗತಿಯಿಂದ ನಿಭಾಯಿಸಲು ಅನುಕೂಲವಾಗುವದರ ಜೊತೆಗೆ ಉತ್ತಮ ಗ್ರಾಹಕ ಸೇವೆ ಸಲ್ಲಿಸಲು ಅತಿ ಸಹಾಯಕವಾಗಿದೆ. ವಿದೇಶಿ ಬ್ಯಾಂಕುಗಳ ಪೈಪೋಟಿ ಎದುರಿಸಲು ನಾವಿಂದು ನಮ್ಮ ಬ್ಯಾಂಕುಗಳಲ್ಲಿ ಗಣಕಗಳನ್ನು ಅಳವಡಿಸಲೇಬೇಕು. ವ್ಯಾಪಕ ಗಣಕೀಕರಣದಿಂದ ಮಾತ್ರ ಸ್ಪರ್ಧೆ ಎದುರಿಸಲು ಸಾಧ್ಯ. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಮುನ್ನಡೆಯಬೇಕು.

ನರಸಿಂಹಮ್ ಸಮಿತಿಯ ಸಲಹೆಗಳು

ನರಸಿಂಹಮ್ ಸಮಿತಿ ಸೂಚಿಸಿರುವ ಕೆಲವೊಂದು ಸಲಹೆಗಳನ್ನು ನಾವು ಒಪ್ಪಿಕೊಳ್ಳಬೇಕು. ಸಮಿತಿ ಸೂಚಿಸಿರುವಂತೆ ಶಾಖೆಗಳನ್ನು ತೆರೆಯಲು ಅಥವಾ ಮುಚ್ಚಲು ಬ್ಯಾಂಕುಗಳಿಗೆ ಸ್ವಾತಂತ್ರ್ಯ ಸಿಕ್ಕಿದೆ. ಈ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸಿಕೊಂಡು ಬ್ಯಾಂಕುಗಳು ರಾಷ್ಟ್ರದ ಬೆಳವಣಿಗೆ ಮತ್ತು ಲಾಭಪ್ರದತೆ ಎರಡನ್ನೂ ಗಮನದಲ್ಲಿರಿಸಿಕೊಂಡು ಶಾಖೆಗಳನ್ನು ತೆರೆಯಬೇಕು. ಸತತವಾಗಿ ನಷ್ಟ ಅನುಭವಿಸುತ್ತಿರುವ ಶಾಖೆಗಳನ್ನು ಮುಚ್ಚಬೇಕು. ಆದ್ಯತಾ ವಲಯಕ್ಕೆ ಕೊಡಮಾಡುವ ಸಾಲವನ್ನು ಒಟ್ಟು ಬ್ಯಾಂಕ್ ಸಾಲದ ಶೇಕಡಾ 40ರಿಂದ ಶೇಕಡಾ 10ಕ್ಕೆ ಇಳಿಸುವ ಸೂಚನೆಯನ್ನು ಸಮಿತಿ ನೀಡಿದೆ. ಇದನ್ನು ಸರಕಾರ ಒಪ್ಪಿಕೊಳ್ಳಬೇಕು.

ಸರಕಾರದ ಹಸ್ತಕ್ಷೇಪ

ಬ್ಯಾಂಕಿಂಗ್ ವ್ಯವಹಾರದಲ್ಲಿ ಸರಕಾರದ ಅಥವಾ ರಾಜಕೀಯ ಹಸ್ತಕ್ಷೇಪ ಸಂಪೂರ್ಣವಾಗಿ ನಿಲ್ಲಬೇಕು. ರಾಜಕೀಯ ಲಾಭಕ್ಕಾಗಿ ಬ್ಯಾಂಕುಗಳ ಉಪಯೋಗ ಸಲ್ಲದು, (10ನೇ ಪುಟ ನೋಡಿ)

ರಾಷ್ಟ್ರೀಕರಣ ಮತ್ತು ಗ್ರಾಮೀಣ ಬ್ಯಾಂಕಿಂಗ್

ಕೆ. ಆರ್. ಮಂಜುನಾಥ್
ಭಾರತೀಯ ಸ್ಟೇಟ್ ಬ್ಯಾಂಕ್, ಮೈಸೂರು

ಇಪ್ಪತ್ತಾರು ವರ್ಷ ಹಿಂದೆ ದೇಶದ ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದಾಗ ಬ್ಯಾಂಕಿಂಗ್ ಸೇವೆಯನ್ನು ಗ್ರಾಮ ಪ್ರದೇಶಕ್ಕೂ ವಿಸ್ತರಿಸಿ ಗ್ರಾಮೀಣ ಅಭಿವೃದ್ಧಿಗೆ ಅದನ್ನೊಂದು ಪ್ರಮುಖ ಸಾಧನವಾಗಿ ಮಾಡುವ ಉದ್ದೇಶವಿತ್ತು. ಈ ಗುರಿಯತ್ತ ಸಾಕಷ್ಟು ಹಾದಿಯನ್ನೇನೋ ಕ್ರಮಿಸಿದ್ದಾಗಿದೆ. ಆದರೆ ಗುರಿ ಮಾತ್ರ ಕೈಗೆ ನಿಲುಕದೆ ಮಾಯಾ ಜಿಂಕೆಯಂತೆ ದೂರದೂರ ಸರಿಯುತ್ತಿದೆ.

ಜುಲೈ 19, 1969 ಭಾರತದ ಬ್ಯಾಂಕಿಂಗ್ ಇತಿಹಾಸದಲ್ಲೇ ಒಂದು ಬಹು ಮುಖ್ಯವಾದ ದಿನ. ಭಾರತದ ವಾಣಿಜ್ಯ ವಲಯದಲ್ಲಿ ಅಲ್ಲೋಲ ಕಲ್ಲೋಲ ಹುಟ್ಟಿಸಿದ ಆ ದಿನ ಖಾಸಗಿ ರಂಗದ 14 ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ ದಿನ. ಈ ನಿರ್ಧಾರದ ಹಿಂದಿನ ಪ್ರಮುಖ ರೂವಾರಿಯಾದ ದಿ॥ ಶ್ರೀಮತಿ ಇಂದಿರಾ ಗಾಂಧಿಯವರು ನವ ಭಾರತ ನಿರ್ಮಾಣದ ಶಿಲ್ಪಿಯೆನಿಸಿಕೊಂಡರು.

ಈ ನಿರ್ಧಾರವನ್ನು ಕೇವಲ ಹೊಗಳಿಕೆಗಾಗಲಿ, ಅಗ್ಗದ ಜನಪ್ರಿಯತೆಗಾಗಲಿ ತೆಗೆದುಕೊಳ್ಳಲಿಲ್ಲ. ಇದರ ಹಿಂದೆ ಠೇವಣಿದಾರರ ಹಿತರಕ್ಷಣೆ ಮುಂತಾದ ಹಲವಾರು ಕಾರಣಗಳಿದ್ದರೂ ಒಂದು ಪ್ರಮುಖವಾದ ಕಾರಣವೆಂದರೆ ಅಂದಿನ ಬ್ಯಾಂಕಿನ ಪ್ರವರ್ತಕರ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ಗ್ರಾಮೀಣ ಬ್ಯಾಂಕಿಂಗಿಗೆ ಒಂದು ಹೊಸ ರೂಪ ಕೊಟ್ಟು ತನ್ಮೂಲಕ ಗ್ರಾಮೀಣ ಜನಜೀವನದ ಮಟ್ಟವನ್ನು ಸುಧಾರಿಸುವ ಪ್ರಯತ್ನವಾಗಿ ರಾಷ್ಟ್ರೀಕರಣದ ನಿರ್ಧಾರ ಆಯಿತು. ರಾಷ್ಟ್ರೀಕರಣದ ಸಾಫಲ್ಯ-ವೈಫಲ್ಯಗಳನ್ನು ಕುರಿತು ವಿವೇಚಿಸುವ ಮುನ್ನ, ರಾಷ್ಟ್ರೀಕರಣದ ಹಿಂದಿನ ಬ್ಯಾಂಕಿಂಗ್ ಸ್ಥಿತಿಯನ್ನು ಸ್ವಲ್ಪ ಪರಾಮರ್ಶಿಸೋಣ.

ಅಂದಿನ ಬ್ಯಾಂಕುಗಳು ಕೇವಲ ಕೆಲವೇ ಗಟ್ಟಿ ಕುಳಗಳ ಕೈಯಲ್ಲಿದ್ದವು. ಅಂದಿನ ದಿನಗಳಲ್ಲಿ ಯಾರು ಉತ್ತಮ ಠೇವಣಿಗಳನ್ನು ಇಡಬಲ್ಲವರಾಗಿದ್ದರೋ, ಆಸ್ತಿವಂತರಾಗಿದ್ದರೋ ಅಂತಹವರನ್ನು ಮಣೆ ಹಾಕಿ ಉಪಚರಿಸಲಾಗುತ್ತಿತ್ತು. ಬಡವರು, ನಿರ್ಗತಿಕರು ಹಾಗೂ ಕೆಳವರ್ಗದ ಜನರನ್ನು ಪ್ರೋತ್ಸಾಹಿಸದೆ, ಸಾಮಾಜಿಕ ಕಳಕಳಿಯ ಮುಖವಾಡ ಧರಿಸಲು ಕೆಲವೇ ತಿಳಿದ ವಿದ್ಯಾವಂತ ಬಡ ಜನಗಳಿಗೆ ಸಾಲ ನೀಡುತ್ತಿದ್ದರು.

ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಆಗ ಭಾರತದಲ್ಲಿ 8,262 ಬ್ಯಾಂಕಿನ ಶಾಖೆಗಳಿದ್ದವು. ಇದರಲ್ಲಿ 1,833 ಶಾಖೆಗಳು ಗ್ರಾಮೀಣ ಪ್ರದೇಶದಲ್ಲಿ, 3,342 ಶಾಖೆಗಳು ಅರೆಪಟ್ಟಣ ಪ್ರದೇಶದಲ್ಲಿ ಹಾಗೂ 1,303 ಶಾಖೆಗಳು ಪಟ್ಟಣ/ನಗರ ಪ್ರದೇಶಗಳಲ್ಲಿ ಸ್ಥಾಪಿತಗೊಂಡಿದ್ದವು. ಒಟ್ಟು ಠೇವಣಿ 4669 ಕೋಟಿ ರೂ. ಆಗಿದ್ದರೆ ಸಾಲಗಳು 3,559 ಕೋಟಿ ರೂ. ಆಗಿದ್ದವು. ಆದ್ಯತಾ ವಲಯದ ಸಾಲಗಳು ರೂ. 504 ಕೋಟಿ ಆಗಿದ್ದವು (ಶೇ. 15 ರಷ್ಟು). ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೀಡಿದ ಸಾಲಗಳು ಒಟ್ಟು ಸಾಲದ ಶೇ. 10ರಷ್ಟನ್ನು ಕೂಡ ಮುಟ್ಟಲಿಲ್ಲ. ಆಗ ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿ ಸಾಲ ನೀಡುವಿಕೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಬಹುಶಃ ಗ್ರಾಮೀಣ ಭಾಗದಲ್ಲಿ ಉದರಿ ನೀಡುವುದಕ್ಕಿಂತ ಅದೇ ಹಣವನ್ನು ಬೇರೆ ವಲಯಗಳಲ್ಲಿ ನೀಡಿದರೆ, ಹೆಚ್ಚಿನ ಲಾಭ ಸಿಗಬಹುದೆಂಬ ಜಾಣತನವೂ ಇತ್ತು.

ಶಾಖಾ ವಿಸ್ತರಣೆ

ಈ ಪರಿಸ್ಥಿತಿ ರಾಷ್ಟ್ರೀಕರಣದವರೆಗೂ ಮುಂದುವರಿದಿತ್ತು. ರಾಷ್ಟ್ರೀಕರಣದ ಅನಂತರ "ಬ್ಯಾಂಕುಗಳಲ್ಲಿ ಠೇವಣಿ ಇಟ್ಟರೆ ತಮ್ಮ ಹಣಕ್ಕೆ ಮೋಸವಿಲ್ಲ" ಎಂಬ ಧೈರ್ಯವನ್ನು ಜನಗಳಲ್ಲಿ ತುಂಬಲು ಬ್ಯಾಂಕುಗಳು ಬಹಳ ಪ್ರಯಾಸ ಪಡಬೇಕಾಯಿತು. ಬ್ಯಾಂಕುಗಳಲ್ಲಿ ಜನರಿಗೆ ನಂಬಿಕೆ ಮೂಡುವಂತೆ ಮಾಡಿ ನಂತರ ಬ್ಯಾಂಕಿಂಗ್ ಸೇವೆಯನ್ನು ವಿಸ್ತರಿಸಲು ಪ್ರಾರಂಭಿಸಲಾಯಿತು. ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯಲು ಹೆಚ್ಚಿನ ಪ್ರೋತ್ಸಾಹವನ್ನೂ ಸಹ ನೀಡಲಾಯಿತು. ಇದಕ್ಕಾಗಿ ಸರಕಾರ ಭಾರತೀಯ ರಿಸರ್ವ್ ಬ್ಯಾಂಕಿನ ಮೂಲಕ ಶಾಖಾ ವಿಸ್ತರಣೆಯ ಕಾಯ್ದೆಯ ಷರತ್ತುಗಳನ್ನು ಸಡಿಲಿಸಲಾಯಿತು. ಇದರ ಲಾಭ ಪಡೆದು ಬ್ಯಾಂಕುಗಳು ಅತ್ಯುತ್ಸಾಹದಿಂದ ಬ್ಯಾಂಕ್ ಶಾಖೆಗಳನ್ನು ತೆರೆಯಲು ಪ್ರಾರಂಭಿಸಿದವು. ಕಳೆದ ವರ್ಷದ ಕೊನೆಯಲ್ಲಿ ಶಾಖೆಗಳ ಸಂಖ್ಯೆ 58 ಸಾವಿರದ ಆಸುಪಾಸಿನಲ್ಲಿತ್ತು. ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. 56ರಷ್ಟು ಶಾಖೆಗಳಿದ್ದರೆ, ಅರೆಪಟ್ಟಣ/ಪ್ರದೇಶ

ಗಳಲ್ಲಿ ಶೇ. 20ರಷ್ಟು ಶಾಖೆಗಳಿದ್ದವು. ಜನಸಂಖ್ಯಾ ದೃಷ್ಟಿಯಿಂದ 1969ರಲ್ಲಿ 65 ಸಾವಿರ ಜನಗಳಿಗೆ ಒಂದರಂತೆ ಕಾರ್ಯ ನಿರ್ವಹಿಸು ತ್ತಿದ್ದ ಬ್ಯಾಂಕ್ ಶಾಖೆಗಳು ಈಗ ಹನ್ನೊಂದು ಸಾವಿರ ಜನಗಳಿಗೆ ಒಂದು ಶಾಖೆಯಂತೆ ಸೇವೆ ಸಲ್ಲಿಸುತ್ತಿವೆ. ಈ ಅವಧಿಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆದ ಶಾಖಾವಿಸ್ತರಣೆಯ ಸಣ್ಣ ಕ್ರಾಂತಿಯು 1969ರಲ್ಲಿ ಬ್ಯಾಂಕುಗಳು ಬೆಳೆಸಿಕೊಂಡು ಬಂದಿದ್ದ ಮೂಲ ಪದ್ಧತಿಯಾದ ಪ್ರತಿಷ್ಠಿತ ವರ್ಗ ಬ್ಯಾಂಕಿಂಗ್‌ನಿಂದ (ಕ್ಲಾಸ್ ಬ್ಯಾಂಕಿಂಗ್) ಸಮೂಹ ಬ್ಯಾಂಕಿಂಗಿಗೆ (ಮಾಸ್ ಬ್ಯಾಂಕಿಂಗ್) ಬದಲಾವಣೆ ಹೊಂದಿದವು.

ಈ ಶಾಖಾ ವಿಸ್ತರಣೆಯಿಂದ ಠೇವಣಿಗಳ ಬೆಳವಣಿಗೆಯು ಏರ ತೊಡಗಿತು. ಒಟ್ಟು ಠೇವಣಿ 1969ಕ್ಕೆ ಹೋಲಿಸಿದಂತೆ 23 ಪಟ್ಟು ಹೆಚ್ಚಾದರೆ, ಗ್ರಾಮೀಣ ಪ್ರದೇಶಗಳಲ್ಲಿ 19 ಪಟ್ಟು ಹೆಚ್ಚಾಗಿತ್ತು. ಇದೇ ರೀತಿ ಉದರಿ ನೀಡಿಕೆಯ ಗತಿ ಕೂಡ ಹೆಚ್ಚಾಗತೊಡಗಿತು. ಆದ್ಯತಾವಲಯಕ್ಕೆ ನೀಡಿದ ಸಾಲಗಳು 504 ಕೋಟಿ ರೂ.ನಿಂದ, 23,811 ಕೋಟಿ ರೂ.ಗಳಿಗೆ ಏರಿತು.

ನಿಯಂತ್ರಣ

ಇದೇ ಅವಧಿಯಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯ ರೂಪಕ್ಕೆ ತಂದ ನಮ್ಮ ಸರಕಾರ ಆದಕ್ಕಾಗಿ ಆಯವ್ಯಯದಲ್ಲಿ ತೆಗೆದಿರಿಸಬೇಕಾದ ಹಣದ ಕಾರಣ ತನ್ನ ಬೇರೆ ಖರ್ಚುಗಳಿಗಾಗಿ ಸಾಲ ಮಾಡುವುದು ಅನಿವಾರ್ಯವಾಯಿತು. ಆ ಸಾಲಗಳ ಹೊರೆ ಯನ್ನು ಕಡಿಮೆ ಮಾಡಲು ಅದು ರಿಸರ್ವ್ ಬ್ಯಾಂಕಿನ ಮುಖಾಂತರ ನಗದು ಮೀಸಲು ಅನುಪಾತ ಹಾಗೂ ಪರಿನಿಯತ ದ್ರವತ್ವ ಅನುಪಾತ (ಕ್ಯಾಷ್ ರಿಸರ್ವ್ ರೇಶಿಯೋ ಹಾಗೂ ಸ್ಟ್ಯಾಟ್ಯುಟರಿ ಲಿಕ್ವಿಡಿಟಿ ರೇಶಿಯೋ)ಅನ್ನು ಹೆಚ್ಚಿಸತೊಡಗಿತು. ರಾಷ್ಟ್ರೀಕರಣದ ಸಮಯದಲ್ಲಿ ಕೇವಲ ಶೇ. 3 ಇದ್ದ ನಗದು ಮೀಸಲು ಅನುಪಾತ (CRR) ಇಂದು ಶೇ. 15 ಆಗಿದೆ. ಇದೇ ರೀತಿ ಪರಿನಿಯತ ದ್ರವತ್ವ ಅನುಪಾತ ಕೂಡ ಏರಿ ಶೇ. 31.5ರಲ್ಲಿ ನಿಂತಿದೆ. ಮೇಲಿನ ಎರಡೂ ಅನುಪಾತಗಳು ಬ್ಯಾಂಕುಗಳ ಕೈಯಲ್ಲಿ ಉಳಿಯುವ ಹಣದ ಮೊಬಲಗನ್ನು ಆದಷ್ಟು ಕಡಿಮೆ ಮಾಡುವಲ್ಲಿ ಸಹಾಯ ಮಾಡು ತ್ತವೆ. ಬ್ಯಾಂಕುಗಳು ಮೇಲಿನ ಷರತ್ತುಗಳನ್ನು ಪಾಲಿಸಿ ಉಳಿಯುವ ಹಣದಲ್ಲಿ ಹೆಚ್ಚು ಲಾಭ ಪಡೆಯಲು, ಹೆಚ್ಚು ಆದಾಯ ತರುವ ವ್ಯವಹಾರಗಳ ಕಡೆ ಗಮನ ಹರಿಸಲಾರಂಭಿಸಿದವು. ಈ ರೀತಿ ಬ್ಯಾಂಕುಗಳು ಸಂಪೂರ್ಣವಾಗಿ ಲಾಭ ತರುವ ವ್ಯವಹಾರಗಳಲ್ಲಿ ಹಣ ತೊಡಗಿಸಲು ಪ್ರಾರಂಭಿಸಿದರೆ ರಾಷ್ಟ್ರೀಕರಣಗೊಳಿಸಲು ಇದ್ದ ಮುಖ್ಯ ಕಾರಣಗಳಲ್ಲೊಂದಾದ ಗ್ರಾಮೀಣ ಜನಜೀವನದ ಸುಧಾರಣೆಯಲ್ಲಿ ಎಲ್ಲಿ ಹಿನ್ನಡೆಯುಂಟಾಗುವುದೋ ಎಂದು ಹೆದರಿ, ಭಾರತ ಸರಕಾರ ಬ್ಯಾಂಕುಗಳ ಆದ್ಯತಾವಲಯದಲ್ಲಿ ಒಟ್ಟು ಸಾಲದ ಶೇ. 40ರಷ್ಟು ಇರಬೇಕೆಂದೂ ಆದರಲ್ಲಿ ಕೃಷಿ ಕ್ಷೇತ್ರಕ್ಕೆ ಶೇ. 18ರಷ್ಟು ಹಾಗೂ ಕೆಳವರ್ಗದ ಜನರಿಗೆ ನೀಡುವ ಸಾಲ ಶೇ. 10ರಷ್ಟಿರಬೇಕೆಂದೂ ಸೂಚನೆ ನೀಡಿತು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ

ಹೀಗೆ ಬಲವಂತವಾಗಿಯಾದರೂ, ಕೆಲವು ಕ್ಷೇತ್ರಗಳಲ್ಲಿ ಸಾಲ ಗಳನ್ನು ಬ್ಯಾಂಕಿನಿಂದ ದೊರಕಿಸಿಕೊಡುವ ಸರಕಾರದ ಯೋಜನೆಯ ಮುಂದಿನ ಹೆಜ್ಜೆಯಾಗಿ, ಗ್ರಾಮೀಣ ಭಾಗದಲ್ಲೇ ಜನಗಳಿಗೆ ಹೆಚ್ಚಿನ ಸಹಾಯ ಮಾಡುವ ಉದ್ದೇಶದಿಂದ ಇತರ ಪ್ರಾಯೋಜಿತ ಯೋಜನೆಗಳ ಜೊತೆಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯ

(ಮುಂದಿನ ಪುಟ ನೋಡಿ)

ಭಾರತೀಯ ಬ್ಯಾಂಕುಗಳು ಉಳಿಯಲು ಸಾಧ್ಯವೆ?

(8ನೇ ಪುಟದಿಂದ)

ಬ್ಯಾಂಕುಗಳ ಒಟ್ಟುಗೂಡಿಸುವಿಕೆ

ಸಾರ್ವಜನಿಕ ಕ್ಷೇತ್ರದಲ್ಲಿರುವ ವಾಣಿಜ್ಯ ಬ್ಯಾಂಕುಗಳನ್ನು ಒಟ್ಟುಗೂಡಿಸಿ ನಾಲ್ಕು ಅಥವಾ ಐದು ಪ್ರಾದೇಶಿಕ ಬ್ಯಾಂಕುಗಳ ನ್ನಾಗಿ ಪರಿವರ್ತಿಸುವ ಕುರಿತಾಗಿ ವಿಚಾರ ಮಾಡಬೇಕು. ನಷ್ಟದಲ್ಲಿ ಸಾಗಿರುವ ಬ್ಯಾಂಕುಗಳನ್ನು ಲಾಭಗಳಿಸುತ್ತಿರುವ ಬ್ಯಾಂಕುಗಳೊಂದಿಗೆ ವಿಲೀನಗೊಳಿಸಬೇಕು.

ಸಾಲ ವಸೂಲಾತಿ

ಬ್ಯಾಂಕ್ ತಾನು ಸಾಲ ನೀಡಿದರೆ ತನ್ನ ಕೆಲಸ ಮುಗಿಯಿತೆಂದು ತಿಳಿಯಬಾರದು. ಕೊಟ್ಟ ಸಾಲವನ್ನು ವಸೂಲಿ ಮಾಡುವದರಲ್ಲಿ ನಿಷ್ಠೆ ತೋರಬೇಕು. ಸಾಲ ವಸೂಲಿ ಮಾಡುವದು ತಮ್ಮ ಹೊಣೆ ಎಂದು ತಿಳಿದು ಕ್ಷೇತ್ರಸಿಬ್ಬಂದಿ ಆ ನಿಟ್ಟಿನಲ್ಲಿ ಕ್ರಿಯಾಶೀಲರಾಗ ಬೇಕು. ಬ್ಯಾಂಕ್ ನೀಡುವ ಸಾಲಗಳ ವಸೂಲಾತಿಗಾಗಿ ಪ್ರತ್ಯೇಕ ನ್ಯಾಯಾಧಿಕರಣದ ಸ್ಥಾಪನೆಗೆ ಸರಕಾರದ ಮಂಜೂರಾತಿ ಸಿಕ್ಕಿದೆ. ಇದರಿಂದಾಗಿ ಸಾಲ ವಸೂಲಾತಿಗಾಗಿ ಹೂಡುವ ದಾವೆಗಳು ಶೀಘ್ರ ಇತ್ಯರ್ಥಗೊಳ್ಳುವ ಸಂಭವವಿದೆ. ಇದ್ದರ ಉಪಯೋಗವನ್ನು ಬ್ಯಾಂಕುಗಳು ಪಡೆದುಕೊಳ್ಳಬೇಕು.

ಮೇಲೆ ತಿಳಿಸಿದ ಸಲಹೆಗಳನ್ನು ಒಪ್ಪಿಕೊಂಡು ಕಾರ್ಯರೂಪದಲ್ಲಿ ತರುವುದರ ಜತೆಗೆ ಬ್ಯಾಂಕುಗಳ ಸಿಬ್ಬಂದಿಯಲ್ಲಿ ವೃತ್ತಿಪರತೆ ಬೆಳೆ ದರೆ ಖಂಡಿತವಾಗಿ ಭಾರತೀಯ ಬ್ಯಾಂಕುಗಳು ಉಳಿಯಲು ಸಾಧ್ಯ. ಭಾರತದ ಅರ್ಥವ್ಯವಸ್ಥೆಯ ಜೀವನಾಡಿಯಾಗಿರುವ ನಮ್ಮ ಬ್ಯಾಂಕು ಗಳು ಉಳಿಯಲೇ ಬೇಕು. ಇದಕ್ಕಾಗಿ, ಇಂದಿರುವ ಸ್ಪರ್ಧೆಯನ್ನು ಧೈರ್ಯವಾಗಿ ಎದುರಿಸಲು ನಮ್ಮ ಬ್ಯಾಂಕುಗಳಿಗೆ ನಮ್ಮಗಳ ಮತ್ತು ಸರಕಾರದ ಸಹಕಾರ ಅಗತ್ಯ. ●

ಕ್ರಮವೆಂಬ ಹೊಸ ಯೋಜನೆಯನ್ನು ಹಾಕಿಕೊಂಡಿತು. ಈ ಯೋಜನೆಯಲ್ಲಿ ಹೆಚ್ಚಿನ ಜನರಿಗೆ ಸೌಲಭ್ಯವನ್ನು ವಿಸ್ತರಿಸಲು ಸಹಾಯ ಧನವನ್ನೂ ಕೂಡ ನೀಡಲಾಯಿತು. 6ನೇ ಪಂಚವಾರ್ಷಿಕ ಯೋಜನೆ ಕಾಲದಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯ ಕ್ರಮದಲ್ಲಿ ನೀಡಿದ ಸಾಲ 3,210 ಕೋಟಿ ರೂ. ಆಗಿದ್ದರೆ, ಯೋಜನೆಯ ಫಲಾನುಭವಿಗಳ ಸಂಖ್ಯೆ ಒಂದು ಕೋಟಿ ಅರವತ್ತಾರು ಲಕ್ಷ. ಬ್ಯಾಂಕುಗಳು ಪ್ರಾಯೋಜಿತ ಕಾರ್ಯಕ್ರಮ ಗಳಲ್ಲಿ ತೊಡಗಿಸಿದ ಒಟ್ಟು ಹಣದಲ್ಲಿ ಶೇ. 49ರಷ್ಟು ಪಾಲು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ್ದಾಗಿತ್ತು. ಇಷ್ಟರ ಮಟ್ಟಿನ ಹಣ ನೀಡಿ ಹೆಚ್ಚಿನ ಫಲಾನುಭವಿಗಳಿಗೆ ಸಾಲದ ಹರಿ ವನ್ನು ಹೆಚ್ಚಿಸಿದರೂ ಕೂಡ ಈ ಯೋಜನೆಯಲ್ಲಿ ವಸೂಲಾತಿಯ ಮಟ್ಟ ಶೇ. 10ನ್ನು ಕೂಡ ದಾಟಲಿಲ್ಲ. ಇದು ಈ ಯೋಜನೆಯ ವೈಫಲ್ಯವೋ ? ಫಲಾನುಭವಿಗಳನ್ನು ಗುರುತಿಸುವ ಕೆಲಸದಲ್ಲಿನ ನಿರ್ಲಕ್ಷ್ಯವೋ ? ಅಥವಾ ಸೌಲಭ್ಯ ಸರಿಯಾದ ಜನಗಳಿಗೆ ಮುಟ್ಟದೆ ಮಧ್ಯವರ್ತಿಗಳ ಪಾಲಾಗಿ, ಪರಿಣಾಮವಾಗಿ ಬ್ಯಾಂಕಿ ನವರು ವಸೂಲು ಮಾಡಲಾಗದ ಅಸಹಾಯಕತೆಯೋ ? ತಿಳಿಯು ತ್ತಿಲ್ಲ. ಆದರೂ ಸರಕಾರ ಈ ಕಾರ್ಯಕ್ರಮದಲ್ಲಿ ಹೆಚ್ಚು ಹಣ ತೊಡಗಿಸಬೇಕೆಂಬ ಬಲವಂತ ಮಾಡುತ್ತಿದೆ. ಈಚೆಗಂತೂ ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ಫಲಾನುಭವಿಗೆ ನೀಡುವ ಹಣದ ಮೊತ್ತವನ್ನು ಹೆಚ್ಚಿಸುವ, ಮರುಪಾವತಿ ಅವಧಿಯನ್ನು ಹೆಚ್ಚಿಸುವ ನಿರ್ಣಯ ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಿಂದ ನಿಜವಾಗಿಯೂ ಗ್ರಾಮೀಣ ಜನಜೀವನ ಸುಧಾರಣೆಯಾಗುತ್ತಿ ದೆಯೇ ಅಥವಾ ಪ್ರತಿಯೊಬ್ಬ ಗ್ರಾಮವಾಸಿಯನ್ನೂ ಸಾಲಗಾರ ನನ್ನಾಗಿ ಮಾಡುವಷ್ಟರಲ್ಲಿಯೇ ಇದರ ಸಾಧನೆಯಾಗಿದೆಯೇ ಎಂಬು ದನ್ನು ಅಧ್ಯಯನ ಮಾಡಿಯೇ ತಿಳಿದುಕೊಳ್ಳುವ ಆಗತ್ಯವಿದೆ.

ಅಗ್ರ ಬ್ಯಾಂಕಿಂಗ್

ಇದರ ಜೊತೆಗೆ ರಿಸರ್ವ್ ಬ್ಯಾಂಕು 1969ರಲ್ಲೇ ಅಗ್ರ ಬ್ಯಾಂಕಿಂಗ್ ಯೋಜನೆಯನ್ನು ಜಾರಿಗೆ ತಂದಿತು. ಇದರ ಮುಖ್ಯ ಉದ್ದೇಶ ಪ್ರತಿ ಜಿಲ್ಲೆಯ ಗ್ರಾಮೀಣ ಭಾಗದ ಅರ್ಥವ್ಯವಸ್ಥೆಯು ಬಯಸುವ ಉದರಿ ನೀಡುವುದಕ್ಕೆ ಬ್ಯಾಂಕೊಂದು (ಅಗ್ರ ಬ್ಯಾಂಕ್) ಉದರಿ ನೀಡುವ ಸಂಸ್ಥೆಗಳ ಸಂಯೋಜಿತ ಸಹಭಾಗಿತ್ವದ ನಾಯಕತ್ವವನ್ನು ವಹಿಸುವುದಾಗಿದೆ. ಈ ಯೋಜನೆಯಡಿ ಸ್ಥಾಪಿಸಲಾದ ಅನೇಕ ವ್ಯವಸ್ಥೆಗಳು ಕೆಳಮಟ್ಟದಲ್ಲಿನ ತೊಂದರೆಗಳನ್ನು ಅರಿತುಕೊಳ್ಳಲು ನಿಸ್ಸಂಶಯವಾಗಿ ಹೆಚ್ಚಿನ ನೆರವನ್ನು ನೀಡಿವೆ. ಈ ಯೋಜನೆಯ ಇನ್ನೊಂದು ವಿಸ್ತರಣೆ ಸೇವಾ ಕ್ಷೇತ್ರ ಅಭಿಗಮನ. ಒಬ್ಬ ಸಾಲಗಾರ ಒಂದೇ ಜಮೀನಿನ ಮೇಲೆ ಬೇರೆ ಬೇರೆ ಬ್ಯಾಂಕುಗಳಿಂದ ಸಾಲ ಪಡೆಯುವುದನ್ನು ತಡೆಯುವುದು ಇದರ ಮುಖ್ಯ ಉದ್ದೇಶ ವಾದರೆ, ಒಂದು ಜಿಲ್ಲೆಯನ್ನು ವಿವಿಧ ಕ್ಷೇತ್ರಗಳನ್ನಾಗಿ ವಿಂಗಡಿಸಿ, ಒಂದೊಂದು ಕ್ಷೇತ್ರವನ್ನು ಒಂದೊಂದು ಬ್ಯಾಂಕಿನ ಶಾಖೆಗೆ ವಹಿಸಿ, ಅವುಗಳು ಆಯಾ ಕ್ಷೇತ್ರದಲ್ಲಿನ ಒಂದೊಂದು ಹಳ್ಳಿಗೂ ಉದರಿ ಯೋಜನೆಯನ್ನು (ಕ್ರೆಡಿಟ್ ಪ್ಲಾನ್) ತಯಾರಿಸಿ, ಆಯಾ ಬ್ಯಾಂಕುಗಳು ಆಯಾ ಕ್ಷೇತ್ರಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯ ಮಾಡಬೇಕೆಂಬ ಉದ್ದೇಶ ಇದರ ಇನ್ನೊಂದು ಮುಖ್ಯ ವಾದ ಅಂಶ.

ಈ ಯೋಜನೆ ಸದುದ್ದೇಶದಿಂದ ಕೂಡಿದ್ದಾದರೂ, ಇದರ ಸಾಫಲ್ಯ-ವೈಫಲ್ಯಗಳ ತುಲನೆ ಮಾಡಿದಾಗ ವೈಫಲ್ಯಗಳೇ ಹೆಚ್ಚಾಗಿ ಯೋಜನೆ ಅರ್ಥವಿಲ್ಲದಂತೆ ಆಗಿದೆ. ಈ ಯೋಜನೆಯಂತೆ ಒಂದು ಕ್ಷೇತ್ರದ ಸಂಪೂರ್ಣ ಬ್ಯಾಂಕಿಂಗ್ ಅವಶ್ಯಕತೆಗಳನ್ನು ಒಂದು ಬ್ಯಾಂಕಿಗೆ ವಹಿಸಿರುವುದರಿಂದ, ಒಬ್ಬ ಸಾಲಗಾರ ತನಗಿಷ್ಟವಿರಲಿ, ಬಿಡಲಿ ತನ್ನ ಕ್ಷೇತ್ರದ ಬ್ಯಾಂಕಿನಲ್ಲೇ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು. ಒಂದು ವೇಳೆ ಅವನಿಗೂ ಆ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ ಸರಿಹೊಂದದಿದ್ದರೆ, ಅವನಿಗೆ ಬೇರೆ ಬ್ಯಾಂಕಿಗೆ ಹೋಗುವ ಆಯ್ಕೆಯ ಸ್ವಾತಂತ್ರ್ಯ ಇರುವುದಿಲ್ಲ. ಈ ಒಂದು ನ್ಯೂನತೆಯು ಈ ಯೋಜನೆಯ ವೈಫಲ್ಯಕ್ಕೆ ಹೆಚ್ಚಿನ ಕಾಣಿಕೆ ಸಲ್ಲಿಸಿ, ಇಂದು ಈ ಯೋಜನೆ ಮೂಲೆಗುಂಪಾಗುವಂತಾಗಿದೆ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಂಗ್

ಭಾರತ ಸರಕಾರವು ನಿಯಮಿಸಿದ ಕಾರ್ಯತಂಡದ ಶಿಫಾರಸ್ಸಿ ನಂತೆ 1975ರಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಈ ಬ್ಯಾಂಕುಗಳನ್ನು ಸ್ಥಾಪಿಸಲು ಬೇಕಾದ ಬಂಡವಾಳಕ್ಕಾಗಿ ಭಾರತ ಸರಕಾರ ಶೇ. 50ರಷ್ಟನ್ನು ಆಯಾ ರಾಜ್ಯ ಸರಕಾರಗಳು ಶೇ. 15ರಷ್ಟು ಹಾಗೂ ಆಯಾ ಪ್ರಾಯೋಜಿತ ಬ್ಯಾಂಕುಗಳು ಶೇ 35ರಷ್ಟನ್ನು ಕೊಡುವ ಒಪ್ಪಂದಕ್ಕೆ ಬಂದವು. ಈ ಬ್ಯಾಂಕುಗಳ ಸ್ಥಾಪನೆಯ ಮುಖ್ಯ ಉದ್ದೇಶ ಸಹಕಾರಿ ಬ್ಯಾಂಕುಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಗ್ರಾಮೀಣತೆಯ ಸೊಗಡನ್ನು ಉಳಿಸಿಕೊಂಡು, ವಾಣಿಜ್ಯ ಬ್ಯಾಂಕುಗಳಿಗಿರುವಂತಹ ಹೊಸ ದೃಷ್ಟಿಕೋನವನ್ನು ನೀಡಿ ತನ್ಮೂಲಕ ಹೆಚ್ಚಿನ ಗ್ರಾಮೀಣ ಬಡಜನರನ್ನು ತಲುಪುವುದಾಗಿತ್ತು. ಈ ಬ್ಯಾಂಕುಗಳ ಗುರಿ ಗುಂಪು (Target Group) ಸಣ್ಣ ಮತ್ತು ಅತಿಸಣ್ಣ ಬೆಳೆಗಾರರು, ಕೃಷಿ ಕಾರ್ಮಿಕರು ಹಾಗೂ ಭೂರಹಿತ ಕೃಷಿಕಾರ್ಮಿಕರೇ ಆಗಿತ್ತು.

ಗ್ರಾಮೀಣ ಬ್ಯಾಂಕುಗಳು ಯಾವ ಸದುದ್ದೇಶವನ್ನು ಸಾಧಿಸಲು ಸ್ಥಾಪಿಸಲ್ಪಟ್ಟಿದ್ದವೋ ಅದನ್ನು ಸಾಧಿಸಲು ಬಹಳ ಶೀಘ್ರಗತಿಯಲ್ಲಿ ಶಾಖಾ ವಿಸ್ತರಣೆಮಾಡಿ ಆ ಮೂಲಕ ಗುರಿಯನ್ನು ಈಡೇರಿಸಲು ಪ್ರಯತ್ನಪಟ್ಟವು. ಆರಂಭದ ದಿನಗಳಲ್ಲಿ ಈ ಬ್ಯಾಂಕುಗಳು ಬಹಳ ಚೆನ್ನಾಗಿಯೇ ಕಾರ್ಯ ನಿರ್ವಹಿಸಿದರೂ ನಂತರದ ದಿನಗಳಲ್ಲಿ ಆಡಳಿತಾತ್ಮಕ ತೊಂದರೆಗಳೇ ತಲೆದೋರಿ ಅವುಗಳ ಲಾಭಪ್ರದತೆ ತೀವ್ರ ರೀತಿಯಲ್ಲಿ ಇಳಿಮುಖವಾಗ ತೊಡಗಿತು. ಅವುಗಳು ಇತ್ತ ಸರಕಾರಗಳಿಗೂ ಬೇಡವಾಗಿ, ಅತ್ತ ಪ್ರಾಯೋಜಿಸಿದ ವಾಣಿಜ್ಯ ಬ್ಯಾಂಕಿಗೂ ಬೇಡವೆನಿಸುವ ಸ್ಥಿತಿ ತಲುಪಿದವು. ಹೀಗೆ ಅವುಗಳ

ಅಸ್ತಿತ್ವಕ್ಕೆ ಧಕ್ಕೆಯಾಗುವ ಪ್ರಮೇಯವಿರುವಾಗ ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ದೇಶದಲ್ಲಿರುವ ಎಲ್ಲಾ ಗ್ರಾಮೀಣ ಬ್ಯಾಂಕುಗಳನ್ನು ಒಂದುಗೂಡಿಸಬೇಕೆಂಬ ಕೂಗು ಕೇಳಿಬರುತ್ತಿದೆ. ಆ ಕೂಗು ಸಫಲಗೊಳ್ಳುವುದೇ? ಎಂಬುದನ್ನು ಕಾದುನೋಡಬೇಕು. ಹೀಗೆ ಈ ಒಂದು ಗ್ರಾಮೀಣ ಬ್ಯಾಂಕ್ ಸ್ಥಾಪನೆಯಿಂದ ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಗೆ ಹೊಸ ಚಾಲನೆ ಸಿಗುವುದೆಂಬ ಕನಸು ಹುಸಿಯಾಯಿತು ಎಂದು ಹೇಳಬಹುದು.

ಈವರೆಗೆ ಗ್ರಾಮೀಣ ಬ್ಯಾಂಕಿಂಗನ್ನು ವಿಸ್ತರಿಸಲು, ಗ್ರಾಮೀಣ ಜನಜೀವನವನ್ನು ಸುಧಾರಿಸಲು ರಾಷ್ಟ್ರೀಕರಣದ ನಂತರ ಕೈಗೊಂಡ ಹಲವು ಯೋಜನೆಗಳಲ್ಲಿ ಕೆಲವನ್ನು ಮಾತ್ರ ಚರ್ಚಿಸಲಾಗಿದೆ. ಇನ್ನೂ ಹಲವಾರು ಯೋಜನೆಗಳ ಸಾಫಲ್ಯ ವೈಫಲ್ಯಗಳ ತುಲನೆ ಮಾಡಬಹುದಾದರೂ ಆ ಯೋಜನೆಗಳಲ್ಲಿ ಈವರೆಗೆ ಕೊಡಮಾಡಿರುವ ಉದರಿಯ ಮೊತ್ತ, ಹಾಗೂ ಫಲಾನುಭವಿಗಳ ಸಂಖ್ಯೆ ಹೆಚ್ಚಿಲ್ಲದಿರುವುದರಿಂದ ಮೇಲ್ಕಂಡ ಯೋಜನೆಗಳ ಸಾಫಲ್ಯ ವೈಫಲ್ಯಗಳನ್ನೇ ಹೆಚ್ಚಾಗಿ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ವಸೂಲಾತಿ

ಇನ್ನು ವಾಣಿಜ್ಯ ಬ್ಯಾಂಕುಗಳ ವಸೂಲಾತಿಯ ಕ್ಷೇತ್ರಕ್ಕೆ ಬಂದರೆ, ಕೃಷಿಕ್ಷೇತ್ರಕ್ಕೆ ನೀಡಲಾದ ನೇರ ಹಾಗೂ ಪರೋಕ್ಷ ಸಾಲಗಳ ವಸೂಲಾತಿ ಮಟ್ಟ ಶೇ. 58.6 ಆಗಿತ್ತು. ಬೇಸಾಯಗಾರರು ಮಳೆಯನ್ನೇ ಅವಲಂಬಿಸಿ, ಹೊಸ ಹೊಸ ಬೇಸಾಯದ ತಂತ್ರಜ್ಞಾನಗಳನ್ನು ಹೆಚ್ಚು ಅಳವಡಿಸಿಕೊಳ್ಳದೇ ಸಾಂಪ್ರದಾಯಿಕ ಬೇಸಾಯಪದ್ಧತಿಯಲ್ಲೇ ಹುದುಗಿರುವುದು ಕಡಿಮೆ ವಸೂಲಾತಿಗೆ ಒಂದು ಕಾರಣವಾದರೆ, ಪ್ರಾಯೋಜಿತ ಕಾರ್ಯಕ್ರಮಗಳ ನಿರ್ವಹಣೆಯಲ್ಲಿನ ದೋಷಗಳೂ ಬಹುಮಟ್ಟಿಗೆ ಕಾರಣವೆನ್ನಬಹುದು.

ಬ್ಯಾಂಕುಗಳು ಸಾಲ ನೀಡುವಾಗ ತಮ್ಮ ಸಂಘಟನೆಯನ್ನು ಸಜ್ಜುಗೊಳಿಸಿ, ಯೋಜನಾತ್ಮಕವಾಗಿ ಸಾಲ ನೀಡಿದಾಗ ಹಾಗೂ ವಸೂಲಾತಿಯ ಆಂದೋಲನವನ್ನು ನಡೆಸಿದಾಗ ವಸೂಲಾತಿಯ ಮಟ್ಟ ಉತ್ತಮಗೊಂಡಿದೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ.

ಬಹು ಸಂಖ್ಯೆಯ ಸಣ್ಣ ಉದರಿಯ ಮಂಜೂರಾತಿ ಹಾಗೂ ನಿರ್ವಹಣೆಗಾಗಿ ಹೆಚ್ಚಿನ ವೇಳೆ ತಿನ್ನುವ ಹಾಗೂ ಮಾನವಶಕ್ತಿಯ ತೀವ್ರ ಬಳಕೆಯನ್ನು ಬಯಸುವ ಗ್ರಾಮೀಣ ಬ್ಯಾಂಕಿಂಗ್ ಎಂಬುದು ಖರ್ಚಿನ ಪ್ರಸ್ತಾಪವೆನ್ನುವ ತೀರ್ಮಾನಕ್ಕೆ ಬರಲಾಗಿದೆ. ಇಳಿದ ವಸೂಲಾತಿ ಮಟ್ಟ ಹಾಗೂ ಇಳಿಸಿದ ಬಡ್ಡಿದರಗಳೂ ಈ ತೀರ್ಮಾನಕ್ಕೆ ಹೆಚ್ಚಿನ ಪುಷ್ಟಿ ದೊರೆಯುವಂತೆ ಮಾಡಿದೆ. ಇದರಿಂದ ಗ್ರಾಮೀಣ ಬ್ಯಾಂಕಿಂಗ್ ಬಗ್ಗೆ ಬ್ಯಾಂಕುಗಳ ಆಸ್ಥೆ, ರಾಷ್ಟ್ರೀಕರಣಗೊಂಡಾಗ ಇದ್ದ ಆಸ್ಥೆಗಿಂತ ಕಡಿಮೆಯಾಗಿದೆ.

ಲಾಭಪ್ರದತೆ

ವಾಣಿಜ್ಯ ಬ್ಯಾಂಕುಗಳ ಲಾಭಪ್ರದತೆ ಕೆಲವು ಸಮಯದಿಂದ ಕಠಿಣ ಪರಿಸ್ಥಿತಿಯಲ್ಲಿದೆ. ಇದಕ್ಕೆ ಕಾರಣಗಳಾಗಿ ಏರುತ್ತಿರುವ ಠೇವಣಿ ವೆಚ್ಚ, ಇಳಿಯುತ್ತಿರುವ ಉದರಿ ಇಳುವರಿ, ಹೆಚ್ಚಾಗುತ್ತಿರುವ ಸಿಬ್ಬಂದಿ ವೆಚ್ಚ—ಇವುಗಳನ್ನು ಹೆಸರಿಸಬಹುದು. ತಮ್ಮ ಆದಾಯವನ್ನು ಹೆಚ್ಚಿಸಿ, ಲಾಭದಾಯಕತೆಯನ್ನು ಹೆಚ್ಚಿಸುವ ಯೋಜನೆಯ ನಿಟ್ಟಿನಲ್ಲಿ, ಗ್ರಾಮೀಣ ಉದರಿಯ ಇಳುವರಿ ಬೇರೆ ಕ್ಷೇತ್ರದ ಉದರಿಯ ಇಳುವರಿಗಿಂತ ಕಡಿಮೆ ಇದ್ದು, ಅಲ್ಲಿ ಬರುವ ಆದಾಯದ ಮೊತ್ತ ಕೂಡ ಕಡಿಮೆ ಇರುವುದರಿಂದ, ಬ್ಯಾಂಕುಗಳು ತಮ್ಮ ಆಸಕ್ತಿಯನ್ನು ಹೆಚ್ಚಿನ ಲಾಭ ತರುವ ಕ್ಷೇತ್ರಗಳ ಕಡೆಗೆ ಹರಿಸುತ್ತಿವೆ.

ಸುಧಾರಣೆಯ ಹಾದಿಯಲ್ಲಿ

ಈ ಮಧ್ಯೆ 1991ರಿಂದ ಪ್ರಾರಂಭಗೊಂಡ ಆರ್ಥಿಕ ಸುಧಾರಣೆಯ ಪ್ರಕ್ರಿಯೆಗಳು ನರಸಿಂಹಂ ಸಮಿತಿಯ ಶಿಫಾರಸಿನಂತೆ ಆಸ್ತಿ ವರ್ಗೀಕರಣ ಸೂಚನೆಗಳು, ವಸೂಲಾಗದ ಸಾಲಗಳಿಗೆ ಮಾಡಬೇಕಾದ ಶೇಕಡಾವಾರು ವ್ಯವಸ್ಥೆಗಳು ಇವುಗಳ ಹೊಡೆತದಿಂದ ಕಳೆದೆರಡು ವರ್ಷಗಳಲ್ಲಿ ವ್ಯಾವಹಾರಿಕವಾಗಿ ಲಾಭಗಳಿಸಿದರೂ ಆಖೈರು ಲೆಕ್ಕದಲ್ಲಿ ಕೆಲವು ಬ್ಯಾಂಕುಗಳು ನಷ್ಟವನ್ನು ಘೋಷಿಸಬೇಕಾಯಿತು. ಇದರಿಂದ ಜನಗಳಿಗೆ ಬ್ಯಾಂಕುಗಳಲ್ಲಿ ಇದ್ದ ವಿಶ್ವಾಸ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಬ್ಯಾಂಕುಗಳು "ನಾವು ನಿಜವಾಗಿ ಲಾಭಗಳಿಸಿದ್ದೇವೆ. ಆದರೆ, ಆಸ್ತಿವರ್ಗೀಕರಣ ಮಾನಕಗಳಿಂದ ಗಣನೀಯವಾಗಿ ಉಪಬಂಧ ಮಾಡಬೇಕಾದ್ದರಿಂದ ನಷ್ಟ ಘೋಷಿಸಿದ್ದೇವೆ" ಎಂದು ಜನರಿಗೆ ಪ್ರಚುರಪಡಿಸಲು ಬಹಳ ಹೆಣಗಾಡಿದವು. ಈ ವರ್ಷದಲ್ಲಿ ಬಹುತೇಕ ಬ್ಯಾಂಕುಗಳು ತಮ್ಮ ನಷ್ಟವನ್ನು ತೊಡೆದುಹಾಕಿ ಲಾಭಗಳಿಸಲು ವಿವಿಧ ಯೋಜನೆಗಳನ್ನು ಹಾಕಿಕೊಂಡು ಕಾರ್ಯ ನಿರ್ವಹಿಸುತ್ತಿವೆ.

ಈ ಮಧ್ಯೆ ರಾಷ್ಟ್ರೀಕರಣಗೊಳಿಸಿದ ಬ್ಯಾಂಕುಗಳಲ್ಲಿರುವ ಸರಕಾರಿ ಬಂಡವಾಳದ ಕೆಲಭಾಗವನ್ನು ಜನಗಳಿಗೆ ನೀಡಿ, ಆ ಮೂಲಕ ಬ್ಯಾಂಕುಗಳ ಬಂಡವಾಳವನ್ನು ಹೆಚ್ಚಿಸುವ ಒಂದು ಯೋಜನೆಯ ಬಗ್ಗೆ ಚಿಂತನೆ ನಡೆಯುತ್ತಿದೆ. ಭಾರತದ ಪ್ರಮುಖ ಬ್ಯಾಂಕುಗಳಲ್ಲಿ ಒಂದಾದ ಭಾರತೀಯ ಸ್ಟೇಟ್ ಬ್ಯಾಂಕು ಕಳೆದ ವರ್ಷ ಸಾರ್ವಜನಿಕ ಷೇರು ನೀಡಿಕೆಯಿಂದ ತನ್ನ ಬಂಡವಾಳವನ್ನು ರೂ. 200 ಕೋಟಿಯಿಂದ ರೂ. 1,250 ಕೋಟಿಗೆ ಹೆಚ್ಚಿಸಿಕೊಂಡಿತು. ಈ ಕಾರ್ಯ ಇತರ ಬ್ಯಾಂಕುಗಳಿಗೂ ಸ್ವಲ್ಪ ಮಟ್ಟಿನ ಸ್ಫೂರ್ತಿ ನೀಡಿದೆ. ಬರುವ ವರ್ಷಗಳಲ್ಲಿ ಅವುಗಳು ಬಂಡವಾಳ ಮಾರುಕಟ್ಟೆಯ ಹಾದಿಯೆಡೆ ನಡೆದರೆ ಅಚ್ಚರಿಯೇನಿಲ್ಲ.

ಕಾಲಕ್ರಮೇಣ ಎಲ್ಲಾ ಬ್ಯಾಂಕುಗಳು ಜನರಿಂದ ಹಣ ಸಂಗ್ರಹಿಸಿದಾಗ ಅವುಗಳು ತಮ್ಮ ಶೇರುದಾರರನ್ನು ದೃಷ್ಟಿಯಲ್ಲಿರಿಸಿ

(14ನೇ ಪುಟ ನೋಡಿ)

ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆ

ಟಿ. ಜಿ. ವಿಜಯಕುಮಾರ್

ಭಾರತೀಯ ಸ್ಟೇಟ್ ಬ್ಯಾಂಕ್, ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು

ನಿರುದ್ಯೋಗ ನಮ್ಮ ದೇಶವನ್ನು ಕಾಡುತ್ತಿರುವ ಒಂದು ತೀವ್ರ ಸಮಸ್ಯೆ. ಇದರ ನಿವಾರಣೆಗಾಗಿ, ಉದ್ಯೋಗ ಸೃಷ್ಟಿಗಾಗಿ, ಇದುವರೆಗೆ ಹಲವು ಯೋಜನೆಗಳು ಬಂದು ಹೋಗಿವೆ. ಈ ದೊಡ್ಡ ಪಟ್ಟಿಗೆ ಇತ್ತೀಚಿನ ಸೇರ್ಪಡೆಯೆಂದರೆ ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆ.

ನಿರುದ್ಯೋಗ ನಮ್ಮ ದೇಶದ ಮೂಲಭೂತ ಸಮಸ್ಯೆಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯಾನಂತರವಂತೂ ಹಲವಾರು ಕಾರಣಗಳಿಂದ ಈ ಸಮಸ್ಯೆ ತೀವ್ರ ಸ್ವರೂಪದಲ್ಲಿ ಬೆಳೆದು ನಿಂತಿದೆ. ಪ್ರಮುಖವಾಗಿ ಜನಸಂಖ್ಯಾ ಸ್ಫೋಟವನ್ನು ಇಲ್ಲಿ ನಾವು ಹೆಸರಿಸಬಹುದು. ಇದರ ಜೊತೆಗೆ ನಮ್ಮ ದೇಶದ ಸುಮಾರು ಮುಕ್ಕಾಲು ಭಾಗ ಜನಸಂಖ್ಯೆ ಕೃಷಿ ಮತ್ತು ಸಂಬಂಧಪಟ್ಟ ಉದ್ಯೋಗಗಳನ್ನು ಅವಲಂಬಿಸಿದೆ. ಕೃಷಿ ಮುಂಗಾರಿನೊಂದಿಗೆ ಆಡುವ ಜೂಜಾಟವಾಗಿರುವುದರಿಂದ, ಅದನ್ನು ಅವಲಂಬಿಸಿದವರು ಅದನ್ನು ತ್ಯಜಿಸಿ ಬೇರೆ ಉದ್ಯೋಗಗಳತ್ತ ಮುಖ ಮಾಡತೊಡಗಿದರು. ಇದರಿಂದಾಗಿ ನಮ್ಮಲ್ಲಿನ ನಿರುದ್ಯೋಗ ಸಮಸ್ಯೆ ಇನ್ನಷ್ಟು ತೀವ್ರವಾಯಿತು.

ಈ ನಿರುದ್ಯೋಗ ಸಮಸ್ಯೆ ಕೇವಲ ನಿರುದ್ಯೋಗಿಗಳನ್ನಷ್ಟೇ ಕಾಡುವುದಿಲ್ಲ. ಅದು ದೇಶದ ಅರ್ಥವ್ಯವಸ್ಥೆಯ ಮುನ್ನಡೆಗೆ ಅಡ್ಡಿಯೆನಿಸಿದೆ. ಇಂತಹ ಮಾರಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ನಮ್ಮ ಮೊದಲ ಪ್ರಧಾನಿ ದಿವಂಗತ ಜವಾಹರಲಾಲ್ ನೆಹರೂರವರ ಕಾಲದಿಂದ ಇಂದಿನವರೆಗೂ ಅನೇಕ ಯೋಜನೆಗಳು/ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನೆಹರೂ ಅವರು ಸಮಾಜವಾದದ ನೆರಳಲ್ಲಿ ದೇಶದ ಉದ್ದಗಲಕ್ಕೂ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ, ಹಲವಾರು ಉದ್ಯೋಗಗಳನ್ನು ಸೃಷ್ಟಿಸಿದರು. ನಂತರದ ಹಂತದಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಗ್ರಾಮೀಣ ನಿರುದ್ಯೋಗಿಗಳ ನೆರವಿಗಾಗಿ ಆರಂಭಿಸಲಾಯಿತು. ಅಲ್ಲದೆ, ನಗರ ಪ್ರದೇಶದಲ್ಲಿರುವ ನಿರುದ್ಯೋಗಿಗಳಿಗೆ ಸ್ವಯಂ-ಉದ್ಯೋಗ ಆರಂಭಿಸಲು ಸಾಲಸೌಲಭ್ಯವನ್ನು ಒದಗಿಸುವ ಹಲವಾರು ಯೋಜನೆಗಳನ್ನು ಪ್ರಾರಂಭಿಸಲಾಯಿತು. ಅವು ನಗರ ಪ್ರದೇಶದ ಬಡ ಜನರ ಸ್ವಯಂ ಉದ್ಯೋಗ ಯೋಜನೆ (Sepup), ನಗರ ಪ್ರದೇಶದ ಸಣ್ಣ ಉದ್ದಿಮೆಗಳ ಯೋಜನೆ (SUME) ನಗರ ಪ್ರದೇಶದ ವಿದ್ಯಾವಂತರಿಗಾಗಿ ಸ್ವಯಂ ಉದ್ಯೋಗ ಯೋಜನೆ (SEEUY), ಇತ್ಯಾದಿ. ಈ ನಡುವೆ ದಿವಂಗತ ಪ್ರಧಾನಿ ರಾಜೀವ್ ಗಾಂಧಿಯವರು ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕಾಗಿ "ಜವಹರ್ ರೋಜ್‌ಗಾರ್ ಯೋಜನೆ"ಯನ್ನು ಆರಂಭಿಸಿದರು. ಇವುಗಳ ಜೊತೆಗೆ ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ನಿರುದ್ಯೋಗ ಸಮಸ್ಯೆಯ ನಿವಾರಣೆಯನ್ನು ಪ್ರಮುಖ ಗುರಿಯನ್ನಾಗಿ ಹೊಂದಲಾಯಿತು. ಆದರೆ ಈ ಎಲ್ಲ ಯೋಜನೆಗಳೂ ಅಲ್ಪ ಉದ್ಯೋಗ ಸೃಷ್ಟಿ, ಯೋಜನೆಯ ದುರ್ಬಳಕೆ, ಸೀಮಿತವ್ಯಾಪ್ತಿ, ಮತ್ತಷ್ಟು ನಿರುದ್ಯೋಗಿಗಳ ಸೇರ್ಪಡೆ ಮುಂತಾದ ಕಾರಣಗಳಿಂದ ನಿರುದ್ಯೋಗ ಸಮಸ್ಯೆಯನ್ನು ತೊಡೆದುಹಾಕುವಲ್ಲಿ ಅಲ್ಪಸ್ವಲ್ಪ ಯಶಸ್ಸನ್ನು ಸಾಧಿಸಿದರೂ ಪೂರ್ಣವಾಗಿ ಗುರಿ ಸಾಧಿಸಲಿಲ್ಲ.

ಈ ಮೇಲಿನ ಎಲ್ಲಾ ಯೋಜನೆಗಳ ಸಾಧಕ-ಬಾಧಕಗಳು ಮತ್ತು ಅಲ್ಪ ಯಶಸ್ಸನ್ನು ಗಮನಿಸಿದ ನಮ್ಮ ಇಂದಿನ ಪ್ರಧಾನಿ ಶ್ರೀ ಪಿ. ವಿ. ನರಸಿಂಹರಾವ್ ಅವರು ಈ ಎಲ್ಲಾ ಯೋಜನೆಗಳ ಪ್ರಮುಖ ಅಂಶಗಳನ್ನು ಕ್ರೋಢೀಕರಿಸಿಕೊಂಡು ಒಂದು ಹೊಸ ಯೋಜನೆಯನ್ನು ರಚಿಸಿದರು. ಇದನ್ನು 'ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ' ಎಂದು ಕರೆದು 1993ರ ಆಗಸ್ಟ 15ರಂದು ಈ ಯೋಜನೆಯ ಆರಂಭವನ್ನು ಘೋಷಿಸಿದರು. ರೋಜ್‌ಗಾರ್ ಎಂಬುದು ಹಿಂದಿ ಶಬ್ದವಾಗಿದ್ದು; ಅದು ಉದ್ಯೋಗ, ಕೆಲಸವೆಂಬ ಅರ್ಥವನ್ನು ಕೊಡುತ್ತದೆ.

20-9-93ರಂದು ಕೇಂದ್ರ ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆದ ಈ ಉದ್ಯೋಗ ಯೋಜನೆ ಆರಂಭದಲ್ಲಿ ಕೇವಲ ನಗರ ಪ್ರದೇಶಗಳಿಗಷ್ಟೇ ಸೀಮಿತವಾಗಿದ್ದು, ನಗರ ಪ್ರದೇಶದ ಸಣ್ಣ ಉದ್ದಿಮೆಗಳ ಯೋಜನೆ(SUME)ಯ ವಿಲೀನದ ನಂತರ ವಿಶಾಲ ವ್ಯಾಪ್ತಿಯನ್ನು ಪಡೆದುಕೊಂಡಿತು.

ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆಯ ಉದ್ದೇಶ, ಗುರಿ, ಸಾಲ ಪಡೆಯಲು ಅರ್ಹತೆ, ವಿವರ, ಬಡ್ಡಿ, ಮರುಪಾವತಿ, ತರಬೇತಿ ಮುಂತಾದ ವಿವರಗಳು ಈ ರೀತಿ ಇವೆ.

ಉದ್ದೇಶ

ವಿದ್ಯಾವಂತ ನಿರುದ್ಯೋಗಿಗಳು ಸಣ್ಣ ಕೈಗಾರಿಕೆ, ಸಣ್ಣ ವ್ಯಾಪಾರ ಮತ್ತು ಸೇವೆಗಳನ್ನು ಆರಂಭಿಸಲು ಸಾಲಸೌಲಭ್ಯಗಳನ್ನು

ಒದಗಿಸುವುದು. ಇದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಲ್ಲದೆ, ನಮ್ಮ ಅರ್ಥವ್ಯವಸ್ಥೆಯೂ ಅಭಿವೃದ್ಧಿಯಾಗುತ್ತದೆ. ಈ ಉದ್ದೇಶವನ್ನು ನಾವು ಈ ಹಿಂದಿನ ಯೋಜನೆಗಳಲ್ಲಿಯೂ ಕಾಣಬಹುದಾಗಿದೆ.

ಗುರಿ

ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆ ಆರಂಭವಾದ ವರ್ಷದಲ್ಲಿ, ಅಂದರೆ 1993-94ರಲ್ಲಿ, 40,000 ನಿರುದ್ಯೋಗಿಗಳಿಗೆ ಸಾಲಸೌಲಭ್ಯವನ್ನು ನೀಡಬೇಕೆಂಬ ಗುರಿ ಹೊಂದಲಾಗಿತ್ತು. ಅದರ ಮುಂದಿನ ವರ್ಷಗಳಲ್ಲಿ ವಾರ್ಷಿಕ 2.2 ಲಕ್ಷ ಫಲಾನುಭವಿಗಳಿಗೆ ನೆರವು ನೀಡುವ ಗುರಿ ಹೊಂದಲಾಗಿದೆ. ಒಟ್ಟಾರೆ 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ 7 ಲಕ್ಷಕ್ಕೂ ಅಧಿಕ ಸಣ್ಣ ಉದ್ಯಮಗಳನ್ನು ಆರಂಭಿಸಲು ಸಾಲ ನೀಡಿ, 14 ಲಕ್ಷದಷ್ಟು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಅರ್ಹತೆ

ಮೆಟ್ರಿಕ್ ಓದಿರುವ ಎಲ್ಲಾ ನಿರುದ್ಯೋಗಿಗಳು ಈ ಯೋಜನೆಯ ಆಡಿಯಲ್ಲಿ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಮೆಟ್ರಿಕ್‌ನಲ್ಲಿ ಅನುತ್ತೀರ್ಣರಾಗಿರುವವರು ಅಥವಾ ಉನ್ನತ ವ್ಯಾಸಂಗ ಮಾಡಿರುವವರು ಕೂಡ ಇಲ್ಲಿ ಸಾಲ ಪಡೆಯಬಹುದು. ಆದರೆ ಸರ್ಕಾರಿ ಮಾನ್ಯತೆ ಪಡೆದಿರುವ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದಿರುವವರಿಗೆ ಸಾಲ ನೀಡುವಲ್ಲಿ ಆದ್ಯತೆಯನ್ನು ನೀಡಲಾಗುವುದು. ಫಲಾನುಭವಿಗಳು 18ರಿಂದ 35 ವರ್ಷಗಳ ವಯೋಮಿತಿಯಲ್ಲಿರಬೇಕು ಮತ್ತು ಅವರ ಕುಟುಂಬದ ವಾರ್ಷಿಕ ವರಮಾನ 24,000 ರೂಪಾಯಿಗಳಿಗಿಂತ ಅಧಿಕವಾಗಿರಬಾರದು. ಇದಲ್ಲದೆ ಒಂದು ಕುಟುಂಬದಲ್ಲಿ ಒಬ್ಬ ಸದಸ್ಯನಿಗೆ ಮಾತ್ರ ನೆರವು ನೀಡಲಾಗುತ್ತದೆ. ಅಭ್ಯರ್ಥಿಯು ತಾನು ನೆರವು ಪಡೆಯುವ ಪ್ರದೇಶದಲ್ಲಿ ಖಾಯಂ ನಿವಾಸಿಯಾಗಿರಬೇಕು. ಇಲ್ಲವೇ 3 ವರ್ಷಗಳಿಂದ ಅಲ್ಲಿ ನೆಲೆಸಿರಬೇಕು.

ಒಂದು ವೇಳೆ ಫಲಾನುಭವಿ ಬ್ಯಾಂಕು ಇಲ್ಲವೇ ಇತರ ಹಣಕಾಸು ಸಂಸ್ಥೆಗೆ ಕಟಬಾಕಿದಾರನಾಗಿದ್ದರೆ, ಅವನು ಸಾಲ ಪಡೆಯಲು ಅನರ್ಹನಾಗುತ್ತಾನೆ. ಜೊತೆಗೆ ಅವನ ಕುಟುಂಬದ ಇತರ ಸದಸ್ಯರು ಸಹ ಈ ನೆರವು ಪಡೆಯಲು ಅನರ್ಹರಾಗುತ್ತಾರೆ. ಈ ಬಗ್ಗೆ ಅಭ್ಯರ್ಥಿಯು ಪ್ರಮಾಣಪತ್ರವನ್ನು ನೀಡಿ ದೃಢೀಕರಿಸಬೇಕಾಗುತ್ತದೆ.

ಸಾಲ ಪಡೆಯಬಹುದಾದ ಚಟುವಟಿಕೆಗಳು

ಗೃಹೋಪಯೋಗಿ ವಸ್ತುಗಳು, ವಿದ್ಯುತ್ ಮತ್ತು ವಿದ್ಯುನ್ಮಾನ ಉಪಕರಣಗಳ ರಿಪೇರಿ ಮತ್ತು ಮಾರಾಟ, ಪ್ಲಾಸ್ಟಿಕ್ ಉತ್ಪನ್ನ

(ಮುಂದಿನ ಪುಟಕ್ಕೆ)

ರಾಷ್ಟ್ರೀಕರಣ ಮತ್ತು ಗ್ರಾಮೀಣ ಬ್ಯಾಂಕಿಂಗ್

(12ನೇ ಪುಟದಿಂದ ಮುಂದುವರಿದಿದೆ)

ಆರ್ಥಿಕ ಲಾಭಾಂಶವನ್ನು ಘೋಷಿಸಲು ಹೆಚ್ಚಿನ ಲಾಭ ಗಳಿಸಬೇಕಾಗುತ್ತವೆ. ಹೆಚ್ಚಿನ ಲಾಭ ಗಳಿಸಲು ಅವು ತಮ್ಮ ಸಾಮಾಜಿಕ ದೃಷ್ಟಿಯನ್ನೂ, ಸೇವಾಮನೋಭಾವವನ್ನೂ ಮರೆತು ವ್ಯಾಪಾರಿ ಲೆಕ್ಕಾಚಾರದಲ್ಲಿ ತೊಡಗಿ ಲಾಭ ಗಳಿಸುವುದೇ ಮುಖ್ಯ ಉದ್ದೇಶವೆಂಬಂತೆ ವ್ಯವಹರಿಸಲು ಆರಂಭಿಸಬಹುದು. ಆಗ ಬಹುಶಃ ಮೊದಲ ಏಟು ಬೀಳುವುದು ಗ್ರಾಮೀಣ ಬ್ಯಾಂಕಿಂಗ್ ಕ್ಷೇತ್ರಕ್ಕೆ. ಏಕೆಂದರೆ ಈಗಾಗಲೇ ರಾಷ್ಟ್ರೀಕರಣಗೊಂಡಿರುವ ಬ್ಯಾಂಕುಗಳು, ತಾವಿನ್ನೂ ರಾಷ್ಟ್ರೀಕೃತ ಸ್ಥಿತಿಯಲ್ಲಿರುವಾಗಲೇ ಗ್ರಾಮೀಣ ಬ್ಯಾಂಕಿಂಗ್‌ನತ್ತ ನಿರಾಸಕ್ತಿ ತೋರುತ್ತಿರುವಾಗ, ಬದಲಾದ ಪರಿಸ್ಥಿತಿಯಲ್ಲಿ ಅವುಗಳಿಂದ ಹೆಚ್ಚಿನ ಆಸಕ್ತಿಯನ್ನು ನಿರೀಕ್ಷಿಸುವುದು ಅಸಾಧ್ಯದ ಮಾತು. ಅವುಗಳು ಗ್ರಾಮೀಣ ಬ್ಯಾಂಕಿಂಗನ್ನು ಸಂಪೂರ್ಣವಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಬಿಟ್ಟುಕೊಡುವ ತೀರ್ಮಾನ ಕೈಗೊಳ್ಳಬಹುದು. ಗ್ರಾಮೀಣ ಬ್ಯಾಂಕುಗಳು ಈಗ ಪ್ರಾಯೋಜಿತ ಬ್ಯಾಂಕುಗಳ ಆಸರೆಯಲ್ಲಿರುವಾಗಲೇ ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಲು ವಿಫಲವಾಗುತ್ತಿರುವಾಗ ಸಂಪೂರ್ಣವಾಗಿ ಅವುಗಳ ಮೇಲೆ ಗ್ರಾಮೀಣ ಅಭಿವೃದ್ಧಿಯ ಭಾರ ಬಿದ್ದಾಗ ಆ ಭಾರ ತಡೆಯಲಾರದೆ ಅವುಗಳು ಮುಳುಗುವ ಸಂದರ್ಭವೇ ಹೆಚ್ಚೆನಿಸುತ್ತದೆ.

ಹೆಚ್ಚುತ್ತಿರುವ ವಿದೇಶೀ ಬ್ಯಾಂಕುಗಳ ಸ್ಪರ್ಧೆ, ಉತ್ತೇಜಿತವಾಗಿರುವ ಬಂಡವಾಳ ಮಾರುಕಟ್ಟೆ, ಕಂಪನಿಗಳು ಜನರಿಂದಲೇ ನೇರವಾಗಿವ ಹಣ ಕ್ರೋಢೀಕರಿಸುವಲ್ಲಿ ಯಶಸ್ವಿಯಾಗುತ್ತಿರುವುದು ಈ ಸ್ಥಿತಿಗಳು ಬ್ಯಾಂಕುಗಳ ಖಾಸಗೀಕರಣಕ್ಕೆ ಹೆಚ್ಚು ಪೂರಕವಾಗುತ್ತಿರುವ ಸೂಚನೆಗಳು ಕಂಡುಬರುತ್ತಿವೆ. ಇಂದಲ್ಲ ನಾಳೆ ಎಲ್ಲ ಬ್ಯಾಂಕುಗಳಲ್ಲಿ ಸರಕಾರದ ಹಿಡಿತ ಕಡಿಮೆಯಾಗಿ ಖಾಸಗಿಯವರ ಪಾತ್ರ ಹೆಚ್ಚಾಗಬಹುದು. ಆಗ ಸರಕಾರ ಗ್ರಾಮೀಣ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬ್ಯಾಂಕುಗಳ ಆಸಕ್ತಿ ಕಡಿಮೆಯಾಗದಂತೆ, ಈಗಿರುವ ನಗದು ಮೀಸಲು ಅನುಪಾತ ಹಾಗೂ ಪರಿನಿಯತ ದ್ರವತ್ವ ಅನುಪಾತದ ಮಾದರಿಯಲ್ಲಿ ಒಂದು ರೀತಿಯ ಭದ್ರಹಿಡಿತ ಹೊಂದಿದರೆ ಮಾತ್ರ ಗ್ರಾಮೀಣ ಬ್ಯಾಂಕಿಂಗ್‌ನಲ್ಲಿ ರಾಷ್ಟ್ರೀಕರಣದ ನಂತರ ಸಾಧಿಸಿದ ಪ್ರಗತಿ ಉಳಿಯಲು ಸಾಧ್ಯ. ಇಲ್ಲವಾದರೆ, ಬಹುಶಃ ಇದುವರೆಗೆ ಸಾಧಿಸಿದ ಪ್ರಗತಿ ಒಂದು ಇತಿಹಾಸವೆನ್ನುವಂತಾಗುವುದರಲ್ಲಿ ಸಂಶಯವಿಲ್ಲ.

ಗಳು, ಸ್ಟೇಷನರಿ, ಮುದ್ರಣಾಲಯ ಮುಂತಾದ ಸಣ್ಣ ವ್ಯವಹಾರಗಳು, ಬೀಡಾ ಚಹ ತಂಪು ಪಾನೀಯಗಳ ಅಂಗಡಿಗಳು, ವಿಡಿಯೋ ಭಂಡಾರ, ಜೆರಾಕ್ಸ್, ಹೊಲಿಗೆ ಅಂಗಡಿ, ದೋಭಿ, ಪ್ರಸಾಧನ ಮುಂತಾದ ಸೇವೆಗಳು—ಸಣ್ಣ ಉದ್ಯಮಗಳನ್ನು ತೆರೆಯಲು ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಸಾಲ ಒದಗಿಸಲಾಗುತ್ತದೆ.

ಸಾಲ ಪಡೆಯುವ ವಿಧಾನ

ಈ ಯೋಜನೆಯ ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಲು ಕೇಂದ್ರ ಸರ್ಕಾರದ ಕೈಗಾರಿಕಾ ಮಂತ್ರಾಲಯ ಎರಡು ಸ್ತರಗಳಲ್ಲಿ ಸಮಿತಿಗಳನ್ನು ರಚಿಸಿದೆ. ಅವುಗಳೆಂದರೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಟ್ಟದ ಸಮಿತಿ ಮತ್ತು ಮಹಾ ನಗರಗಳಿಗೆ ಅನ್ವಯವಾಗುವಂತೆ ಮಹಾನಗರ ಸಮಿತಿಗಳು. ಮೊದಲ ಹಂತದಲ್ಲಿ ಫಲಾನುಭವಿಗಳು ತಮ್ಮ ಅರ್ಜಿಗಳನ್ನು ತಮ್ಮ ಜಿಲ್ಲಾ ಕೈಗಾರಿಕಾ ಕೇಂದ್ರ, ಸಣ್ಣ ಕೈಗಾರಿಕಾ ಸೇವಾ ಕೇಂದ್ರಗಳಿಗೆ ಸಲ್ಲಿಸಬೇಕು. ಈ ಸಂಸ್ಥೆಗಳು ಅರ್ಜಿಗಳನ್ನು ಪರಿಶೀಲಿಸಿ ಅರ್ಹರಾದ ಫಲಾನುಭವಿಗಳನ್ನು ಗುರುತಿಸಿ ಅಂತಹವರ ಅರ್ಜಿಗಳನ್ನು ಮಾತ್ರ ಜಿಲ್ಲಾ ಮಟ್ಟದ ಸಮಿತಿ ಇಲ್ಲವೇ ನಗರ ಸಮಿತಿಗಳಿಗೆ ಕಳುಹಿಸುತ್ತವೆ. ಈ ಹಂತದಲ್ಲಿ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸಾಲವನ್ನು ಮಂಜೂರು ಮಾಡಲಾಗುವುದು ಮತ್ತು ಸಾಲವನ್ನು ಯಾವ ಬ್ಯಾಂಕು/ಹಣಕಾಸು ಸಂಸ್ಥೆಗಳಲ್ಲಿ ಪಡೆಯಬಹುದೆಂದು ತಿಳಿಸಲಾಗುತ್ತದೆ. ಈ ಯೋಜನೆಯಲ್ಲಿ ಪ್ರತಿಯೊಂದು ಬ್ಯಾಂಕಿಗೂ ನಿರ್ದಿಷ್ಟ ಸಂಖ್ಯೆಯ ಸಾಲನೀಡಿಕೆ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

ಇಲ್ಲಿ ಸಮಿತಿಗಳ ಮೂಲಕ ಫಲಾನುಭವಿಗಳನ್ನು ಗುರುತಿಸುವ ಕಾರ್ಯದಿಂದ ಅರ್ಹ ಫಲಾನುಭವಿಗಳು ಸಾಲ ಪಡೆಯಲು ಹೆಚ್ಚು ಅನುಕೂಲವಾಗಿದೆ ಎನ್ನಬಹುದು.

ಸಾಲದ ಪ್ರಮಾಣ ಮತ್ತು ಆಧಾರ

ಅಭ್ಯರ್ಥಿ ತಾನು ಸ್ಥಾಪಿಸಬೇಕೆಂದಿರುವ ಉದ್ಯಮದ ಒಟ್ಟು ಯೋಜನಾ ವೆಚ್ಚದಲ್ಲಿ ಶೇಕಡ 5ರಷ್ಟನ್ನು ಸ್ವಭಾಗವಾಗಿ ಇಡಬೇಕಾಗುತ್ತದೆ. ಉಳಿದ ಶೇಕಡ 95ರಷ್ಟನ್ನು ಗರಿಷ್ಠ 95,000 ರೂಪಾಯಿಗಳ ವರೆಗಿನ ಮೊತ್ತವನ್ನು ಬ್ಯಾಂಕು ಸಂಯುಕ್ತ ಸಾಲವಾಗಿ ನೀಡುತ್ತದೆ. ಇದರಲ್ಲಿ ಅವಧಿ ಸಾಲ ಮತ್ತು ದುಡಿಮೆ ಬಂಡವಾಳಗಳು ಸೇರಿರುತ್ತವೆ. ಒಂದು ವೇಳೆ ಇಬ್ಬರು ಮತ್ತು ಇಬ್ಬರಿಗಿಂತ ಹೆಚ್ಚು ಫಲಾನುಭವಿಗಳು ಪಾಲುದಾರರಾಗಿ ಜಂಟಿ ಉದ್ಯಮವನ್ನು ಆರಂಭಿಸಲು ಮುಂದಾದರೆ, ಪ್ರತಿ ಫಲಾನುಭವಿಗೂ ಪ್ರತ್ಯೇಕವಾಗಿ ಗರಿಷ್ಠ 95,000 ರೂಪಾಯಿಗಳವರೆಗೆ ಸಾಲ ಕೊಡಲಾಗುತ್ತದೆ. ಇಂತಹ ಜಂಟಿ ಉದ್ಯಮಗಳಿಗೆ ಸಹಕಾರಿ ಸಂಘಗಳು ಮತ್ತು ಖಾಸಗಿ ನಿಯಮಿತ ಕಂಪನಿಗಳನ್ನು ತೆರೆಯಲು ಸಾಲವನ್ನು ನೀಡಲಾಗುವುದಿಲ್ಲ.

ಈ ಯೋಜನೆಯ ಅಡಿಯಲ್ಲಿ ಸಾಲ ಪಡೆಯಲು ಯಾವುದೇ ಜೊತೆಯಾಧಾರ ನೀಡಬೇಕಾದ ಆವಶ್ಯಕತೆಯಿಲ್ಲ. ಆದರೆ ಅಭ್ಯರ್ಥಿಗಳು ಸ್ವಇಚ್ಛೆಯಿಂದ ಋಣಮುಕ್ತವಾದ ಆಸ್ತಿಗಳನ್ನು ಆಧಾರವಾಗಿ ಬ್ಯಾಂಕಿಗೆ ನೀಡಬಹುದು.

ಮರುಪಾವತಿ ಮತ್ತು ಸಹಾಯಧನ

ಸಾಲದ ಮೊಬಲಗಿಗೆ ಅನುಗುಣವಾಗಿ ಅವಧಿ ಸಾಲವನ್ನು 3ರಿಂದ 7 ವರ್ಷಗಳವರೆಗೆ ಮರುಪಾವತಿ ಮಾಡುವ ಅವಕಾಶವಿದೆ. ಈ ಅವಧಿಯನ್ನು 6ರಿಂದ 18 ತಿಂಗಳವರೆಗೆ ವಿಸ್ತರಿಸಬಹುದು. ಆದರೆ ದುಡಿಯುವ ಬಂಡವಾಳವನ್ನು ಪ್ರತಿ ವರ್ಷವೂ ನವೀಕರಿಸುತ್ತಿರಬೇಕಾಗುತ್ತದೆ.

ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಸಾಲ ಪಡೆದ ಫಲಾನುಭವಿಗಳಿಗೆ ಯೋಜನಾ ವೆಚ್ಚದ ಶೇ. 15 ರಷ್ಟು, ಗರಿಷ್ಠ 7,500 ರೂಪಾಯಿಗಳವರೆಗೆ ಸಹಾಯಧನ ನೀಡಲಾಗುವುದು. ಇದಕ್ಕಾಗಿ ಸಮಿತಿಯು ಈ ಬಗ್ಗೆ ಒಂದು ವರದಿಯನ್ನು ನೀಡಬೇಕಾಗುತ್ತದೆ. ಈ ಸಹಾಯಧನವನ್ನು ಫಲಾನುಭವಿಯು ಪೂರ್ಣವಾಗಿ ಸಾಲ ಮರುಪಾವತಿ ಮಾಡಿದ ಮೇಲೆಯೇ ನೀಡಲಾಗುತ್ತದೆ. ಒಂದು ವೇಳೆ ಸಹಾಯಧನವು ಸಾಲ ಪಾವತಿಗೆ ಮುನ್ನವೇ ಬಿಡುಗಡೆಯಾಗಿದ್ದರೆ ಅದನ್ನು ಫಲಾನುಭವಿಯ ಹೆಸರಲ್ಲಿ ಸಾವಧಿ ಠೇವಣಿಯನ್ನಾಗಿ ಇಡಲಾಗಿರುತ್ತದೆ.

ಪುನರ್ಧನ

ಈ ಯೋಜನೆಯಲ್ಲಿ ಪಡೆದ ಸಾಲವನ್ನು ಮರುಪಾವತಿ ಮಾಡಲು ಅನುಕೂಲವಾಗುವಂತೆ ನಬಾರ್ಡ್ ಮತ್ತು ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕುಗಳಲ್ಲಿ ಪುನರ್ಧನವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆಯ ಜಿಲ್ಲಾ ಸಮಿತಿ

ಈ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತರಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಜಿಲ್ಲಾ ಸಮಿತಿಗಳನ್ನು ರಚಿಸಲಾಗಿದೆ. ಜಿಲ್ಲಾ ಸಮಿತಿಯಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿ ಅಥವಾ ಉಪ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ. ಉಳಿದಂತೆ ಜಿಲ್ಲಾ ಉದ್ಯೋಗಾಧಿಕಾರಿ, ಅಗ್ರ ಬ್ಯಾಂಕಿನ ವ್ಯವಸ್ಥಾಪಕರು, ಕಾರ್ಯತಂಡ ಸಮಿತಿಯ ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಇವರುಗಳ ಜೊತೆಗೆ ಸಮಾಜಸೇವೆ, ಉದ್ಯಮ/ವ್ಯವಹಾರಗಳನ್ನು ಪ್ರತಿನಿಧಿಸುವ ಒಬ್ಬೊಬ್ಬ ಪ್ರತಿನಿಧಿ, ಜಿಲ್ಲಾ ಸಮಾಜಕಲ್ಯಾಣಾಧಿಕಾರಿ,

(17ನೇ ಪುಟ ನೋಡಿ)

ಬ್ಯಾಂಕಿನಲ್ಲಿ ಸ್ವಯಂಚಲಿ ಸರಾಫ್ ಯಂತ್ರ

ರಾ. ಮ. ಕುಲಕರ್ಣಿ

ಭಾರತೀಯ ಸ್ಟೇಟ್ ಬ್ಯಾಂಕ್, ವಲಯ ಕಚೇರಿ, ಕೇಶವಪುರ, ಹುಬ್ಬಳ್ಳಿ ೫೮೦೦೨೩

ತನ್ನಲ್ಲಿಗೆ ಬರುವ ಗ್ರಾಹಕನಿಗೆ ಶೀಘ್ರವಾಗಿ ಸೇವೆ ನೀಡುವುದು ಇಂದು ಪ್ರತಿಯೊಂದು ಬ್ಯಾಂಕಿನ ಮಹದಾಶಯ. ಈ ಆಶಯದ ಪೂರೈಕೆಯ ಒಂದು ಬಹು ಮುಖ್ಯ ಸಾಧನವೆಂದರೆ ಸ್ವಯಂಚಲಿ ಸರಾಫ್ ಯಂತ್ರ.

ಗ್ರಾಹಕ ಸಂತೃಪ್ತಿಯೇ ಯಾವುದೇ ಸಾರ್ವಜನಿಕ ಸಂಸ್ಥೆಯ ಮೂಲ ಉದ್ದೇಶವಾಗಿರುತ್ತದೆ. ಬ್ಯಾಂಕು ಕೂಡ ಒಂದು ಸಾರ್ವಜನಿಕ ಸಂಸ್ಥೆಯಾಗಿರುವುದರಿಂದ, ಅದರ ಎಲ್ಲ ಚಟುವಟಿಕೆಗಳೂ ಗ್ರಾಹಕನತ್ತಲೇ ಕೇಂದ್ರೀಕೃತವಾಗಿರುತ್ತವೆ.

ಬ್ಯಾಂಕಿನಲ್ಲಿ ಯಾಂತ್ರೀಕರಣ/ಗಣಕೀಕರಣ ಪ್ರವೇಶಿಸಿದ್ದು ಈ ಉದ್ದೇಶದಿಂದ. ಉತ್ತಮ ಗುಣಮಟ್ಟದ, ಹೆಚ್ಚು ತ್ವರಿತವಾದ ಸೇವೆಯನ್ನು ಬ್ಯಾಂಕಿನ ಗ್ರಾಹಕರು ನಿರೀಕ್ಷಿಸುವುದು ಸಹಜ. ಈ ಕಾರಣದಿಂದಲೇ ಬ್ಯಾಂಕಿನಲ್ಲಿ ಸ್ವಯಂಚಲಿ ಸರಾಫ್ ಯಂತ್ರದ ಪ್ರವೇಶವಾಯಿತು. ಗಣಕದ ಸಂಧಾರಿತ ಮುಂದುವರಿದ ಆಯಾಮವೇ ಈ ಸ್ವಯಂಚಲಿ ಸರಾಫ್ ಯಂತ್ರ.

ಈ ಸ್ವಯಂಚಲಿ ಸರಾಫ್ ಯಂತ್ರದ ಅನುಕೂಲತೆಗಳನ್ನು ಅರಿಯುವ ಮೊದಲು ನಾವು ಚಾಲ್ತಿಯಲ್ಲಿರುವ ಸರಾಫ್ ವ್ಯವಸ್ಥೆಯ (ಟೆಲರ್ ಸಿಸ್ಟಮ್) ದೋಷಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

ಬ್ಯಾಂಕಿನ ಸಾಮಾನ್ಯ ವ್ಯವಸ್ಥೆಯಲ್ಲಿ ನಗದು ಪಾವತಿಮಾಡುವಾಗ್ಗೆ ಆಗಾಗ್ಗೆ ಸಾಕಷ್ಟು ವಿಳಂಬವಾಗುತ್ತಿರುವುದು ಸರ್ವವೇದ್ಯವಾದ ವಿಷಯ.

ಬ್ಯಾಂಕು ಲಾಭಪ್ರದತೆಯನ್ನು ಗಮನದಲ್ಲಿರಿಸಿಕೊಂಡು ಶಾಖೆಗಳ ಸಂಖ್ಯೆಗಳನ್ನು ಹೆಚ್ಚಿಸುತ್ತದೆ. ಇದರಿಂದಾಗಿ ಕಾರ್ಯಭಾರ ಹೆಚ್ಚಾಗುತ್ತದೆ. ಆದರೆ ಅದಕ್ಕೆ ತಕ್ಕಂತೆ ಉದ್ಯೋಗಿಗಳ ನೇಮಕಾತಿಯಲ್ಲಿ ಹೆಚ್ಚಳವಾಗುವುದಿಲ್ಲ. ಈ ವಿಧವಾಗಿ ಹೆಚ್ಚುತ್ತಿರುವ ಕೆಲಸದ ಭಾರವೂ ಬ್ಯಾಂಕಿನಲ್ಲಿ ಗಣಕೀಕರಣ ಪ್ರಕ್ರಿಯೆಯನ್ನು ಹೆಚ್ಚು ಚುರುಕುಗೊಳಿಸಲು ಕಾರಣವಾಯಿತು.

ಹಳೆಯ ವ್ಯವಸ್ಥೆ

ಸಧ್ಯದ ಸರಾಫ್ ವ್ಯವಸ್ಥೆಯಲ್ಲಿ ಬ್ಯಾಂಕಿನ ಸಾಮಾನ್ಯ ನಗದು ಪಾವತಿಯ ವಿಳಂಬ ಕಡಿಮೆಯಾಗುತ್ತಿರುವುದೇನೋ ನಿಜ ; ಆದರೆ ದಿಢೀರ್ ನಗದು ಸಂದಾಯದ ಈ ಉಪಕ್ರಮದಲ್ಲಿ, ಹಿಂಪಡೆತಗಳಲ್ಲಿನ ನಕಲು ಸಹಿಗಳನ್ನು ಪ್ರತ್ಯೇಕವಾಗಿ ಮೂಲ ಖಾತೆ ಪುಸ್ತಕದೊಂದಿಗೆ ಹೋಲಿಸಿ ನೋಡಲು ಸಮಯದ ಅಭಾವದಿಂದಾಗಿ ಸಾಧ್ಯವಾಗುವುದಿಲ್ಲ.

ಇನ್ನೊಬ್ಬ ಗ್ರಾಹಕನ ಖಾತೆಯ ಶಿಲ್ಕು ಹೇಗೋ ತಿಳಿದು ನಕಲು ಸಹಿ ಹಾಕಿ ಹಿಂಪಡೆತದ ಮೂಲಕ ಹಣ ಪಡೆಯುವ ಎಷ್ಟೋ ವಂಚನೆ ಪ್ರಕರಣಗಳು ಬ್ಯಾಂಕುಗಳಲ್ಲಿ ಇಂದು ಸಹಜ ಎನ್ನಿಸುವಂತೆ ಘಟಿಸುತ್ತಿವೆ.

ಅನೇಕ ಸಲ ಪಾಸ್ ಬುಕ್ ಇಲ್ಲದೆ ಕೇವಲ ಹಿಂಪಡೆತದ ಆಧಾರದ ಮೇಲೆ ನಗದು ಸಂದಾಯ ಮಾಡುವಾಗ್ಯೂ ಹಣ ಮಿತಿ ಮೀರಿ ಸಂದಾಯವಾಗಿ ಗ್ರಾಹಕನ ಖಾತೆ ಋಣಾತ್ಮಕ ಶಿಲ್ಕು ತೋರಿಸುವ ಅಪಾಯವಿದೆ. ಗ್ರಾಹಕರು ತಮ್ಮ ಖಾತೆಯ ಶಿಲ್ಕು ಗಮನಿಸದೇ ಹೆಚ್ಚು ಹಣ ಖಾತೆಯಿಂದ ತೆಗೆದದ್ದೂ ಇದೆ.

ಚಿಕ್ಕ ಚಿಕ್ಕ ಗುಣಕಗಳಲ್ಲಿ ಗ್ರಾಹಕ ಹಣ ಸಂದಾಯ ಮಾಡುವಾಗ ಬಹಳ ಸಲ ಸರಾಫ್ ಮುಂಗಟ್ಟೆಯಲ್ಲಿ ಕೆಲಸದ ಹೊರೆ ಮಿತಿಮೀರಿ ಹೆಚ್ಚುವ ಪ್ರಕರಣಗಳೂ ಇವೆ. ಆಗ ಸರಾಫ್ ಅಸಹಾಯಕನಾಗುತ್ತಾನೆ. ಅನೇಕ ವೇಳೆ ನಗದು ಪಾವತಿಯಲ್ಲಿ ಅಥವಾ ಸ್ವೀಕರಣೆಯಲ್ಲಿ ಅವನಿಂದ ವಿಳಂಬವುಂಟಾಗುತ್ತದೆ.

ಆದರೆ ಗ್ರಾಹಕ ಯಾವಾಗಲೂ ಬ್ಯಾಂಕಿನಿಂದ ಹೆಚ್ಚು ಶೀಘ್ರವಾದ ಸೇವೆಯನ್ನು ಅಪೇಕ್ಷಿಸುತ್ತಾನೆ. ಮತ್ತು ಅದೇ ವೇಳೆ ಅವನಿಗೆ ದಕ್ಷ ಸೇವೆಯೂ ಬೇಕು. ಕೆಲಸದ ಹೊರೆ ಹೆಚ್ಚಿದಾಗ ಸರಾಫ್‌ನಿಂದ ತಪ್ಪುಗಳಾಗುವುದು ಸಹಜ.

ಸ್ವಯಂಚಲಿಯ ಸೌಲಭ್ಯ

ಈ ಎಲ್ಲ ಹಿಂದಿನ ಸರಾಫ್ ವ್ಯವಸ್ಥೆಯ ದೋಷಗಳನ್ನು ಹೋಗಲಾಡಿಸಲೋಸುಗ ಈ ಹೊಸ ಸ್ವಯಂಚಲಿ ಸರಾಫ್ ಯಂತ್ರದ ವ್ಯವಸ್ಥೆ ಜಾರಿಗೆ ಬಂದಿತು.

ಭಾರತದಲ್ಲಿ ಪ್ರಥಮ ಬಾರಿಗೆ ವಿದೇಶೀ ಬ್ಯಾಂಕ್ ಆದ ಗ್ರಿಂಡ್ಲೇಸ್ ಬ್ಯಾಂಕು ಈ ವ್ಯವಸ್ಥೆಯನ್ನು ಜಾರಿಗೆ ತಂದಿತು. ಕರ್ನಾಟಕದಲ್ಲಿ ವಿಜಯ ಬ್ಯಾಂಕು ಇದನ್ನು ಮೊದಲು ಅಳವಡಿಸಿಕೊಂಡಿತು. ಭಾರತೀಯ ಸ್ಟೇಟ್ ಬ್ಯಾಂಕು 1994ರಲ್ಲಿ ಮೊದಲು

ಮುಂಬೈಯಲ್ಲಿ, ನಂತರ ದಿಲ್ಲಿಯಲ್ಲಿ ಈ ಸ್ವಯಂಚಲಿ ಸರಾಫ್ ಯಂತ್ರಗಳನ್ನು ಸ್ಥಾಪಿಸಿತು. ದಿಲ್ಲಿ, ಜಮಶೆಡ್‌ಪುರ, ಕಲಕತ್ತಾ, ಬೆಂಗಳೂರು ಹಾಗೂ ಪಾಟ್ನಾಗಳಲ್ಲೂ ಭಾರತೀಯ ಸ್ಟೇಟ್ ಬ್ಯಾಂಕು ಶೀಘ್ರದಲ್ಲೇ ಈ ಸೇವೆಯನ್ನು ವಿಸ್ತರಿಸಲಿದೆ.

ಸರಾಫ್ ವ್ಯವಸ್ಥೆಯ ಕಾರ್ಯನಿರ್ವಹಣೆಯ ಸ್ವರೂಪವನ್ನೇ ಬದಲಿಸುವ, ಗ್ರಾಹಕ ಸೇವೆಗೆ ಒಂದು ಹೊಸ ಆಯಾಮವನ್ನು ಕಲ್ಪಿಸುವ ಈ ಸ್ವಯಂಚಲಿ ಯಂತ್ರದ ಗುಣಗಳನ್ನು ಈಗ ತಿಳಿದು ಕೊಳ್ಳೋಣ.

ಚೆಕ್ಕಿನ ಮೇಲೆ ಗ್ರಾಹಕ ಇಲ್ಲಿ ಸಹಿ ಮಾಡುವ ಅಗತ್ಯವೇ ಇಲ್ಲ ಪ್ರತ್ಯೇಕ ಗ್ರಾಹಕನ ಖಾತೆಗೂ ಪ್ರತ್ಯೇಕ ಕೋಡ್ ನಂಬರ್ ನೀಡ ಲಾಗಿರುತ್ತದೆ.

ಆರಂಭದಲ್ಲಿ ಸೇವಿಂಗ್ಸ್ ಖಾತೆ ಹಾಗೂ ಚಾಲ್ತಿ ಖಾತೆಗಳಲ್ಲಿ ಗ್ರಾಹಕ ಹಣ ಠೇವಣಿ ಮಾಡುವ ಹಾಗೂ ಹಣ ಹಿಂಪಡೆಯುವ ಸೇವೆಗಳನ್ನು ಮಾತ್ರ ಈ ಯಂತ್ರದಿಂದ ಪಡೆಯುತ್ತಾನೆ. ಇದಕ್ಕೆ ಯಂತ್ರದ 'ಆಫ್' ವ್ಯವಸ್ಥೆ ಎನ್ನುತ್ತಾರೆ.

ಕ್ರಮೇಣ ಶಾಖೆಯ ಎಲ್ಲ ಕೆಲಸಕಾರ್ಯಗಳೂ ಸಂಪೂರ್ಣ ಗಣಕೀಕೃತಗೊಂಡಾಗ ಈ ಯಂತ್ರವನ್ನು ಆನ್ ವ್ಯವಸ್ಥೆಗೆ ಜೋಡಿಸಬಹುದು. ಆಗ ಶಾಖೆಯ ಇತರ ಕಾರ್ಯಗಳಾದ ನಗದು ವರ್ಗಾವಣೆ/ಚೆಕ್ಕುಗಳ ಮೊಬಲಗಿನ ವರ್ಗಾವಣೆ ಮೊದಲಾದ ವಹಿವಾಟುಗಳನ್ನು ನಡೆಸಲೂ ಸಾಧ್ಯವಾಗುತ್ತದೆ. ಇದಕ್ಕೆ ಯಂತ್ರದ 'ಆನ್' ವ್ಯವಸ್ಥೆ ಎನ್ನುತ್ತಾರೆ. ಶಾಖೆಯ ಗಣಕ ಯಂತ್ರ ಜಾಲವನ್ನು ಬ್ಯಾಂಕಿನ ಇತರ ಶಾಖೆಗಳಿಗೆ ಜೋಡಿಸಿದಾಗ ಹಾಗೂ ಇತರ ಬ್ಯಾಂಕುಗಳ ಶಾಖೆಗಳಿಗೆ ಜೋಡಿಸಿದಾಗ ಕೂಡ 'ಆನ್' ವ್ಯವಸ್ಥೆಯಿಂದಾಗಿ ಈ ಸ್ವಯಂ ಸರಾಫ್ ಯಂತ್ರ ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿನ ಖಾತೆಗಳಿಗೆ ನೇರ ವಹಿವಾಟು ಗಳನ್ನು ನಡೆಸುತ್ತದೆ/ನಿಯಂತ್ರಿಸುತ್ತದೆ.

ಕನಿಷ್ಠ 6 ತಿಂಗಳು ಕನಿಷ್ಠ ಖಾತಾ ಶುಲ್ಕವನ್ನು ಹೊಂದಿರುವ ಆಯ್ದ ಗ್ರಾಹಕರಿಗೆ ಮಾತ್ರ ಈ ಸೇವೆಯನ್ನು ಕೊಡಮಾಡ ಲಾಗುತ್ತದೆ. ಕ್ಯಾಶ್ ಕೀ ಖಾತೆದಾರರೂ ಈ ಯಂತ್ರದ ಸೇವೆ ಪಡೆಯಬಹುದಾಗಿದೆ.

25 ಕರೆನ್ಸಿ ನೋಟುಗಳನ್ನು ಮೀರಿದವನ್ನು ಮಾತ್ರ ಯಂತ್ರ ಸ್ವೀಕರಿಸುತ್ತದೆ. ಪ್ರತಿ ಖಾತೆದಾರನೂ ಕಾರ್ಡು ಹೊಂದಿದ್ದು, ಕನಿಷ್ಠ 100 ರೂ, ಗರಿಷ್ಠ 300 ರೂ ಹಣವನ್ನು ಈ ವ್ಯವಸ್ಥೆಯ ಮೂಲಕ ತಕ್ಷಣ ಪಡೆಯಬಹುದಾಗಿದೆ. ರೂ. 5,000 ಹಾಗೂ ರೂ. 10,000 ಹಿಂಪಡೆತಗಳನ್ನು ಒಟ್ಟಿಗೆ ಪಡೆಯುವ ವಿಶೇಷ ಖಾತೆಗಳನ್ನು ತೆರೆಯುವ ಅನುಕೂಲವೂ ಇಲ್ಲಿದೆ.

ಒಬ್ಬರು ಅಥವಾ ಸಂಯುಕ್ತ ಖಾತೆದಾರರು ಈ ವ್ಯವಸ್ಥೆ ಯಲ್ಲಿ ವಹಿವಾಟು ನಡೆಸಬಹುದಾಗಿದೆ.

(ಮುಂದಿನ ಪುಟಕ್ಕೆ)

ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆ

(15ನೇ ಪುಟದಿಂದ ಮುಂದುವರಿದಿದೆ)

ಜಿಲ್ಲಾ ಶಿಕ್ಷಣಾಧಿಕಾರಿ, ಜಿಲ್ಲಾ ಅಂಕಿಸಂಖ್ಯೆ ಅಧಿಕಾರಿ, ಸ್ಥಳೀಯ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಗಳು ಈ ಸಮಿತಿಯಲ್ಲಿರುತ್ತಾರೆ. ಈ ಸಮಿತಿಯು ಫಲಾನುಭವಿ ಗಳನ್ನು ಗುರುತಿಸಿ ಸಾಲವನ್ನು ಒದಗಿಸುವುದರ ಜೊತೆಗೆ ಅವರಿಗೆ ತರಬೇತಿ ಮತ್ತು ಅವರ ಯೋಜನೆಗಳಿಗೆ ಮಾರ್ಗದರ್ಶನ ಒದಗಿಸು ತ್ತದೆ.

ಗುಣಾವಗುಣಗಳು

ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯ ಈ ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ಇದು ಹಿಂದಿನ ಯೋಜನೆ ಗಳ ಒಂದು ವಿಸ್ತೃತ ರೂಪ ಅಥವಾ ಹಿಂದಿನ ಯೋಜನೆಗಳ ಪ್ರಮುಖ ಅಂಶಗಳ ಕ್ರೋಡೀಕರಣದಂತೆ ಇರುವುದು ಗೋಚರ ವಾಗುತ್ತದೆ. ಈ ಯೋಜನೆಯು ಕೇವಲ ವಿದ್ಯಾವಂತ ನಿರುದ್ಯೋಗಿ ಗಳಿಗೆ ಮಾತ್ರ ಸೀಮಿತವಾಗಿದೆ. ಅವಿದ್ಯಾವಂತರನ್ನು ಈ ಯೋಜನೆ ಯಿಂದ ದೂರವಿಡಲಾಗಿದೆ.

ಈ ಯೋಜನೆಯೂ ಹಿಂದಿನ ಹಲವಾರು ಯೋಜನೆಗಳಂತೆಯೇ ವಿಫಲವಾಗುವ ಸಂಭವಗಳಿವೆ. ಫಲಾನುಭವಿಗಳನ್ನು ಗುರುತಿಸುವ ಕೆಲಸವನ್ನು ಜಿಲ್ಲಾ ಮಟ್ಟದ ಸಮಿತಿಗಳಿಗೆ ನೀಡಿರುವುದರಿಂದ ಅಲ್ಲಿ ಅವ್ಯವಹಾರಗಳು ನಡೆಯುವ ಸಾಧ್ಯತೆ ಅಧಿಕವಿರುತ್ತದೆ.

ಇದಲ್ಲದೆ ಫಲಾನುಭವಿಗಳು ತಾವು ಪಡೆದ ಸಾಲದ ಮೊತ್ತ ವನ್ನು ನಿಗದಿತ ಉದ್ದೇಶಗಳಿಗೆ ಬಳಸುವುದರ ಬದಲು ಇತರೆ ಉದ್ದೇಶಗಳಿಗೆ ಬಳಸುವ ಸಂಭವವೇ ಹೆಚ್ಚು.

ಆದರೂ ಈ ಯೋಜನೆ ನಿರುದ್ಯೋಗ ಸಮಸ್ಯೆಯನ್ನು ಎದುರಿಸುವ ಒಂದು ಸ್ತುತ್ಯರ್ಹ ಪ್ರಯತ್ನ ಎಂದು ಹೇಳಬಹುದು. ಈ ಯೋಜನೆಯು 93–94ರ ವರ್ಷದಲ್ಲಿ ನಿಗದಿಪಡಿಸಿದ್ದ 40,000 ಫಲಾನುಭವಿಗಳನ್ನು ಗುರುತಿಸುವ ಕಾರ್ಯದಲ್ಲಿ ಯಶಸ್ವಿಯಾಗಿದೆ.

ಇದಲ್ಲದೆ ಜಿಲ್ಲಾ ಸಮಿತಿಯು ತರಬೇತಿ ನೀಡುವ ಕಾರ್ಯ ಕ್ರಮವನ್ನು ಹಮ್ಮಿಕೊಂಡಿರುವುದು ಫಲಾನುಭವಿಗಳಿಗೆ ವರದಾನ ವಾಗಿದೆ. ಫಲಾನುಭವಿಗಳಿಗೆ ಸಹಾಯಧನ ಮತ್ತು ಪುನರ್ಧನ ವನ್ನು ಒದಗಿಸುವುದು ಅವರಲ್ಲಿ ಸ್ಫೂರ್ತಿಯನ್ನು ತುಂಬಬಹುದು.

ಈ ಹಿಂದಿನ ಎಲ್ಲಾ ಯೋಜನೆಗಳ ಮುಖ್ಯ ಅಂಶಗಳನ್ನು ಈ ಯೋಜನೆಯು ಹೊಂದಿರುವುದರಿಂದ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯು ಯಶಸ್ಸನ್ನು ಸಾಧಿಸುವುದೆಂದು ನಿರೀಕ್ಷಿಸಬಹುದು.

ದೋಷಗಳು

ಈ ಯಂತ್ರವ್ಯವಸ್ಥೆಯಲ್ಲಿ ದೋಷಗಳೂ ಇಲ್ಲವೆಂದಿಲ್ಲ. ಸ್ವಯಂಚಲಿ ಸರಾಫ್ ಯಂತ್ರದ ಕಾರ್ಡು ವಂಚನೆಯ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿವೆ. ಯಾಂತ್ರಿಕ ದೋಷದಿಂದಾಗಿಯೂ ಗ್ರಾಹಕ ಹಾನಿಗೊಳಗಾದ ಪ್ರಕರಣಗಳೂ ಇವೆ. ಬ್ಯಾಂಕು ಅನೇಕ ಸಲ ಹಾನಿ ಅನುಭವಿಸಿದ್ದಿದೆ. ವಿಮಾ ಕಂಪನಿ ಇಂಥ ಪ್ರಕರಣಗಳ ಯಾವುದೇ ಹೊಣೆ ಹೊರಲೂ ಸಿದ್ಧವಿಲ್ಲ. ಕಾಯ್ದೆಯೂ ಈ ವಿಷಯದಲ್ಲಿ ಮೌನವಾಗಿದೆ. ಈ ಎಲ್ಲ ದೋಷಗಳಿಗೂ ಇನ್ನೂ ಪರಿಹಾರ ಹುಡುಕಬೇಕಿದೆ.

ಗ್ರಾಹಕನೇ ಕಾರ್ಡು ಕಳೆದುಕೊಂಡು ಅದು ಮತ್ತೊಬ್ಬನ ಕೈ ಸೇರಿದರೂ ವಂಚನೆಯ ಸಂಭವ ಹೆಚ್ಚು. ಅವನು ಅದೇ ಖಾತೆಯ ಎರಡನೆಯ ಕಾರ್ಡು ಪಡೆಯುವ ವರೆಗೂ ಈ ವಂಚನೆ ಮುಂದು ವರಿಯುತ್ತದೆ.

ಈ ದೋಷಗಳನ್ನು ಹೊರತಾಗಿಸಿ ಸ್ವಯಂಚಲಿ ಸರಾಫ್ ಯಂತ್ರ ಗ್ರಾಹಕ ಸೇವೆಯಲ್ಲಿ ಉತ್ತಮ ಪಾತ್ರವನ್ನು ವಹಿಸಿದೆ ಎನ್ನಲೇಬೇಕು. ಇದು ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎನ್ನುವುದನ್ನು ತಿಳಿಯಲು ಆ ಯಂತ್ರದ ಸಂಪೂರ್ಣ ಸ್ವರೂಪವನ್ನು ಅಭ್ಯಸಿಸುವುದು ಅವಶ್ಯ. ಯಂತ್ರದಲ್ಲಿ ಕಾರ್ಡ್ ಕೋಡ್ ನಂಬರ್ ತಾಳೆನೋಡುವ ಕಾರ್ಡರೀಡರ್, ಕಾರ್ಡು ಒಳತೂರಿಸಲು ಒಂದು ಚಿಕ್ಕ ಕಿಂಡಿ ಇವೆ. ಗ್ರಾಹಕ ಕರೆನ್ಸಿ ನೋಟುಗಳ ಪಾಕೀಟು ಹಾಗೂ ಕಾರ್ಡು ಒಳ ತೂರಿಸುತ್ತಾನೆ. ಹಣ ಪಡೆಯಬೇಕೆಂದಾಗ, ಹಿಂಪಡೆತವನ್ನು ಹಾಗೂ ಕಾರ್ಡನ್ನು ಅದೇ ಕಿಂಡಿಯಿಂದ ಒಳತೂರಿಸುತ್ತಾನೆ. ಯಂತ್ರದೊಳಗೆ ಹರಿದ/ಹಳೆಯ ನೋಟುಗಳನ್ನು ವಿಂಗಡಿಸುವ ಬೇರೆ ವ್ಯವಸ್ಥೆ ಇದೆ. ದೈನಂದಿನ ವ್ಯವಹಾರಗಳನ್ನು ಪರಿಶೀಲಿಸಲು ಬ್ಯಾಂಕ್ ಸಿಬ್ಬಂದಿಗೆ ಅನುಕೂಲವಾಗುವಂತೆ ಒಂದು ಒಳ ಹಿಡಿಕೆ ಇದೆ. ಖಾತೆದಾರನೂ ಬೇಕೆಂದಾಗ ಕಾರ್ಡನ್ನು ಒಳತೂರಿಸಿ, ಗುಂಡಿ ಒತ್ತಿ ಲೆಕ್ಕವಿವರಣ ಪತ್ರವನ್ನು ಪಡೆಯಬಹುದಾಗಿದೆ. ಈ ಯಂತ್ರವನ್ನು ಉಪಯೋಗಿಸುವ ಗ್ರಾಹಕನ ಭಾವಚಿತ್ರ ಮೂಡಿಸಲು ವಿಡಿಯೋ ಅಳವಡಿಸಿದ ಯಂತ್ರಗಳೂ ಮಾರುಕಟ್ಟೆಯಲ್ಲಿ ದೊರೆಯುತ್ತವೆ.

ವಿವಿಧ ಮಾದರಿಗಳು

ಗೋಡೆಗೆ ಅಳವಡಿಸುವ, ಡ್ರೈವ್ ಇನ್ ಮಾದರಿಯ ಮತ್ತು ನೇರ ಮುಂಗಟ್ಟೆ ಮಾದರಿಯ ಬೇರೆ ಬೇರೆ ವಿನ್ಯಾಸದ ಸ್ವಯಂಚಲಿ ಸರಾಫ್ ಯಂತ್ರಗಳೂ ಈಗ ಲಭ್ಯವಾಗಿವೆ.

ಹೀಗೆ ಹೊಸದಾಗಿ ಅಳವಡಿಸಲ್ಪಟ್ಟ ಈ ಸ್ವಯಂಚಲಿ ಸರಾಫ್ ಯಂತ್ರದಿಂದ ಗ್ರಾಹಕ 24 ಗಂಟೆಯೂ ಸೇವೆ ಪಡೆಯಬಹುದಾಗಿದೆ. ಈ ಯಂತ್ರವು ಸಂಪೂರ್ಣ ಗಣಕೀಕೃತ ಶಾಖೆಯಲ್ಲಿ ಸ್ಥಾಪಿಸಲ್ಪಟ್ಟಿದ್ದರೆ, ಮತ್ತು ಅಂಥ ಶಾಖೆ ಅಂತರ ಬ್ಯಾಂಕ್ ಸೇವಾಜಾಲವನ್ನು ಹೊಂದಿದ್ದರೆ ಪರಊರಿನ ಬೇರೆ ಬ್ಯಾಂಕಿನ ತನ್ನ ಖಾತೆಗೆ ತಕ್ಷಣ ಹಣ ಜಮೆ ಮಾಡುವ ಹಾಗೂ ಹಿಂಪಡೆಯುವ ಸೌಕರ್ಯವನ್ನೂ ಗ್ರಾಹಕ ಪಡೆಯುತ್ತಾನೆ.

ಹೀಗೆ, ಮುಂಬರುವ ದಿನಗಳಲ್ಲಿ ಈ ಸ್ವಯಂಚಲಿ ಸರಾಫ್ ಯಂತ್ರದ ಬಹುಮುಖಿ ಉಪಯೋಗಗಳಿಂದಾಗಿ ಅದು ಬ್ಯಾಂಕಿನ ಒಂದು ಅವಿಭಾಜ್ಯ ಅಂಗವಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ.

ಸಮಯದ ಉಳಿತಾಯವೂ ಇಲ್ಲಿ ಬಹು ಮುಖ್ಯ ಅಂಶವಾಗಿರುವುದರಿಂದ ಗ್ರಾಹಕ ಈ ಸ್ವಯಂಚಲಿ ಸರಾಫ್ ಯಂತ್ರದ ಸೇವೆಯಿಂದ ಸಂತೃಪ್ತನಾಗುತ್ತಾನೆ. ಕಾರ್ಯಕ್ಷಮತೆಯ ದೃಷ್ಟಿಯಿಂದಲೂ, ಕಾರ್ಯನಿರ್ವಹಣೆಯ ಸ್ವರೂಪದಿಂದಾಗಿಯೂ ಈ ಯಂತ್ರ ಗ್ರಾಹಕನ ನಿರೀಕ್ಷೆಯ ಮಟ್ಟಕ್ಕೆ ಬರುತ್ತದೆ ಎಂದು ಹೇಳಬಹುದು.

"ಸೇವೆಯಲ್ಲಿಯ ಅತಿ ಹೆಚ್ಚಿನ ಯೋಗ್ಯತೆಯಿಂದ ಸಂಸ್ಥೆ ಹೆಚ್ಚು ಕಾಲ ಬಾಳುವಂತಾಗುತ್ತದೆ" ಎನ್ನುವ ಸ್ಪರ್ಧಾತ್ಮಕ ಜಗತ್ತಿನ ಸತ್ಯದ ಬೆಳಕಿನಲ್ಲಿ ಬ್ಯಾಂಕು ಕಂಡುಕೊಂಡ ಹೊಸ ಆವಿಷ್ಕಾರವೇ ಈ ಸ್ವಯಂಚಲಿ ಸರಾಫ್ ಯಂತ್ರ ಎಂದು ಹೇಳಿದರೆ ಎಲ್ಲವನ್ನೂ ಹೇಳಿದಂತಾದೀತು. ●

ಬ್ಯಾಂಕಿನಲ್ಲಿ ಕಂಪ್ಯೂಟರೀಕರಣ

ಜೆ. ಬಿ. ನಾಯಚಳ
ಭಾರತೀಯ ಸ್ಟೇಟ್ ಬ್ಯಾಂಕ್, ವಲಯ ಕಛೇರಿ, ಹುಬ್ಬಳ್ಳಿ

ಕಂಪ್ಯೂಟರು ನಮ್ಮ ನಿತ್ಯಜೀವನದ ಅವಿಭಾಜ್ಯ ಅಂಗವಾಗುತ್ತಿದೆ. ಬ್ಯಾಂಕಿಂಗ್ ಕ್ಷೇತ್ರ ಕೂಡ ಇದಕ್ಕೆ ಹೊರತಲ್ಲ. ಆರಂಭದ ವಿರೋಧಗಳನ್ನು ದಾಟಿ ಅದು ಈಗ ನೆಲೆಗೊಳ್ಳುತ್ತಿದೆ. ಆದರೆ ಕಂಪ್ಯೂಟರೀಕರಣದಿಂದ ಕೆಲವು ಹೊಸ ಸಮಸ್ಯೆಗಳು ಹುಟ್ಟಿಕೊಂಡಿವೆ.

ಕಳೆದ ಕೆಲವು ದಶಕಗಳಲ್ಲಿ ಬ್ಯಾಂಕು ಬಹಳಷ್ಟು ಬದಲಾವಣೆಗಳನ್ನು ಕಂಡಿದೆ. ಇದು ಅಗತ್ಯವಾಗಿತ್ತು ಕೂಡ. ಬದಲಾದ ಹೊಸ ಪರಿಸ್ಥಿತಿಗಳಲ್ಲಿ ಬ್ಯಾಂಕು ಹೊಸ ಸೇವೆಗಳನ್ನು, ಕಾರ್ಯಗಳನ್ನು ನಿರ್ವಹಿಸಬೇಕಿದೆ. ಹೊಸ ವಿಶ್ವ ಆರ್ಥಿಕ ವ್ಯವಸ್ಥೆಯಲ್ಲಿ ಗಣಕಕ್ಕೆ ವಿಶೇಷ ಸ್ಥಾನವಿದೆ. ಗಣಕದ ಈ ಆವಿಷ್ಕಾರಗಳಿಗೆ ಹಲವು ರೂಪಗಳು ಲಭಿಸಿವೆ. ಸ್ವಯಂಚಾಲಿತ ಸರಾಫ್ ಯಂತ್ರ, ಸ್ವಯಂಚಾಲಿತ ತೀರುವಳಿ ಮನೆ, ಸ್ವಂತ ಚಲಿ ಲೆಜರ್ ನಮೂದು ಯಂತ್ರ ಮುಂತಾದವುಗಳು. ಬ್ಯಾಂಕು ಸೇವೆಗಳ ವಿಸ್ತರಣೆ ಈ ರೀತಿಯಿಂದಾಗಿ ಅದರ ಕಾರ್ಯಚಟುವಟಿಕೆಗಳ ವಿಸ್ತರಣೆಗೆ ಕಾರಣವಾಗಿದೆ. ಈ ವೈಜ್ಞಾನಿಕ ಅನುಕೂಲತೆಗಳು ಬ್ಯಾಂಕು ಕ್ಲಿಪ್ತ ಸಮಯದಲ್ಲಿ ಸಮರ್ಪಕ ನಿರ್ಧಾರಗಳನ್ನು ಕೈಕೊಳ್ಳಲು ನೆರವಾಗುತ್ತಿವೆ. ಬ್ಯಾಂಕಿನಲ್ಲಿ ಯಾಂತ್ರೀಕರಣದ ಮುಖ್ಯ ಉದ್ದೇಶವೇ ಮಾಹಿತಿ ಶೇಖರಣೆ ವಿಂಗಡಣೆ, ಕಾರ್ಯಾನ್ವಯನ ; ಆದುದರಿಂದ ಬ್ಯಾಂಕುಗಳು ಕಂಪ್ಯೂಟರೀಕರಣದ ಮಹತ್ತ್ವಮ ಪ್ರಯೋಜನಗಳತ್ತ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸುತ್ತಿದೆ.

ಉದಾಹರಣೆಗೆ, ಭಾರತದ ಬ್ಯಾಂಕುಗಳು ಭರದಿಂದ ಗಣಕೀಕರಣಗೊಳ್ಳುತ್ತಿವೆ. ಇದೀಗ ಭಾರತೀಯ ಸ್ಟೇಟ್ ಬ್ಯಾಂಕಿನ ಗಣಕೀಕೃತ ಶಾಖೆಗಳ ಸಂಖ್ಯೆ ಸಾವಿರ ಸಮೀಪಿಸಿದೆ. ಬ್ಯಾಂಕಿನ 25 ಶಾಖೆಗಳಲ್ಲಿ 1989ರಲ್ಲಿ ಮೊದಲು ಗಣಕ ಯಂತ್ರ ಪ್ರವೇಶ ಮಾಡಿತು. ಅಲ್ಲಿಂದ ಕಳೆದ ದಶಕದಲ್ಲಿ ಬ್ಯಾಂಕು ಗಣಕ ಯಂತ್ರ ಪರಿಚಾಲನೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಇಂದು ಈ ಬ್ಯಾಂಕು ಸಣ್ಣ ವ್ಯವಹಾರಗಳು, ಸಹಯೋಗಿ ಬ್ಯಾಂಕುಗಳೊಡನೆ ವ್ಯವಹಾರ, ವಿದೇಶಿ ವ್ಯವಹಾರಗಳು, ಎಲ್ಲದರಲ್ಲೂ ಕಂಪ್ಯೂಟರೀಕರಣವನ್ನು ಸಾಧಿಸಿದೆ.

ಬ್ಯಾಂಕುಗಳ ಈ ಕಂಪ್ಯೂಟರೀಕರಣ ಪ್ರಕ್ರಿಯೆಯ ಭರದಲ್ಲಿ ಹಲವೊಂದು ವಿಷಯಗಳು ಮಹತ್ವ ನೀಡದೆ ಮರೆತುಹೋಗುವ ಅಪಾಯವಿದೆ. ಅಂಥವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಕಂಪ್ಯೂಟರಿನ ಉಪಯೋಗ ವಿವಿಧ ಹಂತಗಳಲ್ಲಿ ಈ ರೀತಿ ನಡೆಯುತ್ತದೆ : (1) ಶಾಖಾ ಮಟ್ಟದಲ್ಲಿ, (2) ಒಂದೇ ಬ್ಯಾಂಕಿನ ಎಲ್ಲ ಶಾಖೆಗಳಲ್ಲಿ, (3) ದೇಶದ ಇಡೀ ಬ್ಯಾಂಕಿಂಗ್ ಕೈಗಾರಿಕೆಯಲ್ಲಿ.

ಆರ್ಥಿಕ ಮುಖಗಳು

ಕಂಪ್ಯೂಟರೀಕರಣದ ಆರ್ಥಿಕ ಸಮಸ್ಯೆಯನ್ನು ನಾವೀಗ ಪರಿಶೀಲಿಸೋಣ. ಮೂಲ ಬಂಡವಾಳ ವಿನಿಯೋಗದಲ್ಲೇ ಆಗಲಿ, ನಂತರದ ಹಣವಿನಿಯೋಗದಲ್ಲೇ ಆಗಲಿ, ಹಣ ಹೂಡಿಕೆ ಗಣನೀಯವಾದ ತೊಡರಾಗಿದೆ. ಈ ಗಣಕೀಕರಣವೂ ಕಾಲಕಾಲಕ್ಕೆ ಬದಲಾಗುವ ತಂತ್ರಜ್ಞಾನವನ್ನೂ ಅರಗಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಇದು ಇನ್ನೂ ವೆಚ್ಚದಾಯಕ ಅಂಶವಾಗಿದೆ. ಬ್ಯಾಂಕಿಂಗ್ ಸೇವೆ ಹೆಚ್ಚು ಹೆಚ್ಚು ಉಪಯುಕ್ತವಾಗಬೇಕಾದರೆ, ಶೀಘ್ರ ದೊರೆಯುವಂತಾಗಬೇಕಾದರೆ, ಹೆಚ್ಚು ಹೆಚ್ಚು ಗಣಕೀಕರಣ ಬ್ಯಾಂಕಿಗೆ ಅನಿವಾರ್ಯ ಎನ್ನುವ ವಾದವೂ ಇದೆ.

ಗಣಕೀಕರಣ ಕುರಿತ ತರಬೇತಿ ವೆಚ್ಚವೂ ಬಹಳ. ಇಲ್ಲಿಯೂ ಎರಡು ವಿಧದ ತರಬೇತಿಗಳು :

1 ವ್ಯಕ್ತಿ ಉಪಯೋಗಿಸಬಹುದಾದ ಗಣಕಗಳ ಬಗ್ಗೆ
2 ತಂತಾನೇ ಕಾರ್ಯನಿರ್ವಹಿಸುವ ಗಣಕಗಳ ಬಗ್ಗೆ

ಇವೆರಡೂ ಕಾರ್ಯನಿರ್ವಹಣೆ ಬ್ಯಾಂಕ್ ಸಿಬ್ಬಂದಿಗೆ ಗೊತ್ತಿರಬೇಕಾಗುತ್ತದೆ. ಪೂರ್ತಿ ಗಣಕೀಕರಣದ ಒಂದು ಮೂರಂಶದಷ್ಟಾದರೂ ಕನಿಷ್ಠವಾಗಿ ಬ್ಯಾಂಕು ಸಿಬ್ಬಂದಿ ತರಬೇತಿಗಾಗಿ ವ್ಯಯಿಸಬೇಕಾಗುತ್ತದೆಂದು ಕೆ.ಪಿ.ಎಂ.ಜಿ. ನೆಟ್‌ವರ್ಕ್ ತಿಳಿಸುತ್ತದೆ.

ಈ ಪ್ರಕ್ರಿಯೆಯಲ್ಲಿ ಕ್ರಮೇಣ ನಿರುಪಯುಕ್ತವಾಗುವ ಯಂತ್ರಭಾಗಗಳು, ಯಾಂತ್ರಿಕ ಉಪಕರಣಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರ್ಯಕ್ರಮಕ್ಕಾಗಿಯೇ ಬ್ಯಾಂಕು 'ಪುನರ್ ಸ್ಥಾಪನೆ ನಿಧಿ' ಸ್ಥಾಪಿಸಬೇಕಾಗುತ್ತದೆ. ಅಂದರೆ ಹಳೆಯ ಯಂತ್ರಗಳನ್ನು ಕಾಲಕಾಲಕ್ಕೆ ಬದಲಿಸುತ್ತಾ ಹೋಗುವದು—ಈ ಸಮಸ್ಯೆಗಳು ಎದುರಾಗುತ್ತವೆ.

ಎಲ್ಲಕ್ಕೂ ಮುಖ್ಯವಾಗಿ ಬ್ಯಾಂಕು ಸಿಬ್ಬಂದಿಯಲ್ಲಿ ಗಣಕ ಯಂತ್ರದ ಬಗ್ಗೆ ವಿಷಯ ಪರಿಜ್ಞಾನ, ತಿಳಿವಳಿಕೆ ಹೆಚ್ಚಿಸಿಕೊಳ್ಳ ಬೇಕೆಂಬ ಆಕಾಂಕ್ಷೆಯನ್ನು ಉಂಟುಮಾಡುವುದು ಬಹು ಮುಖ್ಯ. ಇದಕ್ಕಾಗಿ ಆಡಳಿತಾತ್ಮಕ ತರಬೇತಿ ಹಾಗೂ ಮೂಲ ಕಾರ್ಯ ನಿರ್ವಹಣೆ ತರಬೇತಿ ಎರಡೂ ಅತಿ ಅವಶ್ಯವಾಗಿವೆ. ಮತ್ತು ಈ ಕಾರಣಕ್ಕಾಗಿ ವಿಶಿಷ್ಟ ತರಬೇತಿ ಪಡೆದ ಅನೇಕ ಪ್ರಕಾರದ ಸಿಬ್ಬಂದಿ ವರ್ಗಗಳು ಬ್ಯಾಂಕಿಗೆ ಅವಶ್ಯವಾಗುತ್ತವೆ.

ಕೊನೆಯದಾಗಿ, ಗಣಕೀಕೃತ ಶಾಖೆಗಳ ಲೇಖಾಪರಿವೀಕ್ಷಣೆಯ ಸಮಸ್ಯೆ. ಇದಕ್ಕಾಗಿ ಯಾಂತ್ರೀಕೃತ ಶಾಖೆಗಳ ಪರಿವೀಕ್ಷಣೆಗೆಂದೇ ವಿಶೇಷ ಸೂಚನೆಗಳು, ತರಬೇತಿ ಸಂಬಂಧಿತ ಸಿಬ್ಬಂದಿಗೆ ಅವಶ್ಯ ವಾಗುತ್ತವೆ.

ಸಮರ್ಥ, ಶೀಘ್ರ ಹಾಗೂ ದಕ್ಷ ಸೇವೆಗಾಗಿ ಬ್ಯಾಂಕಿಗೆ ಈ ವಿಧದಲ್ಲಿ ಕಂಪ್ಯೂಟರು ಬಲಗೈ ಆಗಿದೆ ಎಂದರೆ ಅತಿಶಯೋಕ್ತಿ ಯೇನಲ್ಲ. ಕಾಲಕಾಲಕ್ಕೆ ಈ ವಿಧವಾಗಿ ಬದಲಾಗುತ್ತಿರುವ ಕಂಪ್ಯೂಟರ್ ಸೇವೆಗಳ ಎಲ್ಲ ವೆಚ್ಚವನ್ನೂ ಅಪ್ರತ್ಯಕ್ಷವಾಗಿ ಬ್ಯಾಂಕ್ ಗ್ರಾಹಕ ಭರಿಸಬೇಕಾಗುತ್ತದೆ ಎನ್ನುವ ಮಾತನ್ನೂ ನಾವು ಮರೆಯಲಾಗದು. ಮತ್ತು ಇದೇ ಕಾರಣದಿಂದಾಗಿ ಬ್ಯಾಂಕಿನ ಒಟ್ಟು ಲಾಭದಲ್ಲಿ ಗಣನೀಯ ಕುಸಿತವೂ ಕಂಡುಬರಬಹುದು. ಹೀಗೆ ವೆಚ್ಚ, ಗ್ರಾಹಕ, ಸ್ಪರ್ಧೆ ಈ ಮೂರು ಕ್ಷೇತ್ರಗಳಲ್ಲೂ ಬ್ಯಾಂಕು ಇಂದು ಸಮತೋಲ ಸಾಧಿಸಬೇಕಾಗಿದೆ.

ಚಿಕ್ಕ ಶಾಖೆಗಳು, ನಷ್ಟದಲ್ಲಿ ನಡೆಯುವ ಹಳ್ಳಿ ಶಾಖೆಗಳು ಈ ಅತಿರಿಕ್ತ ವೆಚ್ಚವನ್ನು ಸಧ್ಯಕ್ಕೆ ಭರಿಸುವ ಸ್ಥಿತಿಯಲ್ಲಿಲ್ಲವೆನ್ನುವುದೂ ಸತ್ಯವೇ.

ಈ ಕಂಪ್ಯೂಟರೀಕರಣ ಸಿಬ್ಬಂದಿ ವಲಯದಲ್ಲಿ ಹಾಗೂ ಗ್ರಾಹಕ ವಲಯದಲ್ಲಿ ಕೂಡಿಯೇ ಸಾಮಾಜಿಕ ಹಾಗೂ ಮಾನಸಿಕ ಪರಿ ಣಾಮಗಳನ್ನು ತರುತ್ತಿದೆ. ಸಿಬ್ಬಂದಿಗೆ ಹೇಗೋ ಹಾಗೆ ಗ್ರಾಹಕ ರಿಗೂ ತತ್ಸಂಬಂಧಿ ವಿಷಯ ಪರಿಜ್ಞಾನ, ತರಬೇತಿ ಅಗತ್ಯವಾಗು ತ್ತಿದೆ.

ಗ್ರಾಹಕರ ಜ್ಞಾನಮಟ್ಟ, ವಯೋಮಟ್ಟಕ್ಕನುಗುಣವಾಗಿ ಗಣಕ ಯಂತ್ರಗಳ ಉಪಯೋಗದ ಬಗ್ಗೆ ಮಾಹಿತಿ, ತರಬೇತಿ ನೀಡುವುದು ಕಷ್ಟಸಾಧ್ಯ. ಈ ಬಗ್ಗೆ ಯೋಚಿಸಬೇಕಾದುದೇ.

ವೈಯಕ್ತಿಕ ಸೇವೆಯನ್ನು ಅಪೇಕ್ಷಿಸುವ ವಿಶೇಷ ಗ್ರಾಹಕರಿಗೆ ಈ ಗಣಕೀಕೃತ ಸೇವೆ ಪಥ್ಯವಾಗಲಿಕ್ಕಿಲ್ಲ. ಗಣಕೀಕೃತ ವ್ಯವಸ್ಥೆಯಲ್ಲಿ ಗ್ರಾಹಕ ವ್ಯಕ್ತಿಯಾಗದೇ ಸಂಖ್ಯೆಯಾಗಿ ಉಳಿದುಬಿಡುತ್ತಾನೆ. ಲಾಗಾಯ್ತಿನಿಂದ ಬಂದ ವ್ಯವಸ್ಥೆಯನ್ನು ಗ್ರಾಹಕ ಅಷ್ಟು ಬೇಗ ಬಿಟ್ಟುಕೊಡಲಾರ. ಇದು ಕೂಡ ಒಂದು ಸಮಸ್ಯೆಯೇ. ಆದ್ದ ರಿಂದ ಮಾನವ ಶಕ್ತಿಯ ಹಾಗೂ ಗಣಕ ಶಕ್ತಿಯ ಮಿಶ್ರ ಪ್ರಯೋಗ ಬ್ಯಾಂಕಿಗೆ ಸಹ್ಯವಾದೀತೆ ? ಇದು ಆಲೋಚಿಸಬೇಕಾದ ವಿಷಯ.

ವ್ಯಾಪಾರೀ ವೃಂದಕ್ಕೆ ಇದೊಂದು ತಲೆನೋವಿನ ವಿಷಯವೇ. ಅವರು ತೀರುವಳಿಗೆ ನೀಡಿದ ಸ್ಥಳೀಯವೇ ಆಗಿರಲಿ, ಪರಸ್ಥಳದ್ದೇ ಆಗಿರಲಿ ಡ್ರಾಫ್ಟು ; ಚೆಕ್ಕು ಮೊದಲಾದವು ತಕ್ಷಣಕ್ಕೆ ಪಾವತಿ ಯಾಗುವಂತಾದರೆ ತತ್ಕಾಲಕ್ಕೆ ಹಣ ಹೊಂದಿಸುವ ಹೊಸ ಕಷ್ಟ ಅವರಿಗೆ ಪ್ರಾಪ್ತವಾಗುತ್ತದೆ. ಹದಿನೈದು ದಿನದಲ್ಲಿ ಹುಂಡಿ ಪಾವತಿ ಮಾಡುವುದು, ಇತ್ಯಾದಿ ಅನುಕೂಲಗಳು ಅವರ ಕೈ ತಪ್ಪುತ್ತವೆ.

ಹೊಸ ಯಂತ್ರಗಳ ಬಗ್ಗೆ ಅಷ್ಟು ಬೇಗ ಗ್ರಾಹಕನಿಗೆ ನಂಬಿಕೆ ಮೂಡುವುದೇ ? ಖಾತೆಗಳ ಗೋಪ್ಯತೆಯ ಬಗ್ಗೆಯೂ ಗ್ರಾಹಕ ತಲೆಕೆಡಿಸಿಕೊಳ್ಳದಿರಲಾರ. ಇದೂ ಬ್ಯಾಂಕು ಗಣಕೀಕರಣವನ್ನು ಮತ್ತಷ್ಟು ವ್ಯಾಪಕಗೊಳಿಸುವ ಮುನ್ನ ಉತ್ತರಿಸಬೇಕಾದ ಪ್ರಶ್ನೆ ಯಾಗುತ್ತದೆ. ಇಲ್ಲಿ ಪತ್ರಿಕೆಗಳ ಪ್ರಚಾರ, ಸಹಾಯ ಬ್ಯಾಂಕುಗಳಿಗೆ ಬೇಕಾಗುತ್ತದೆ. ಆದರೂ ಕಾಲಕಾಲಕ್ಕೆ ಬ್ಯಾಂಕು ನೀಡುವ ಸೇವೆ, ಸಹಕಾರಗಳ ಬಗ್ಗೆ ಗ್ರಾಹಕ ತನ್ನ ಸಂದೇಹಗಳನ್ನು, ಪ್ರಶ್ನೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗದೆ ಹೋಗಬಹುದು.

ಇನ್ನು ಉದ್ಯೋಗಿಗಳಿಗೆ ಸಂಬಂಧಿಸಿದಂತೆ : ಉದ್ಯೋಗಿಗಳ ಕಡ್ಡಾಯ ನಿವೃತ್ತಿಯಂತೂ ಶೀಘ್ರ ಯಾಂತ್ರೀಕರಣದ ಪರಿ ಣಾಮವೇ. ಬದಲಾದ ಪರಿಸ್ಥಿತಿಗಳಿಗೆ ಉದ್ಯೋಗಿಗಳು ಎಷ್ಟು ಶೀಘ್ರವಾಗಿ ಹೊಂದಿಕೊಳ್ಳುತ್ತಾರೆ ಎನ್ನುವುದೂ ಮುಖ್ಯ. ಮೆಕನ್ಸೀ ಸುಧಾರಣೆಗಳನ್ನು ಭಾರತೀಯ ಸ್ಟೇಟ್ ಬ್ಯಾಂಕು ದಿಢೀ ರಾಗಿ ಅಳವಡಿಸದಂತೆ ಅಲ್ಲಿಯ ಕಾರ್ಮಿಕ ಸಂಘಗಳು ಅಡ್ಡ ಬಂದಿರುವುದೇ ಈ ಕಾರಣಕ್ಕಾಗಿ.

ಶೀಘ್ರ ಕಂಪ್ಯೂಟರೀಕರಣದಿಂದ ಕೆಲಸದಲ್ಲಿ ಸಮಯದ ಉಳಿತಾಯವಾಗುತ್ತದೆ ನಿಜ. ಆದರೆ, ಅದನ್ನು ಉದ್ಯೋಗಿಗಳ ಮುಖಾಂತರ ಸದುಪಯೋಗಪಡಿಸುವುದು ಹೇಗೆ ? ಸಾರ್ವಜನಿಕ ಸಂಪರ್ಕ ಸಭೆಗಳಿಗಾಗಿಯೋ, ಗ್ರಾಹಕ ಬ್ಯಾಂಕು ಸಂಬಂಧ ಸುಧಾ ರಣಾ ಪ್ರಕ್ರಿಯೆಗೋ ಬಳಸುವುದೊಂದೇ ದಾರಿ. ಕಂಪ್ಯೂಟರೀ ಕರಣದ ಅಭಿವೃದ್ಧಿ ಸಂಬಂಧೀ ಚಟುವಟಿಕೆಗಳಿಗೆ ಬ್ಯಾಂಕಿನ ಈ ಹೆಚ್ಚುವರಿ ಮಾನವ ಶಕ್ತಿಯನ್ನು ಬಳಸಬಹುದಾಗಿದೆ—ಎಂದು ಅರ್ಥಶಾಸ್ತ್ರಜ್ಞ ಬ್ರೂಕ್ಸ್ ಹೇಳುತ್ತಾರೆ.

ಕಂಪ್ಯೂಟರ್ ಬಳಸುವ ಸಿಬ್ಬಂದಿ ಸ್ವಯಂ ನಿಯಂತ್ರಿತ ನಿರ್ದೇ ಶಿತ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಇದು ಮಾನಸಿಕ ಒತ್ತಡಕ್ಕೆ ದಾರಿ ಮಾಡಿಕೊಡುತ್ತದೆ. ಆಡಳಿತಾಧಿಕಾರಿಗಳು ಕಂಪ್ಯೂಟರ್ ಸಿಬ್ಬಂದಿಗೆ ಅಧಿಕಾರದ ಹಸ್ತಾಂತರಣ ಎಂದು ಈ ಪ್ರಕ್ರಿಯೆಯನ್ನು ಭಾವಿಸುವ ಅಪಾಯವಿದೆ. ಹೆಚ್ಚು ಕಾಲ ಕೆಲಸ ಮಾಡಿದ ಸಿಬ್ಬಂದಿ ಅಧಿಕಾರಿ ವರ್ಗದವರನ್ನು ಕಂಪ್ಯೂಟರ್ ಜ್ಞಾನ ಸಂಪಾದಿಸಿಕೊಂಡ ಸಿಬ್ಬಂದಿ ದಾಟಿ ಹೋಗುವ ಅಪಾಯ ಇದ್ದೇ ಇದೆ. ಸೇವಾ ಜ್ಯೇಷ್ಠತೆ ಹಾಗೂ ಕಂಪ್ಯೂಟರ್ ಬಳಕೆಯ ಜ್ಞಾನಗಳ ನಡುವೆ ತಿಕ್ಕಾಟವಾಗುವ ಸಂಭವ ನೂರಕ್ಕೆ ನೂರು ಇಲ್ಲುಂಟು.

ಗಣಕೀಕರಣದ ತಾಂತ್ರಿಕ ಕ್ಷೇತ್ರ ದಿನೇದಿನೇ ವಿಸ್ತರಿಸುತ್ತಲೇ ನಡೆದಿದೆ. ಎರಡನೆಯದಾಗಿ, ಬ್ಯಾಂಕಿನಿಂದ ಬ್ಯಾಂಕಿಗೆ ಉಪಯೋಗ

ವಾಗುತ್ತಿರುವ ಗಣಕಗಳಲ್ಲಿ ಮೂಲ ಪ್ರಭೇದಗಳಿವೆ. ಮೂರನೆಯದಾಗಿ ವ್ಯಕ್ತಿಯಿಂದ ನಡೆಸಲ್ಪಡಬಹುದಾದ ಗಣಕ ಹಾಗೂ ತಂತಾನೇ ಕಾರ್ಯನಿರ್ವಹಿಸುವ ಗಣಕ—ಎರಡರ ಬಗ್ಗೆಯೂ ಜ್ಞಾನವಿರಬೇಕು. ಈ ಮೂರೂ ಕ್ಷೇತ್ರಗಳಲ್ಲಿ ಬ್ಯಾಂಕಿನ ಸಿಬ್ಬಂದಿಗೆ ತರಬೇತಿ ನೀಡುವುದೂ ಕಷ್ಟಸಾಧ್ಯವಾದ ಕೆಲಸವೇ.

ಆಡಳಿತಾತ್ಮಕ ನಿರ್ಣಯಗಳನ್ನು ಕೈಕೊಳ್ಳುವಲ್ಲಿ ಗಣಕಗಳ ಕೆಲಸ ಏನೂ ಇಲ್ಲ. ಗಣಕ ಯಂತ್ರಗಳು ಶೀಘ್ರಗತಿಯಲ್ಲಿ ಕೆಲಸ ಮಾಡಬಲ್ಲವು; ದಕ್ಷತೆ, ನಿರ್ಣಯಾತ್ಮಕ ಶಕ್ತಿಗಾಗಿ ಪುನಃ ಆಡಳಿತ ಸಿಬ್ಬಂದಿ ಬೇಕೇಬೇಕು. ಗ್ರಾಹಕರು, ಉದ್ಯೋಗಿಗಳು ಸಂಪೂರ್ಣವಾಗಿ ಗಣಕಗಳ ಮೇಲೆ ಅವಲಂಬಿತರಾಗಬೇಕಾದಾಗ ಪ್ರಮಾದಗಳೂ ಹೆಚ್ಚಿನ ಸಂಖ್ಯೆಯಲ್ಲಿ ಘಟಿಸುವ ಸಾಧ್ಯತೆ ಇದ್ದೇ ಇದೆ.

ಸಮಸ್ಯೆಗಳು

ಈ ಹೊಸ ವ್ಯವಸ್ಥೆಯಿಂದಾಗಿ ಹೊಸದಾಗಿ ನೇಮಿತವಾದ ಗಣಕದ ಸಿಬ್ಬಂದಿ ಹೆಚ್ಚಿನ ಸಂಬಳ, ಸವಲತ್ತುಗಳನ್ನು ಕೇಳುವ ಸಾಧ್ಯತೆಯೂ ಉಂಟು. ಈಗಾಗಲೇ ಎಲ್ಲ ಬ್ಯಾಂಕುಗಳ ಸಿಬ್ಬಂದಿಗೂ ಗಣಕೀಕರಣದ ಸಲುವಾಗಿ ಒಂದು ಇನ್‌ಕ್ರಿಮೆಂಟ್ ಕೊಡಲಾಗಿದೆ.

ಇರುವ ಸಿಬ್ಬಂದಿಗೆ ಹೊಸ ಕೆಲಸಗಳನ್ನು ನೀಡುವುದರ ಜತೆಗೇ ಖಾಲಿಯಾಗುವ ಹುದ್ದೆಗಳ ಪರಿಣಾಮವಾಗಿ ಬಿಡುವ ಪಡೆಯುವ ಸಿಬ್ಬಂದಿಗೆ ಹೊಸ ಹೊಣೆ ಕೆಲಸ ವಹಿಸುವ ಜವಾಬ್ದಾರಿಯೂ ಆಡಳಿತ ಮಂಡಳಿಯದಾಗಿದೆ.

ಇಷ್ಟೆಲ್ಲ ಆಗಿಯೂ ಸಂಪೂರ್ಣ ಗಣಕೀಕೃತ ಶಾಖೆ ಎದುರಿಸುವ ಸಮಸ್ಯೆಗಳು ಹಲವಾರು. ವಿದ್ಯುತ್ ವಿತರಣಾ ವೈಫಲ್ಯ, ಯಂತ್ರದಲ್ಲಿನ ತಾಂತ್ರಿಕ ದೋಷ, ಯಾಂತ್ರಿಕ ಬೂಷ್ಟು ಉಂಟಾಗುವಿಕೆ, ಈ ಎಲ್ಲ ಕಾರಣಗಳೂ ಗಣಕದಲ್ಲಿ ಶೇಖರಿಸಲ್ಪಟ್ಟ ಬ್ಯಾಂಕಿನ ಅಮೂಲ್ಯ ದಾಖಲೆಗಳು ಹಾಳಾಗಲು ಸಾಕಷ್ಟು ಕಾರಣವಾಗಬಹುದು. ಗಣಕ ಸರಬರಾಜು ಮಾಡುವ ಕಂಪನಿ ವತಿಯಿಂದ ನೀಡತಕ್ಕಂಥ ಸೇವೆ ಈಗ ಯಾವ ಮಟ್ಟದಲ್ಲಿದೆ ಎನ್ನುವುದನ್ನು ಇಲ್ಲಿ ಬಿಡಿಸಿ ಹೇಳುವುದು ಬೇಡ.

ರಿಸರ್ವ್ ಬ್ಯಾಂಕಿನ ಕಾಲಿಗ್ರ (MICR) ಚೆಕ್ಕುಗಳ ತೀರುವಳಿ ವಿಭಾಗದ ಗಣಕ ಕೇವಲ ಎರಡು ದಿನ ರಿಪೇರಿಯಾಗದೇ ಉಳಿದಾಗ ತೀರುವಳಿಯಾಗದ ಚೆಕ್ಕುಗಳ ಒಟ್ಟು ಮೊತ್ತ ಒಂದು ಸಾವಿರ ಕೋಟಿಗೂ ಮಿಕ್ಕಿತು.

ಗಣಕಗಳನ್ನು ಕೊಳ್ಳುವ ಮೊದಲು ಬ್ಯಾಂಕು ಈ ವಿಷಯಗಳನ್ನು ತಪ್ಪದೆ ಗಮನಿಸಬೇಕು:

(1) ಅನಿವಾರ್ಯವಾದಲ್ಲಿ ಮಾತ್ರವೇ ಆಮದಾದ ಗಣಕಗಳನ್ನು ಪ್ರಯೋಗದಲ್ಲಿ ತರಬೇಕು.

(2) ಇತರ ಗಣಕಗಳೊಡನೆ ಅದಕ್ಕೆ ತುಲನಾತ್ಮಕ ಶ್ರೇಷ್ಠತೆ ಇರಬೇಕು.

(3) ಆಯಾ ಯಂತ್ರಸ್ಥಾಪನೆಯಿಂದ ಲಭಿಸಬಹುದಾದ ಅನುಕೂಲತೆಗಳ ಪರಿಣಾಮ,

(4) ಮಾರಾಟ ನಂತರದ ಸೇವೆಯು ಹಾಗೂ ಯಂತ್ರದ ಬಿಡಿಭಾಗಗಳ ಲಭ್ಯತೆಯು ಸಾಧ್ಯತೆ. ಈ ನಾಲ್ಕೂ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳದೆ ಗಣಕಗಳ ಸ್ಥಾಪನೆ ಕೈಕೊಳ್ಳಲೇಬಾರದು.

ವೈಯಕ್ತಿಕವಾಗಿ ಉಪಯೋಗಿಸಬಹುದಾದ ಗಣಕಗಳ ಇತರ ಕಂಪನಿಗಳ ಅದೇ ವಿಧದ ಕಂಪ್ಯೂಟರ್‌ಗಳಿಗಿಂತ ಮೇಲ್ಪಟ್ಟದ್ದಾಗಿರಬೇಕು. ಕಾರ್ಯಾಚರಣೆಯ ವಿಧಾನದಲ್ಲಿ ಸರಳತೆ ಅವಶ್ಯ. ಸಿದ್ಧ ಉಡುಪಿನ ತರಹ ಸಿದ್ಧ ಕಾರ್ಯಕ್ರಮಗಳನ್ನು ಗಣಕ ಯಂತ್ರಕ್ಕೆ ಒದಗಿಸಿರಬೇಕು.

ಗಣಕಗಳ ಬಳಕೆ ಕುರಿತು, ಇತರ ಬ್ಯಾಂಕುಗಳ ಜೊತೆ ತಂತ್ರ ಜ್ಞಾನವನ್ನು ಹಂಚಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ನಿಯಮಿತ ವಿದ್ಯುತ್ ಪೂರೈಕೆ, ದೋಷರಹಿತ ಟೆಲಿಫೋನ್ ಲೈನುಗಳ ಸೇವೆ, ಇವೆಲ್ಲ ಅಂಶಗಳು ರಾಷ್ಟ್ರೀಯ ಅಂತರ್ರಾಷ್ಟ್ರೀಯ ಗಣಕ ಸೇವಾ ಜಾಲವನ್ನು ವಿಸ್ತರಿಸುವಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತವೆ.

ಗಣಕೀಕರಣದ ವ್ಯವಸ್ಥೆಯಲ್ಲಿ ವಂಚನೆ ಪ್ರಕರಣಗಳೂ ಅಸಂಖ್ಯ, ಹೆರ್ನಡನ್ ಪ್ರಕಾರ ಇಂಥ ಹೆಚ್ಚಿನ ಪ್ರಕರಣಗಳನ್ನು ಬ್ಯಾಂಕುಗಳು ಸಾಮಾಜಿಕ ಪ್ರತಿಷ್ಠೆಯ ನೆವದಲ್ಲಿ ಮುಚ್ಚಿಹಾಕುತ್ತವೆ. ಸದ್ಯಕ್ಕಂತೂ ಬ್ಯಾಂಕುಗಳಲ್ಲಿ ಅಂಥ ದೊಡ್ಡ ಪ್ರಮಾಣದ ವಂಚನೆ ಪ್ರಕರಣ ಬೆಳಕಿಗೆ ಬಂದಿಲ್ಲ. ಈ ಕ್ಷೇತ್ರದಲ್ಲಿ ಸೋರಿಹೋಗುವ ಹಣದ ಪ್ರಮಾಣ ಗಣನೀಯವಾಗಬಹುದು.

ಗಣಕೀಕೃತ ಶಾಖೆಗಳ ಆಂತರಿಕ ಲೆಕ್ಕಪರಿಶೋಧನೆಗಾಗಿ ತತ್ಸಂಬಂಧಿ ಪರಿಣಿತ ಸಿಬ್ಬಂದಿಯೇ ಬೇಕು. ಮಾನವಿಕ ಬ್ಯಾಂಕು ಲೆಕ್ಕ ವಿಧಾನದಲ್ಲಿ ಚೆಕ್ಕು/ಡ್ರಾಫ್ಟುಗಳ ಕಳವೇ ದೊಡ್ಡ ಸಮಸ್ಯೆ ಎನಿಸಿದರೆ, ಕಂಪ್ಯೂಟರೀಕೃತ ಶಾಖೆಯಲ್ಲಿನ ಕಳುವಿನ ವಿಧಾನಗಳು ದಿನೇದಿನೇ ಪರಿಷ್ಕಾರಗೊಳ್ಳುತ್ತ ನಡೆಯಬಹುದು.

ಕಾನೂನಿನ ಪರಿಣಾಮಗಳು

ರಕ್ಷಣೆ, ಹೊಣೆ, ಪರಿಹಾರ ಮೊದಲಾದ ಬ್ಯಾಂಕ್ ಗಣಕೀಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗದಿಂದ ಹೆಚ್ಚಿನ ಒತ್ತಾಸೆಯೇನೂ ಇಲ್ಲಿಯವರೆಗೆ ದೊರಕಿಲ್ಲ. ಬ್ಯಾಂಕಿಂಗ್ ಕಾನೂನುಗಳು ಬ್ಯಾಂಕಿನ ದೈನಂದಿನ ವಿಷಯಗಳ ಬಗ್ಗೆ ಮಾತ್ರ ಹೇಳುತ್ತವೆ. ಇಂದಿಗೂ ಅಮೇರಿಕೆಯ ಸುಪ್ರೀಂ ಕೋರ್ಟಿನಲ್ಲಿ ದತ್ತಾಂಶ ವಿಶ್ಲೇಷಣ ಸೇವೆಯ ಅಸಂಖ್ಯ ಕೇಸುಗಳು ತೀರ್ಮಾನವಾಗದೇ

(23ನೇ ಪುಟ ನೋಡಿ)

ಸೇವಾಕಾಲದ ಮರೆಯಲಾಗದ ಅನುಭವ

ಜಿ.ಕೆ. ಮನೋಹರ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೇವಾ ಶಾಖೆ, ಬೆಂಗಳೂರು

ಯಾವುದೇ ಕ್ಷೇತ್ರದ ಪ್ರಥಮ ಅನುಭವ ಅವಿಸ್ಮರಣೀಯ. ಮೊದಮೊದಲು ಉದ್ವೇಗ, ಆಮೇಲೆ ಸ್ವರ್ಗ ಸುಖ. ಆದರೆ ಒಮ್ಮೊಮ್ಮೆ ಆ 'ಸುಖ'ದ ಸ್ವರೂಪವೇ ಬೇರೆಯಾಗಿದ್ದೀತು. ಈ ಅನುಭವವನ್ನು ಓದಿ ನೋಡಿ.

ಬ್ಯಾಂಕಿನ ಕೆಲಸ ದೊರೆತಿದ್ದೇ ಒಂದು ಅವಿಸ್ಮರಣೀಯ ಘಟನೆ. ಇನ್ನು ಇಲ್ಲಿನ ಸೇವಾವಧಿಯ ಸಮಯದ ಬಗ್ಗೆ ಹೇಳುವುದಾದರೆ ಬ್ಯಾಂಕಿನ ಶಾಖೆಗಳಲ್ಲಿ ಕೆಲಸ ಮಾಡುವುದು, ಒಂದು ಉತ್ತಮ ಅನುಭವ, ಸವಾಲಿನ ಸಂಕೇತ, ಮುದನೀಡುವಂತಹುದು, ಈ ಸಂದರ್ಭದಲ್ಲಿ ಆಗುವ ಕೆಲವು ಘಟನೆಗಳು ಪ್ರಮುಖವೂ, ಚೇತೋಹಾರಿಯೂ ಆದವು, ಮರೆಯಲಾಗದಂತಹವು.

ಒಂದು ದಿನ ನಾನು ನಗದಿದಾರನಾಗಿ ಸೇವೆ ಸಲ್ಲಿಸಬೇಕಾಗಿತ್ತು. ಅದೇ ಮೊದಲ ದಿನ ಹಣದ ಜೊತೆ ಕಳೆಯಬೇಕಾಗಿತ್ತು. ನನಗೋ ಆ ಕೆಲಸ ಎಂದರೆ ಮೊದಲಿಂದಲೂ ಭಯ, ನಡುಕ. ಲೆಕ್ಕಾಚಾರ ತಪ್ಪಾಗಿ ಒಂದಕ್ಕೆರಡು ಪಾವತಿ ಮಾಡಿದರೆ ? ಎಂದು. ಅದಕ್ಕೇ ಏನಾದರೊಂದು ನೆಪ ಒಡ್ಡಿ ಮುಂದೂಡುತ್ತಾ ಬಂದಿದ್ದೆ. ಅಲ್ಲದೆ "ಭದ್ರತಾಹಣ"ವನ್ನೂ ವಾಪಸು ಪಡೆದದ್ದಾಗಿತ್ತು. ಅಲ್ಲೇ ಇದ್ದ ದೇವರ ಪಠಕ್ಕೆ ನಮಸ್ಕಾರ ಹಾಕಿ ಕೆಲಸ ಪ್ರಾರಂಭಿಸಿದೆ. ಆ ಒಂದೇ ದಿನದ ಅನುಭವ ಕೆಲಸದ ವಿವಿಧ ರೂಪುರೇಷೆಗಳ ಪರಿಚಯ ಮಾಡಿಕೊಟ್ಟಿತು.

ದೊಡ್ಡ ಮೊತ್ತದ ಹಣ ಸ್ವೀಕರಿಸಿ, ಆಮೆಯ ವೇಗದಿಂದ ಎಣಿಸುತ್ತಿದ್ದೆ. ತಕ್ಷಣ ಎಂದೂ ನೋಡಿರದ ದೊಡ್ಡ ವಿಚಿತ್ರ ಬಣ್ಣದ ನೋಟು ನನ್ನ ಕಣ್ಣಿಗೆ ಬಿತ್ತು. ಪ್ರಾಯಶಃ ಇದೊಂದು ಖೋಟಾ ನೋಟಿರಬೇಕೆಂದು ತಿಳಿದು ನನ್ನ ಸಂಪೂರ್ಣ ಬುದ್ಧಿಮಂತಿಕೆಯನ್ನು ಉಪಯೋಗಿಸಿ 'ತುರ್ತು ಕರೆಗಂಟೆ'ಯನ್ನು ಒತ್ತಿದೆ. ಒಂದೇ ನೆಗೆತದಲ್ಲಿ ಶಾಖಾವ್ಯವಸ್ಥಾಪಕರು ಇತರ ಸಿಬ್ಬಂದಿಗಳು ಹಾರಿ ಬಂದರು. ಕಾವಲುಗಾರ ಬಾಗಿಲನ್ನು ಭದ್ರಪಡಿಸಿ ತನ್ನ ಬಂದೂಕಿನೊಡನೆ ಕೌಂಟರ್ ಬಳಿ ಬಂದು ಏನಾಯಿತೆಂದು ವಿಚಾರಿಸಿದ. ನಾನು "ದೀಪಾ" ಸಂಚಿಕೆಯಲ್ಲಿ ನನ್ನ ಹೆಸರು ಹಾಗೂ ಭಾವಚಿತ್ರ ಬರುವುದರ ಬಗ್ಗೆ ಆಲೋಚಿಸುತ್ತಾ ಹೆಮ್ಮೆಯಿಂದ ಸಂತೋಷದಿಂದ ನೋಟನ್ನು ಎತ್ತಿ ತೋರಿಸಿದೆ. ಎಲ್ಲರೂ ಘೊಳ್ಳನೆ ನಕ್ಕರು. ಹಾಗೂ ಕೆಲವರು ಕೆಂಡ ಕಾರಿದರು. ಅನಂತರ ಅದು ಹೊಸದಾಗಿ ಬಿಡುಗಡೆ ಮಾಡಿದ್ದ 500 ರೂಪಾಯಿ ನೋಟೆಂದು ತಿಳಿದು ಎಲ್ಲರೆದುರು ತಲೆತಗ್ಗಿಸಬೇಕಾಯಿತು.

ಇದಾದ ಸ್ವಲ್ಪ ಹೊತ್ತಿನ ನಂತರ ಇನ್ನೊಂದು ಪಾವತಿಗಾಗಿ ಹಣ ಎಣಿಸುತ್ತಿದ್ದೆ. ಅಭ್ಯಾಸವಿಲ್ಲದ ಪ್ರಯುಕ್ತ ಕೈ ಬೆರಳುಗಳು ನೋಯುತ್ತಿದ್ದವು ಹಾಗೂ ಹೀಗೂ ಪರೀಕ್ಷೆ ಎಂಬಂತೆ ಕಾರ್ಯ ಮುಂದುವರಿಸಿದೆ. ಇದ್ದಕ್ಕಿದ್ದಂತೆ ಒಬ್ಬ ಹುಡುಗ ಕೈ ಒಳಚಾಚುತ್ತಾ ಹೇಳಿದ "ರ್ರೀ, ನೂರು ರೂ.ಗೆ ಚಿಲ್ಲರೆ ಕೊಡ್ರಿ." ಒಂದು ನೋಟಿನ ಕಂತೆಯನ್ನು 82ರ ವರೆಗೆ ಎಣಿಸಿದ್ದೆ. ಅವನತ್ತ ನೋಡಿದೆ. ಎಣಿಸಿದ್ದು ಮರೆತೆ. ಸರಿ ಮತ್ತೆ ಶುರುಮಾಡಿದೆ. ಅವನು ಇನ್ನೊಮ್ಮೆ ಮಗದೊಮ್ಮೆ ಕೇಳಿದ. ಅಂತೂ ತಪ್ಪಿಲ್ಲದೇ ಎಣಿಸಿ ಮುಗಿಸಿದೆ. ನನಗೋ ಬಳಲಿ ಬೆವರುವ ಕೆಲಸ. ಮಧ್ಯೆ ಇಂತಹವರ ಕಾಟ, ಕೋಪ ಮಿತಿಮೀರಿತ್ತು. ಧೈರ್ಯದಿಂದ ಕೋಪದಿಂದ ಕೇಳಿಯೇಬಿಟ್ಟೆ. "ಯಾಕಪ್ಪಾ ಎಣಿಸುತ್ತಿರುವುದು ಕಣ್ಣಿಗೆ ಕಾಣಿಸುತ್ತಿರಲಿಲ್ಲವೋ:" ಎಂದು. ಹುಡುಗ ವಿರಾಮದಿಂದ ಹೇಳಿದ. "ನಿಮಗೆ ಕಿವಿ ಕೇಳಿಸುವುದಿಲ್ಲವೇನೋ" ಎಂದ. ಮೂರು ಸಾರಿ ಕೇಳಿದೆ ಎಂದ. ಮೆಣಸಿನಕಾಯಿ ತಿಂದ ಹಾಗೆ ನನಗಾಯ್ತು. ಸದ್ಯ ಹತ್ತಿರ ಸಹ-ಉದ್ಯೋಗಿಗಳು ಇರಲಿಲ್ಲ. ಇಲ್ಲವಾದರೆ ಇನ್ನೊಮ್ಮೆ ಮಾನ ಹೋಗುವ ಪರಿಸ್ಥಿತಿ ಬರುವುದಿತ್ತು.

ಸಮಯ ಸುಮಾರು ಎರಡಾಗಿತ್ತು. ಬಹಳ ಸಮಯದ ನಂತರ ಕೈಗಳಿಗೆ, ತಲೆಗೆ ಬಿಡುವು ದೊರೆತಿತ್ತು. ಇನ್ನು ಅರ್ಧಗಂಟೆ ಮಾತ್ರ ಎಂದು ಅತ್ತಿತ್ತ ಕಣ್ಣಾಡಿಸಿದೆ. ಎದುರಿಗೆ ದೃಷ್ಟಿ ಹರಿಸಿದಾಗ ಒಬ್ಬ ಸುಂದರ ಹುಡುಗಿ ಕಂಡಳು. ಕೈಯಲ್ಲಿದ್ದ ಪೆನ್ನು ಮತ್ತು ಪರ್ಸ್‌ನಿಂದ ಹಿಡಿದು, ತೊಟ್ಟಿದ್ದ ಬಟ್ಟೆ,ಹಣೆಯಬೊಟ್ಟು ಸಂಪೂರ್ಣವಾಗಿ ನೀಲಿ ಬಣ್ಣದ ಮ್ಯಾಚಿಂಗ್ ಆಗಿತ್ತು. ನೋಡುತ್ತಲೇ 25 ನಿಮಿಷಗಳು ಕ್ಷಣಗಳಂತೆ ಓಡಿತ್ತು. ಇಷ್ಟು ಹೊತ್ತಿನಿಂದ ಆಕೆ ಅರಚುತ್ತಾ ಇರಬಹುದೆಂದು ಯೋಚಿಸಿದ ನಂತರ "ಶರವೇಗದ ಸರದಾರನಂತೆ" ಸೇವೆ ಸಲ್ಲಿಸುವ ನೆನಪಾಗಿ ಮುಗುಳ್ನಗೆಯಿಂದ, "ಏನಾಗಬೇಕಿತ್ತು" ಎಂದೆ. ಅವಳ ಕಿರು ಮಂದಹಾಸದ ಹಿಂದಿದ್ದ ಸುಂದರ ದಂತಪಂಕ್ತಿ, ನಕ್ಕಾಗ ಕಂಡ ಕೆನ್ನೆಯ ಗುಳಿಗಳು, ಕಣ್ಣಿನ ತೀಕ್ಷ್ಣತೆ, ಗುರುಗ್ರಹಕ್ಕೆ ಷೂಮೇಕರ್ ಧೂಮಕೇತುವಿನ 21 ತುಣುಕುಗಳು ಹೊಡೆದಂತೆ ನನ್ನ ಮೈಯಲ್ಲಿ ನಾಟಿತು.

ಒಂದು ಸಾವಿರದ ಚೆಕ್ಕಿತ್ತು ಎಂದಳು. ಛೇ! ಕೇವಲ ಇಷ್ಟು ಹಣಕ್ಕೆ ಅರ್ಧ–ಮುಕ್ಕಾಲು ಗಂಟೆ ಸತಾಯಿಸುವ ಇತರರನ್ನು ಶಪಿಸಿ, ಇಸ್ತ್ರಿ ಮಾಡಿದಂತೆ ಕಾಣುವ ನೂರರ ಇಪ್ಪತ್ತು ನೋಟುಗಳನ್ನು ತೆಗೆದು ಮುಂದೆ ಹಿಡಿದೆ. 'ಪರವಾಗಿಲ್ಲ. ಚೆಕ್ಕು ಪಾಸಾಗಿ ಬರಲಿ' ಎಂದಳು. ನನಗೋ, ತ್ವರಿತಸೇವೆಯಿಂದ ಹಿಂದೆ ಅವಳ ಮನಸಿನ ಮೇಲೆ ಪರಿಣಾಮ ಬೀರುವುದು. ಮುಖ್ಯವಾಗಿ ಹಿಂಜರಿಯುತ್ತಲೇ ಹಣ ಪಡೆದು ಮತ್ತೆ ಅದೇ ನಗು ನಕ್ಕು "ಥ್ಯಾಂಕ್ಸ್" ಎಂದಳು. "ಯು ಆರ್ ವೆಲ್‌ಕಂ ಅಗೈನ್" ಎಂಬ ಮಾತು ನನಗೆ ತಿಳಿಯದೆ ಬಾಯಿಂದ ಬಂದಿತ್ತು. ಏತನ್ಮಧ್ಯೆ ಟೋಕನ್ ಪಡೆಯುವುದೂ ಮರೆತು ಹೋಗಿತ್ತು.

ಹೊಟ್ಟೆ ಚುರ್ರ್ ಎಂದಿತ್ತು. ಹಣವನ್ನು ಭದ್ರಪಡಿಸಿ ಊಟಕ್ಕೆ ಹೊರಟೆ. ಗಂಟಲಲ್ಲಿ ಇಳಿಯಲಿಲ್ಲ. ಸುಂದರಿಯ ಮುಖದರ್ಶನದಿಂದಲೇ ಅರ್ಧ ಹೊಟ್ಟೆ ತುಂಬಿತ್ತು. ಅವಳ ನೆನಪಿನಲ್ಲೇ ನನ್ನಷ್ಟಕ್ಕೆ ನಕ್ಕು ಹಾಗೂ ಹೀಗೂ ಡಬ್ಬ ಖಾಲಿ ಮಾಡಿದೆ. ರಮೇಶ ಕೇಳಿದ—"ಏನಮ್ಮಾ ತುಂಬಾ ಖುಷಿಯಾಗಿದ್ದೀಯ?" 'ಹಾಗೇನಿಲ್ಲ' ಎಂದೆ. ಬಂದು ಹಣವನ್ನು ಚುಕ್ತಾ ಮಾಡುವಾಗ ಕೊನೆಯಲ್ಲಿ ಸಾವಿರ ರೂಪಾಯಿ ಕಡಿಮೆ ಇತ್ತು. ಏನಾದರೂ ಚೆಕ್ಕುಗಳು ಪಾವತಿಗೆ ಉಂಟೇ ಎಂದು ಕೇಳಿದೆ. ಯಾರಿಂದಲೂ ಸೊಲ್ಲಿಲ್ಲ. ಸ್ವಲ್ಪ ಎದೆಯಲ್ಲಿ ಮಿಂಚು ಹೊಡೆದಂತಾಯಿತು. ಇನ್ನೊಮ್ಮೆ ನೋಡಲು ಹೇಳಿದೆ, ಮತ್ತೆ ಅದೇ ಮೌನ. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯ್ತು.

ಸುಂದರಿಗೆ ಪಾವತಿ ಮಾಡಿದ ವಿಷಯ ತಿಳಿಸಲು ಸ್ವಾಭಿಮಾನ-ಮರ್ಯಾದೆಯ ಸವಾಲಾಗಿತ್ತು. ಅವಳು ಕೈಕೊಟ್ಟು ಕೋಮಲೆಯಾಗಿದ್ದಳು. ಏನು ಮಾಡುವುದೆಂದು ಯೋಚಿಸುವಾಗಲೇ ಮ್ಯಾನೇಜರ್ 'ಕ್ಯಾಷ್ ಕ್ಲೋಸ್ ಮಾಡಬೇಡ್ರೀ, ಬೋನಸ್ ಪಾವತಿ ಮಾಡಬೇಕು' ಎಂದರು.

"ಅಬ್ಬಾ! ಬದುಕಿದೆಯಾ ಬಡಜೀವವೇ" ಎಂದು ಮನಸ್ಸಿನಲ್ಲೇ ಬೋನಸ್ ದೇವರನ್ನು ನೆನೆದು ಸಾವಿರ ರೂ.ಗಳನ್ನು ಡಬ್ಬಕ್ಕೆ ಹಾಕಿ ಮಿಕ್ಕಿದ್ದು ಜೇಬಿನಲ್ಲಿರಿಸಿದೆ! ●

ಬ್ಯಾಂಕಿನಲ್ಲಿ ಕಂಪ್ಯೂಟರೀಕರಣ

(21ನೇ ಪುಟದಿಂದ ಮುಂದುವರಿದಿದೆ)

ಉಳಿದಿವೆಯಂತೆ. ಭಾರತದಲ್ಲೂ ಇದೇ ಸ್ಥಿತಿ ನಿರ್ಮಾಣವಾಗುವ ದಿನಗಳು ದೂರವಿಲ್ಲ.

ವಂಚನೆ ಅಥವಾ ಹಣದ ದುರುಪಯೋಗದ ಇಂಥ ಸಂದರ್ಭಗಳಲ್ಲಿ ಕಾಯ್ದೆಯ ನಿಲುವೇನು? ವಿಮಾ ಸಂಸ್ಥೆಯ ಪರಿಹಾರದ ಪಾಲು ಎಷ್ಟು? ಗ್ರಾಹಕರೇ ಆಗಲಿ ಬ್ಯಾಂಕೇ ಆಗಲಿ ಎಷ್ಟರ ಮಟ್ಟಿಗೆ ಹೊಣೆ? ಅದೂ ಅಲ್ಲದೆ ಗ್ರಾಹಕನ ಯಾ ಬ್ಯಾಂಕಿನ ವ್ಯಯಕ್ತಿಕ ನಷ್ಟ—ಇವೆಲ್ಲವುಗಳಿಗೂ ಕೋರ್ಟು ಏನೂ ಉತ್ತರಿಸದೆ ಮೌನವಾಗುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ, ಬ್ಯಾಂಕಿನಲ್ಲಿ ಗಣಕೀಕರಣ ಪ್ರಕ್ರಿಯೆಯನ್ನು ಮತ್ತಷ್ಟು ತೀವ್ರಗೊಳಿಸುವುದು ಅಂದುಕೊಂಡಷ್ಟು ಸುಲಭವಲ್ಲ. ವಿಷಯಕ್ಕೆ ಸಂಬಂಧಿಸಿದಂತೆ ಇರುವ ಅನೇಕ ಆಳವಾದ ಸಮಸ್ಯೆಗಳಿಗೆ, ತೊಡಕುಗಳಿಗೆ ಉತ್ತರಗಳನ್ನು ಇನ್ನೂ ಹುಡುಕಬೇಕಿದೆ. ಆದ್ದರಿಂದ ಗಣಕೀಕರಣವನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಾವು ಜಾಗರೂಕತೆಯಿಂದ ಅಳವಡಿಸಬೇಕಾಗಿದೆ. ●

ಚಂದಾದಾರರಲ್ಲಿ

ನಿಮ್ಮ ವಿಳಾಸದಲ್ಲಿ ಬದಲಾವಣೆಯಾದಾಗ ದಯವಿಟ್ಟು ನಿಮ್ಮ ಹೊಸ ವಿಳಾಸವನ್ನು ನಮಗೆ ತಿಳಿಸಿ.

ಸಮನ್ವಯ ಸಮಿತಿ
ಭಾರತೀಯ ಸ್ಟೇಟ್ ಬ್ಯಾಂಕ್, ಕನ್ನಡ ಸಂಘಗಳು
೨೨ ಜಯಚಾಮರಾಜೇಂದ್ರ ರಸ್ತೆ
ಬೆಂಗಳೂರು ೫೬೦ ೦೦೨

R. N. 36702/83

Printed by : G. H. KRISHNAMURTHY
Mysore Printing and Publishing House
Ashoka Road, Mysore-570 001